# ಅನುಕ್ರಮಣಿಕೆ

## ಭಾಗ I-ಸಾಮಾನ್ಯ

ಪ್ರಕರಣಗಳು:
1. ಚಿಕ್ಕ ಹೆಸರು ಮತ್ತು ಪ್ರಾರಂಭ
2. ಅರ್ಥ ವಿವರಣೆ
3. ಅನ್ವಯ
4. ಯಾವುದೇ ಕಾನೂನಿನ ಮೂಲಕ ಪ್ರದತ್ತವಾದ ಹಕ್ಕುಗಳ ಮತ್ತು ವಿಶೇಷಾಧಿಕಾರಗಳ ರಕ್ಷಣೆ

ಭಾಗ II-ವರ್ಗೀಕರಣ

5. ಸೇವೆಗಳ ವರ್ಗೀಕರಣ
6. ರಾಜ್ಯ ಸಿವಿಲ್ ಸೇವೆಗಳ ರಚನೆ

ಭಾಗ III-ನೇಮಕ ಪ್ರಾಧಿಕಾರಿಗಳು

7. ರಾಜ್ಯ ಸಿವಿಲ್ ಸೇವೆಗಳ ರಚನೆ

ಭಾಗ IV-ಶಿಸ್ತು-ದಂಡನೆಗಳು

8. ದಂಡನೆಗಳ ಸ್ವರೂಪ
9. ಶಿಸ್ತು ಪ್ರಾಧಿಕಾರಿಗಳು
10. ಅಮಾನತು
10ಎ. ಪ್ರಾಧಿಕಾರಿಯು ವ್ಯವಹರಣೆಗಳನ್ನು ಹೂಡುವುದು
11. ಕಠಿಣ ದಂಡನೆಗಳನ್ನು ವಿಧಿಸಲು ಕಾರ್ಯವಿಧಾನ
11ಎ. ವಿಚಾರಣಾ ವರದಿಯ ಮೇಲೆ ಕ್ರಮ
12. ಲಘು ದಂಡನೆಗಳನ್ನು ವಿಧಿಸಲು ಕಾರ್ಯವಿಧಾನ
12ಎ. ಆದೇಶಗಳನ್ನು ತಿಳಿಸುವುದು
13. ಜಂಟಿ ವಿಚಾರಣೆ
14. ಕೆಲವು ಸಂದರ್ಭಗಳಲ್ಲಿ ವಿಶೇಷ ಕಾರ್ಯವಿಧಾನ
14ಎ ಲೋಕಾಯುಕ್ತಕ್ಕೆ ವಹಿಸಿಕೊಡಲಾದ ಪ್ರಕರಣಗಳಲ್ಲಿ ಕಾರ್ಯವಿಧಾನ
15. ಎರವಲು ಮೇಲೆ ಹೋಗಿರುವ ಅಧಿಕಾರಿಗಳಿಗೆ ಸಂಬಂಧಿಸಿದ ಉಪಬಂಧಗಳು
16. ಎರವಲು ಮೇಲೆ ಬಂದಿರುವ ಅಧಿಕಾರಿಗಳಿಗೆ ಸಂಬಂಧಿಸಿದ ಉಪಬಂಧಗಳು
16ಎ. ಮರುನೇಮಕವಾದ ಅಧಿಕಾರಿಗಳಿಗೆ ಸಂಬಂಧಿಸಿದ ಉಪಬಂಧ

ಭಾಗ V-ಅಪೀಲುಗಳು

17. ಯಾವ ಆದೇಶಗಳ ವಿರುದ್ಧ ಅಪೀಲಿಗೆ ಅವಕಾಶವಿಲ್ಲವೋ ಆ ಆದೇಶಗಳು
18. ದಂಡನೆಗಳನ್ನು ವಿಧಿಸುವ ಆದೇಶಗಳ ವಿರುದ್ಧ ಅಪೀಲುಗಳು
19. ಇತರೆ ಆದೇಶದ ವಿರುದ್ಧ ಅಪೀಲು
20. ಅಪೀಲುಗಳಿಗೆ ಕಾಲಪರಿಮಿತಿ
21. ಅಪೀಲಿನ ನಮೂನೆ ಮತ್ತು ಒಳಾಂಶಗಳು
22. ಅಪೀಲುಗಳನ್ನು ಸಲ್ಲಿಸುವುದು
23. ಅಪೀಲುಗಳನ್ನು ತಡೆಹಿಡಿಯುವುದು
24. ಅಪೀಲುಗಳ ರವಾನೆ
25. ಅಪೀಲುಗಳ ಪರಿಶೀಲನೆ

ಭಾಗ VI-ಪುನರವಲೋಕನ

26. ಪುನರವಲೋಕನ
27. ಶಿಸ್ತು ಪ್ರಕರಣಗಳಲ್ಲಿ ಆದೇಶಗಳ ಪುನರವಲೋಕನ

ಭಾಗ VII-ಸಂಕೀರ್ಣ

28. ನ್ಯಾಯವಾದಿಯ ಹಾಜರಾತಿ
28ಎ ಆದೇಶ, ನೋಟೀಸುಗಳು, ಮುಂತಾದವುಗಳ ಜಾರಿ
28ಬಿ ಕಾಲಮಿತಿಯನ್ನು ಸಡಿಲಿಸಲು ಮತ್ತು ವಿಳಂಬವನ್ನು ಮನ್ನಾ ಮಾಡಲು ಅಧಿಕಾರ

28ಸಿ ಆಯೋಗದ ಸಲಹೆಯ ಪ್ರತಿಯನ್ನು ಒದಗಿಸುವುದು
28ಡಿ ಕರ್ನಾಟಕ ನ್ಯಾಯಾಂಗ ಸೇವೆ, ಮುಂತಾದವುಗಳ ಸದಸ್ಯರಿಗೆ ಸಂಬಂಧಿಸಿದ ಉಪಬಂಧ
29. ನಿರಸನ ಮತ್ತು ಉಳಿಸುವಿಕೆ

**ಕರ್ನಾಟಕ ಸರ್ಕಾರ**
**ಸಾಮಾನ್ಯಾಡಳಿತ ಇಲಾಖೆ**
**ಅಧಿಸೂಚನೆ**

**ಕ್ರಮಾಂಕ: ಜಿಎಡಿ(ಒಎಂ)-1 ಸಿಎಆರ್ 57, ಬೆಂಗಳೂರು,**
**ದಿನಾಂಕ: ಡಿಸೆಂಬರ್ 10, 1957**

ಕರ್ನಾಟಕ ರಾಜ್ಯಪಾಲರು ಭಾರತ ಸಂವಿಧಾನದ 309ನೇ ಅನುಚ್ಛೇದದ ಪರಂತುಕದಿಂದ ಪ್ರದತ್ತವಾದ ಅಧಿಕಾರಗಳನ್ನು ಮತ್ತು ಅವರನ್ನು ಈ ಸಂಬಂಧದಲ್ಲಿ ಶಕ್ತಗೊಳಿಸುವ ಇತರ ಎಲ್ಲ ಅಧಿಕಾರಗಳನ್ನು ಚಲಾಯಿಸಿ, ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತಾರೆ. ಎಂದರೆ:-

## ಭಾಗ-I
## ಸಾಮಾನ್ಯ

1. **ಚಿಕ್ಕ ಹೆಸರು ಮತ್ತು ಪ್ರಾರಂಭ:**

(ಎ) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ಎಂದು ಕರೆಯತಕ್ಕದ್ದು.

(ಬಿ) ಅವು ಕೂಡಲೇ ಜಾರಿಗೆ ಬರತಕ್ಕದ್ದು.

2. **ಅರ್ಥ ವಿವರಣೆ:-**

ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) ಸರ್ಕಾರಿ ನೌಕರನಿಗೆ ಸಂಬಂಧಿಸಿದಂತೆ "ನೇಮಕ ಪ್ರಾಧಿಕಾರಿ" ಎಂದರೆ:-

(i) ಯಾವ ಸೇವೆಯಲ್ಲಿ ಸರ್ಕಾರಿ ನೌಕರನು ತತ್ಕಾಲದಲ್ಲಿ ಸದಸ್ಯನಾಗಿರುವನೋ ಆ ಸೇವೆಗೆ ಅಥವಾ ಸೇವೆಯ ಯಾವ ಶ್ರೇಣಿಯಲ್ಲಿ ಆ ಸರ್ಕಾರಿ ನೌಕರನನ್ನು ತತ್ಕಾಲದಲ್ಲಿ ಸೇರಿಸಲಾಗಿದೆಯೋ ಆ ಶ್ರೇಣಿಗೆ ನೇಮಕಗಳನ್ನು ಮಾಡಲು ಅಧಿಕಾರ ಹೊಂದಿರುವ ಪ್ರಾಧಿಕಾರಿ ಅಥವಾ
(ii) ಸರ್ಕಾರಿ ನೌಕರನು ತತ್ಕಾಲದಲ್ಲಿ ಯಾವ ಹುದ್ದೆಯನ್ನು ಧಾರಣ ಮಾಡಿರುವನೋ ಆ ಹುದ್ದೆಗೆ ನೇಮಕಗಳನ್ನು ಮಾಡಲು ಅಧಿಕಾರ ಹೊಂದಿರುವ ಪಾಧಿಕಾರಿ, ಅಥವಾ
(iii) ಸರ್ಕಾರಿ ನೌಕರನನ್ನು ಸಂದರ್ಭಾನುಸಾರ, ಅಂಥ ಸೇವೆಗೆ, ಹುದ್ದೆಯ ಶ್ರೇಣಿಗೆ ಅಥವಾ ಹುದ್ದೆಗೆ ನೇಮಕ ಮಾಡಿದ ಪ್ರಾಧಿಕಾರಿ

–ಇವರುಗಳಲ್ಲಿ ಯಾರು ಉನ್ನತ ಪ್ರಾಧಿಕಾರಿಯೋ ಆ ಪ್ರಾಧಿಕಾರಿ ಎಂದು ಅರ್ಥ;

(ಬಿ) 'ಆಯೋಗ' ಎಂದರೆ ಕರ್ನಾಟಕ ಲೋಕಸೇವಾ ಆಯೋಗ ಎಂದು ಅರ್ಥ;

(ಸಿ) ಸರ್ಕಾರಿ ನೌಕರನಿಗೆ ದಂಡನೆಯನ್ನು ವಿಧಿಸುವುದಕ್ಕೆ ಸಂಬಂಧಿಸಿದಂತೆ 'ಶಿಸ್ತು ಪ್ರಾಧಿಕಾರಿ' ಎಂದರೆ ಅವನಿಗೆ ಆ ದಂಡನೆಯನ್ನು ವಿಧಿಸಲು ಈ ನಿಯಮಗಳ ಮೇರೆಗೆ ಸಕ್ಷಮನಾದ ಪ್ರಾಧಿಕಾರಿ ಎಂದು ಅರ್ಥ;

(ಡಿ)'ಸರ್ಕಾರಿ ನೌಕರ' ಎಂದರೆ ಕರ್ನಾಟಕ ರಾಜ್ಯದ ಸಿವಿಲ್ ಸೇವೆಯ ಸದಸ್ಯನಾಗಿರುವ ಅಥವಾ ಕರ್ನಾಟಕ ರಾಜ್ಯದ ವ್ಯವಹಾರಗಳ ಸಂಬಂಧದಲ್ಲಿ ಸಿವಿಲ್ ಹುದ್ದೆಯನ್ನು ಧಾರಣ ಮಾಡಿರುವ ವ್ಯಕ್ತಿ ಎಂದು ಅರ್ಥ ಮತ್ತು ಅದರಲ್ಲಿ ಯಾರ ಸೇವೆಗಳನ್ನು ತಾತ್ಕಾಲಿಕವಾಗಿ ಭಾರತ ಸರ್ಕಾರದ, ಬೇರೆ ರಾಜ್ಯ ಸರ್ಕಾರದ, ಸ್ಥಳೀಯ ಪ್ರಾಧಿಕಾರದ, ನಿಗಮಿತವಾಗಿರುವ ಅಥವಾ ಆಗಿಲ್ಲದಿರುವ ಯಾರೇ ವ್ಯಕ್ತಿಯ ಅಥವಾ ವ್ಯಕ್ತಿಗಳ ವಶಕ್ಕೆ ವಹಿಸಿಕೊಡಲಾಗಿದೆಯೋ ಆ ಯಾರೇ ವ್ಯಕ್ತಿಯನ್ನು ಮತ್ತು ಕೇಂದ್ರ ಸರ್ಕಾರದ ಅಥವಾ ಬೇರೆ ರಾಜ್ಯ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಅಥವಾ ಇತರ ಪ್ರಾಧಿಕಾರದ ಸೇವೆಯಲ್ಲಿರುವ ಯಾರ ಸೇವೆಗಳನ್ನು ತಾತ್ಕಾಲಿಕವಾಗಿ ಕರ್ನಾಟಕ ಸರ್ಕಾರದ ವಶಕ್ಕೆ ವಹಿಸಿಕೊಡಲಾಗಿದೆಯೋ ಆ ಯಾರೇ ವ್ಯಕ್ತಿಯನ್ನು ಸಹ ಒಳಗೊಳ್ಳುತ್ತದೆ;

(ಇ) 'ರಾಜ್ಯಪಾಲರು' ಎಂದರೆ ಕರ್ನಾಟಕ ರಾಜ್ಯಪಾಲರು ಎಂದು ಅರ್ಥ;

[1][XXX][1]

1. **ಅಧಿಸೂಚನೆ ಸಂಖ್ಯೆ: ಜಿಎಡಿ 28 ಎಸ್‌ಎಸ್‌ಆರ್ 69, ದಿನಾಂಕ: 12.12.1973ರ ಮೂಲಕ ಬಿಟ್ಟುಬಿಡಲಾಗಿದೆ. ಕೆಜಿಡಿ 24.01.74.**

(ಎಫ್) 'ಅನುಸೂಚಿ' ಎಂದರೆ ಈ ನಿಯಮಗಳ ಅನುಸೂಚಿ ಎಂದು ಅರ್ಥ;

(ಜಿ) 'ಸೇವೆ' ಎಂದರೆ ರಾಜ್ಯದ ಸಿವಿಲ್ ಸೇವೆ ಎಂದು ಅರ್ಥ.

**3. ಅನ್ವಯ.-** (1) ಈ ನಿಯಮಗಳು,-

[1][(ಎ) ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು ಮತ್ತು ಇತರ ವಿಭಾಗೀಯ, ಜಿಲ್ಲಾ ಮುದ್ರಣಾಲಯಗಳು, ಲೇಖನ ಸಾಮಗ್ರಿ ಮಳಿಗೆಗಳು ಮತ್ತು ಪುಸ್ತಕ ಮಳಿಗೆಗಳು-ಇವುಗಳನ್ನು ಬಿಟ್ಟು ಔದ್ಯಮಿಕ ನಿಯೋಜನೆ ( ಸ್ಥಾಯೀ ಆದೇಶಗಳ) ಅಧಿನಿಯಮ, 1946ರ (ಕೇಂದ್ರ ಅಧಿನಿಯಮ 1946 XX) ಉಪಬಂಧಗಳು ಸರ್ಕಾರದ ಔದ್ಯಮಿಕ ಉದ್ಯಮಗಳಲ್ಲಿ ನಿಯೋಜಿತರಾಗಿರುವ ಯಾವ ವ್ಯಕ್ತಿಗಳಿಗೆ ಅನ್ವಯವಾಗುವವೋ ಆ ವ್ಯಕ್ತಿಗಳನ್ನು][1];

(ಬಿ) ಸಾಂದರ್ಭಿಕ ನಿಯೋಜನೆಯಲ್ಲಿರುವ ವ್ಯಕ್ತಿಗಳನ್ನು;

(ಸಿ) ಒಂದು ತಿಂಗಳಿಗಿಂತ ಕಡಿಮೆ ನೋಟೀಸಿನ ಮೇಲೆ ಸೇವೆಯಿಂದ ಬಿಡುಗಡೆಗೆ ಒಳಪಡುವ ವ್ಯಕ್ತಿಗಳನ್ನು:

(ಡಿ) ಯಾರ ನೇಮಕಕ್ಕಾಗಿ ಮತ್ತು ಈ ನಿಯಮಗಳ ವ್ಯಾಪ್ತಿಗೊಳಪಡುವ ಇತರೆ ವಿಷಯಗಳ ಬಗ್ಗೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಅಥವಾ ಯಾವುದೇ ಕರಾರಿನಲ್ಲಿ, ಅಂಥ ಕಾನೂನಿನ ಅಥವಾ ಅಂಥ ಕರಾರಿನ ವ್ಯಾಪ್ತಿಗೊಳಪಡುವ ವಿಷಯಗಳ ಬಗ್ಗೆ ವಿಶೇಷ ಉಪಬಂಧಗಳನ್ನು ಮಾಡಲಾಗಿದೆಯೋ ಆ ವ್ಯಕ್ತಿಗಳನ್ನು; ಮತ್ತು

(ಇ) ಅಖಿಲ ಭಾರತ ಸೇವೆಯ ಸದಸ್ಯರನ್ನು

- ಹೊರತುಪಡಿಸಿ ಎಲ್ಲ ಸರ್ಕಾರಿ ನೌಕರರಿಗೆ ಅನ್ವಯವಾಗುತ್ತವೆ.

(2) (1) ನೇ ಉಪನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಈ ನಿಯಮಗಳು (1)ನೇ ಉಪನಿಯಮದ (ಎ) ಅಥವಾ (ಡಿ) ವಿನಾಯಿತಿಯೊಳಗೆ ಬರುವ ಸೇವೆಗೆ ಅಥವಾ ಹುದ್ದೆಗೆ ತಾತ್ಕಾಲಿಕವಾಗಿ ವರ್ಗಾವಣೆಯಾದ ಯಾವ ಇತರ ಸರ್ಕಾರಿ ನೌಕರರಿಗೆ, ಅಂಥ ವರ್ಗಾವಣೆಯಾಗದಿದ್ದರೆ ಈ ನಿಯಮಗಳು ಹೇಗೆ ಅನ್ವಯವಾಗಬಹುದಿತ್ತೋ ಹಾಗೂ ಅವರಿಗೆ ಅನ್ವಯವಾಗತಕ್ಕದ್ದು.

(3)(1)ನೇ ಉಪನಿಯಮದಲ್ಲಿ ಏನೇ ಒಳಗೊಂಡಿದ್ದರೂ, ರಾಜ್ಯಪಾಲರು, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆಯ ಮೂಲಕ, ರಾಜ್ಯಪಾಲರು ಯಾರಿಗೆ ಈ ನಿಯಮಗಳನ್ನು ಸೂಕ್ತವಾಗಿ ಅನ್ವಯಿಸಲು ಸಾಧ್ಯವಾಗದೆಂದು ಘೋಷಿಸಬೇಕಾಗುತ್ತದೋ ಆ ಯಾವುದೇ ಹುದ್ದೆಯ ಧಾರಕನನ್ನು ಅಥವಾ ಹುದ್ದೆಗಳ ಯಾವುದೇ ವರ್ಗಗಳ ಧಾರಕರನ್ನು ಈ ಎಲ್ಲಾ ನಿಯಮಗಳ ಅಥವಾ ಈ ನಿಯಮಗಳ ಪೈಕಿ ಯಾವುದೇ ನಿಯಮದ ಜಾರಿಯಿಂದ ಹೊರತುಪಡಿಸಬಹುದು, ಮತ್ತು ಅಂಥ ನಿಯಮಗಳು ಆ ತರುವಾಯ ಹಾಗೆ ಹೊರತುಪಡಿಸಿರುವಷ್ಟರ ಮಟ್ಟಿಗೆ ಅನ್ವಯವಾಗುವುದು ನಿಂತುಹೋಗತಕ್ಕದ್ದು;

ಪರಂತು, ಅಂಥ ಯಾವುದೇ ಘೋಷಣೆಯನ್ನು ನಿವೃತ್ತಿ ವೇತನದ ಹುದ್ದೆಯ ಅಥವಾ ಪೂರ್ಣಕಾಲಿಕ ಖಾಯಂ ಹುದ್ದೆಯ ಧಾರಕನ ಸಂಬಂಧದಲ್ಲಿ ಮಾಡತಕ್ಕದ್ದಲ್ಲ.

(4) ಯಾವುದೇ ಸಂದೇಹವು, ಎಂದರೆ,-

(ಎ) ಈ ನಿಯಮಗಳು ಯಾರೋ ವ್ಯಕ್ತಿಗೆ ಅನ್ವಯವಾಗುತ್ತವೆಯೇ; ಮತ್ತು

(ಬಿ) ಈ ನಿಯಮಗಳು ಅನ್ವಯವಾಗುವ ಯಾರೇ ವ್ಯಕ್ತಿಯು ಒಂದು ನಿರ್ದಿಷ್ಟ ಸೇವೆಗೆ ಸೇರಿದವನೇ ಅಥವಾ ಎರಡು ಅಥವಾ ಹೆಚ್ಚು ಸೇವೆಗಳ ಪೈಕಿ ಅಂಥ ವ್ಯಕ್ತಿಯು ಯಾವ ಸೇವೆಗೆ ಸೇರಿದ್ದಾನೆ

-ಎಂಬ ಬಗ್ಗೆ ಯಾವುದೇ ಸಂದೇಹ ಉಂಟಾದರೆ ಆ ವಿಷಯವನ್ನು ರಾಜ್ಯಪಾಲರಿಗೆ ಉಲ್ಲೇಖಿಸತಕ್ಕದ್ದು ಮತ್ತು ಆ ಬಗ್ಗೆ ಅವರ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

..........................................................................................................................................................

1. **ಅಧಿಸೂಚನೆ ಸಂಖ್ಯೆ: ಡಿಪಿಎಆರ್ 13 ಎಸ್‌ಡಿಇ 2007, ದಿನಾಂಕ; 12.05.2008ರ ಮೂಲಕ ಪ್ರತಿಯೋಜಿಸಲಾಗಿದೆ.**

**4. ಯಾವುದೇ ಕಾನೂನಿನ ಮೂಲಕ ಪ್ರದತ್ತವಾದ ಹಕ್ಕುಗಳ ಮತ್ತು ವಿಶೇಷಾಧಿಕಾರಗಳ ರಕ್ಷಣೆ:-**

ಈ ನಿಯಮಗಳಲ್ಲಿರುವುದು ಯಾವುದೂ, ಯಾರೇ ಸರ್ಕಾರಿ ನೌಕರನು ಯಾವ ಹಕ್ಕಿಗೆ ಅಥವಾ ವಿಶೇಷಾಧಿಕಾರಕ್ಕೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಹಕ್ಕುಳ್ಳವನಾಗಿರುವನೋ ಆ ಯಾವುದೇ ಹಕ್ಕಿಗೆ ಅಥವಾ ವಿಶೇಷಾಧಿಕಾರಕ್ಕೆ ಅವನನ್ನು ವಂಚಿತನನ್ನಾಗಿಸುವ ರೀತಿಯಲ್ಲಿ ಜಾರಿಗೆ ಬರತಕ್ಕದ್ದಲ್ಲ.

## ಭಾಗ-II
## ವರ್ಗೀಕರಣ

**'[1][5. ಸೇವೆಗಳ ವರ್ಗೀಕರಣ.-**

(1) ಕರ್ನಾಟಕ ರಾಜ್ಯದ ಸಿವಿಲ್ ಸೇವೆಗಳನ್ನು ಈ ಮುಂದಿನಂತೆ ವರ್ಗೀಕರಿಸತಕ್ಕದ್ದು;-

(i) ರಾಜ್ಯ ಸಿವಿಲ್ ಸೇವೆಗಳು, ಸಮೂಹ-**ಎ**

(ii) ರಾಜ್ಯ ಸಿವಿಲ್ ಸೇವೆಗಳು, ಸಮೂಹ-**ಬಿ**

(iii) ರಾಜ್ಯ ಸಿವಿಲ್ ಸೇವೆಗಳು, ಸಮೂಹ - **ಸಿ** ಮತ್ತು

(iv) ರಾಜ್ಯ ಸಿವಿಲ್ ಸೇವೆಗಳು, ಸಮೂಹ **ಡಿ**

(2) ಒಂದು ಸೇವೆಯು ಒಂದಕ್ಕಿಂತ ಹೆಚ್ಚು ಶ್ರೇಣಿಗಳನ್ನು ಒಳಗೊಂಡಿದ್ದರೆ ಬೇರೆ ಬೇರೆ ಶ್ರೇಣಿಗಳನ್ನು ಬೇರೆ ಬೇರೆ ಸಮೂಹಗಳಲ್ಲಿ ಸೇರಿಸಬಹುದು.

[2][(3) ರಾಜ್ಯ ಸಿವಿಲ್ ಸೇವೆಗಳು

(ಎ) ಸಮೂಹ "ಎ"ಯು ರೂ. 52650-1250-53900-1450-62600-1650-72500-1900-83900-2200-97100 ರ ಮತ್ತು ಅದಕ್ಕೂ ಮೇಲ್ಪಟ್ಟ ವೇತನ ಶ್ರೇಣಿಗಳನ್ನು ಹೊಂದಿರುವ ಹುದ್ದೆಗಳನ್ನು ಒಳಗೊಂಡಿರತಕ್ಕದ್ದು.

(ಬಿ) ಸಮೂಹ "ಬಿ"ಯು ರೂ. 40900-1100-46400-1250-53900-1450-62600-1650-72500-1900-78200ರ ಮತ್ತು ಅದಕ್ಕೂ ಮೇಲ್ಪಟ್ಟ ವೇತನ ಶ್ರೇಣಿಗಳನ್ನು ಆದರೆ ರೂ. 52650-1250-53900-1450-62600-1650-72500-1900-83900-2200-97100ಕ್ಕಿಂತ ಕೆಳಗಿನ ವೇತನ ಶ್ರೇಣಿಯನ್ನು ಹೊಂದಿರುವ ಹುದ್ದೆಗಳನ್ನು ಒಳಗೊಂಡಿರತಕ್ಕದ್ದು.

(ಸಿ) ಸಮೂಹ "ಸಿ"ಯು ರೂ. 21400-500-22400-550-24600-600-27000-650-29600-750-32600-850-36000-950-39800-1100-42000 ರ ವೇತನ ಶ್ರೇಣಿಗಿಂತ ಮೇಲ್ಪಟ್ಟ ವೇತನ ಶ್ರೇಣಿಗಳನ್ನು ಆದರೆ 40900-1100-46400-1250-53900-1450-62600-1650-72500-1900-78200ಕ್ಕಿಂತ ಕೆಳಗಿನ ವೇತನ ಶ್ರೇಣಿಯನ್ನು ಹೊಂದಿರುವ, ಆದರೆ ಅನುಸೂಚಿ-IV ರಲ್ಲಿ ನಿರ್ದಿಷ್ಟಪಡಿಸಿರುವ ಹುದ್ದೆಗಳನ್ನು ಹೊರತುಪಡಿಸಿದ ಹುದ್ದೆಗಳನ್ನು ಒಳಗೊಂಡಿರತಕ್ಕದ್ದು.

(ಡಿ) ಸಮೂಹ "ಡಿ"ಯು ಅನುಸೂಚಿ-IV ರಲ್ಲಿ ನಿರ್ದಿಷ್ಟಪಡಿಸಿರುವ ಹುದ್ದೆಗಳನ್ನು ಮತ್ತು ರೂ. 17000-400-18600-450-20400-500-22400-550-24600-600-27000-650-28950 ಕ್ಕಿಂತ ಮೇಲ್ಪಟ್ಟು ವೇತನ ಶ್ರೇಣಿಗಳನ್ನು ಆದರೆ ರೂ. 21400-500-22400-550-24600-600-27000-650-29600-750-32600-850-36000-950-39800-1100-42000 ಕ್ಕಿಂತ ಕೆಳಗಿನ ವೇತನ ಶ್ರೇಣಿಯನ್ನು ಹೊಂದಿರುವ ಹುದ್ದೆಗಳನ್ನು ಒಳಗೊಂಡಿರತಕ್ಕದ್ದು.

**ವಿವರಣೆ:-** ಈ ಉಪನಿಯಮ ಉದ್ದೇಶಗಳಿಗಾಗಿ "ವೇತನ ಶ್ರೇಣಿ" ಎಂದರೆ ಕರ್ನಾಟಕ ಸಿವಿಲ್ ಸೇವಾ (ಪರಿಷ್ಕೃತ ವೇತನ) ನಿಯಮಗಳು, 2018ರಲ್ಲಿ ಮತ್ತು ಅದಕ್ಕೆ ಸಂಬಂಧಿಸಿದ ಆದೇಶಗಳಲ್ಲಿ ಹೇಳಿರುವ ವಿವಿಧ ಹುದ್ದೆಗಳಿಗೆ ಸಂಬಂಧಿಸಿದಂತೆ ನಿಗಧಿಪಡಿಸಿದ ಪರಿಷ್ಕೃತ ವೇತನ ಶ್ರೇಣಿ][2].

**ಟಿಪ್ಪಣಿ.-** ಈ ನಿಯಮಗಳಲ್ಲಿ ಮತ್ತು ಈ ನಿಯಮಗಳು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಎಲ್ಲಾ ಇತರ ನಿಯಮಗಳಲ್ಲಿ, ಆದೇಶಗಳಲ್ಲಿ, ಅನುಸೂಚಿಗಳಲ್ಲಿ, ಅಧಿಸೂಚನೆಗಳಲ್ಲಿ, ವಿನಿಯಮಗಳಲ್ಲಿ ಅಥವಾ ಸೂಚನೆಗಳಲ್ಲಿ ರಾಜ್ಯ ಸಿವಿಲ್ ಸೇವೆಗಳ ವರ್ಗ-**I**ಕ್ಕೆ ವರ್ಗ-**II**ಕ್ಕೆ, ವರ್ಗ-**III**ಕ್ಕೆ ಮತ್ತು ವರ್ಗ-**IV**ಕ್ಕೆ ಮಾಡಿದ ಎಲ್ಲ ಉಲ್ಲೇಖಗಳನ್ನು ಅನುಕ್ರಮವಾಗಿ ರಾಜ್ಯ ಸಿವಿಲ್ ಸೇವೆಗಳ ಸಮೂಹ-**ಎ**ಗೆ, ಸಮೂಹ-**ಬಿ**ಗೆ, ಸಮೂಹ-**ಸಿ**ಗೆ ಹಾಗೂ ಸಮೂಹ-**ಡಿ**ಗೆ ಮಾಡಿರುವ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು ಮತ್ತು ಈ ಸಂದರ್ಭದಲ್ಲಿ ಅದರಲ್ಲಿನ "ವರ್ಗಕ್ಕೆ ಅಥವಾ ವರ್ಗಗಳಿಗೆ" ಮಾಡಿದ ಯಾವುದೇ ಉಲ್ಲೇಖವನ್ನು ಸಂದರ್ಭಾನುಸಾರ "ಸಮೂಹಕ್ಕೆ ಅಥವಾ ಸಮೂಹಗಳಿಗೆ" ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.][1]

..................................................................................................................................

1. **ಅಧಿಸೂಚನೆ ಸಂಖ್ಯೆ: ಡಿಪಿಎಆರ್ 70 ಎಸ್‌ಎಸ್‌ಆರ್ 79, ದಿನಾಂಕ: 15.06.1981ರ ಮೂಲಕ (25.06.1981 ರಿಂದ ಜಾರಿಗೆ ಬರುವಂತೆ) ಪ್ರತಿಯೋಜಿಸಲಾಗಿದೆ. (ಜಿಎಸ್ ಆರ್ ಸಂಖ್ಯೆ 149, ದಿನಾಂಕ: 15.06.1981**
2. **ಅಧಿಸೂಚನೆ ಸಂಖ್ಯೆ: ಡಿಪಿಎಆರ್ 27 ಎಸ್‌ಡಿಇ 2018, ದಿನಾಂಕ: 08.04.2019ರ ಮೂಲಕ ಪ್ರತಿಯೋಜಿಸಲಾಗಿದೆ.**

**6. ರಾಜ್ಯ ಸಿವಿಲ್ ಸೇವೆಗಳ ರಚನೆ:-**

ರಾಜ್ಯ ಸಿವಿಲ್ ಸೇವೆಗಳ ಸಮೂಹಗಳು **ಎ, ಬಿ, ಸಿ** ಮತ್ತು **ಡಿ** ಇವು ಅನುಸೂಚಿಗಳು **I, II** ಮತ್ತು **III** ರಲ್ಲಿ ನಿರ್ದಿಷ್ಟಪಡಿಸಿದ ಸೇವೆಗಳನ್ನು ಮತ್ತು ಹುದ್ದೆಗಳನ್ನು ಒಳಗೊಳ್ಳತಕ್ಕದ್ದು.

## ಭಾಗ-III
## ನೇಮಕ ಪ್ರಾಧಿಕಾರಿಗಳು

**7. ರಾಜ್ಯ ಸಿವಿಲ್ ಸೇವೆಗಳಿಗೆ ನೇಮಕಗಳು:-**

(1) ಅನ್ಯಥಾ ಉಪಬಂಧಿಸಿದ್ದ ಹೊರತು, ರಾಜ್ಯ ಸಿವಿಲ್ ಸೇವೆಗಳ ಸಮೂಹ **'ಎ'** ಮತ್ತು ಸಮೂಹ **'ಬಿ'**ಗೆ ಎಲ್ಲ ಮೊದಲ ನೇಮಕಗಳನ್ನು ಸರ್ಕಾರವು ಮಾಡತಕ್ಕದ್ದು:

ಪರಂತು, ರಾಜ್ಯ ಸಿವಿಲ್ ಸೇವೆಗಳ ಸಮೂಹ 'ಬಿ' ಯ ಅಡಿಯಲ್ಲಿನ ಯಾವುವೇ ಹುದ್ದೆಗಳ ಸಂಬಂಧದಲ್ಲಿ, ಇತರ ಯಾವುದೇ ನೇಮಕ ಪ್ರಾಧಿಕಾರಿಯನ್ನು ನಿರ್ದಿಷ್ಟಪಡಿಸಿದ್ದರೆ, ಅಂತಹ ಹುದ್ದೆಗಳಿಗೆ ಮೊದಲ ನೇಮಕಗಳನ್ನು ಹಾಗೂ ನಿರ್ದಿಷ್ಟಪಡಿಸಿದ ಪ್ರಾಧಿಕಾರಿಯು ಮಾಡತಕ್ಕದ್ದು.

(2) ರಾಜ್ಯ ಸಿವಿಲ್ ಸೇವೆಗಳ **'ಸಿ'** ಮತ್ತು **'ಡಿ'** ಸಮೂಹಗಳಿಗೆ ಎಲ್ಲ ಮೊದಲ ನೇಮಕಗಳನ್ನು [1][XXX][1] **II** ಮತ್ತು **III**ನೇ ಅನುಸೂಚಿಗಳ 2ನೇ ಅಂಕಣದಲ್ಲಿ ನಮೂದಿಸಿದ ಪ್ರಾಧಿಕಾರಿಗಳು ಮಾಡತಕ್ಕದ್ದು.

..................................................................................................................................

1. **ಅಧಿಸೂಚನೆ ಸಂಖ್ಯೆ: ಜಿಎಡಿ 50 ಎಸ್‌ಎಸ್‌ಆರ್ 74 (ಜಿಎಸ್‌ಆರ್ ಸಂ.265), ದಿನಾಂಕ: 2-9-1975ರ ಮೂಲಕ (18.09.1975 ರಿಂದ ಪರಿಣಾಮಕಾರಿಯಾಗುವಂತೆ) ಬಿಟ್ಟುಬಿಡಲಾಗಿದೆ.**

## ಭಾಗ-IV
## ಶಿಸ್ತು-ದಂಡನೆಗಳು

**8. ದಂಡನೆಗಳ ಸ್ವರೂಪ,-**

ಸಮಂಜಸ ಹಾಗೂ ಸಾಕಷ್ಟು ಕಾರಣಗಳಿಗಾಗಿ ಮತ್ತು ಇಲ್ಲಿ ಇನ್ನು ಮುಂದೆ ಉಪಬಂಧಿಸಿದಂತೆ, ಸರ್ಕಾರಿ ನೌಕರರ ಮೇಲೆ ಈ ಮುಂದಿನ ದಂಡನೆಗಳ ಪೈಕಿ [2][ ಒಂದು ಅಥವಾ ಹೆಚ್ಚು ದಂಡನೆಗಳನ್ನು][2] ವಿಧಿಸಬಹುದು, ಎಂದರೆ:-

(i) ರಾಜ್ಯ ಸಿವಿಲ್ ಸೇವೆಗಳ ಸಮೂಹ-'**ಡಿ**'ಗೆ ಸೇರಿದ ಸರ್ಕಾರಿ ನೌಕರರ ಸಂದರ್ಭದಲ್ಲಿ ಜುಲ್ಮಾನೆ;

(ii) ವಾಗ್ದಂಡನೆ;

[2](iii) ವೇತನ ಬಡ್ತಿಗಳನ್ನು ತಡೆಹಿಡಿಯುವುದು;

(iiiಎ) ಬಡ್ತಿಯನ್ನು ತಡೆಹಿಡಿಯುವುದು;][2]

(iv) ನಿರ್ಲಕ್ಷ್ಯದಿಂದ ಅಥವಾ ಆದೇಶಗಳ ಉಲ್ಲಂಘನೆಯಿಂದ ರಾಜ್ಯ ಸರ್ಕಾರಕ್ಕೆ ಅಥವಾ ಕೇಂದ್ರ ಸರ್ಕಾರಕ್ಕೆ, ಯಾವುದೇ ಇತರ ರಾಜ್ಯ ಸರ್ಕಾರಕ್ಕೆ, ಯಾರೇ ವ್ಯಕ್ತಿಗೆ, ನಿಕಾಯಕ್ಕೆ, ಪ್ರಾಧಿಕಾರಿಗೆ ಯಾವ ಅಧಿಕಾರಿಯ ಸೇವೆಯನ್ನು ಎರವಲು ನೀಡಲಾಗಿದೆಯೋ ಅವುಗಳಿಗೆ ಉಂಟಾದ ಯಾವುದೇ ಹಣಕಾಸಿನ ನಷ್ಟವನ್ನು ಪೂರ್ಣವಾಗಿ ಅಥವಾ ಭಾಗಶಃ ವೇತನದಿಂದ ವಸೂಲಿ ಮಾಡುವುದು;

[6][**ಸೂಚನೆ:** "ಹಣಕಾಸಿನ ನಷ್ಟ" ಎಂದರೆ, ಸರ್ಕಾರಿ ನೌಕರನಿಂದ ಉಂಟಾದ ನಷ್ಟದ ಮೇಲೆ ಪ್ರತಿ ವರ್ಷಕ್ಕೆ ಶೇಕಡ ಎಂಟರಂತೆ ಅಂಥ ನಷ್ಟ ಉಂಟಾದ ದಿನಾಂಕದಿಂದ ಬಡ್ಡಿ ಮತ್ತು ಅದು ಆ ಬಡ್ಡಿಯನ್ನು ಒಳಗೊಳ್ಳತಕ್ಕದ್ದು.][6]

[4][(iv-ಎ) ಒಂದು ಅವಧಿಗೆ ಕಾಲಿಕವೇತನ ಶ್ರೇಣಿಯಲ್ಲಿ ಕೆಳಗಿನ ಹಂತಕ್ಕೆ ಇಳಿಸುವುದು, ಅಂಥ ಅವಧಿಯಲ್ಲಿ ಇಳಿಸಿದ ಆ ವೇತನಕ್ಕೆ ಸಂಬಂಧಿಸಿದಂತೆ ಆ ಸರ್ಕಾರಿ ನೌಕರನು ವೇತನ ಬಡ್ತಿಗಳನ್ನು ಗಳಿಸುವನೇ ಇಲ್ಲವೇ ಅಥವಾ ಆ ವೇತನವು ಸ್ಥಿರವಾಗಿ ಉಳಿಯುವುದೇ ಎಂಬ ಬಗ್ಗೆ ನಿರ್ದಿಷ್ಟ ನಿರ್ದೇಶನದೊಂದಿಗೆ ಮತ್ತು ದಂಡನೆಯ ಅವಧಿಯು ಸಮಾಪ್ತವಾದ ಮೇಲೆ ಆ ಇಳಿಕೆಯು ಅವನ ವೇತನದ ಮುಂದಿನ ವೇತನ ಬಡ್ತಿಗಳನ್ನು ಮುಂದಕ್ಕೆ ಹಾಕುವ ಪರಿಣಾಮ ಹೊಂದಿರುವುದೇ ಅಥವಾ ಇಲ್ಲವೇ ಎಂಬ ಬಗ್ಗೆ ಹೆಚ್ಚಿನ ನಿರ್ದೇಶನದ ಸಹಿತ ಹಾಗೆ ಕೆಳಗಿನ ಹಂತಕ್ಕೆ ಇಳಿಸುವುದು][4].

[2][(v) ಕೆಳಗಿನ ಕಾಲಿಕ ವೇತನ ಶ್ರೇಣಿಗೆ, ಹುದ್ದೆಯ ಶ್ರೇಣಿಗೆ, ಹುದ್ದೆಗೆ ಅಥವಾ ಸೇವೆಗೆ ಇಳಿಸುವುದು, ಅದು, ಅನ್ಯಥಾ ನಿರ್ದೇಶಿಸಿದ್ದ ಹೊರತು, ಈ ಮುಂದಿನವುಗಳಿಗೆ ಸಂಬಂಧಿಸಿದಂತೆ ಇನ್ನೂ ಹೆಚ್ಚಿನ ನಿರ್ದೇಶನಗಳ ಸಹಿತ ಅಥವಾ ನಿರ್ದೇಶನಗಳಿಲ್ಲದೆಯೇ ಆ ಸರ್ಕಾರಿ ನೌಕರನನ್ನು ಯಾವ ಕಾಲಿಕವೇತನ ಶ್ರೇಣಿಯಿಂದ, ಹುದ್ದೆಯ ಶ್ರೇಣಿಯಿಂದ, ಹುದ್ದೆಯಿಂದ ಆಥವಾ ಸೇವೆಯಿಂದ ಇಳಿಸಲಾಯಿತೋ ಅದಕ್ಕೆ ಅವನು ಬಡ್ತಿ ಹೊಂದಲು ಪ್ರತಿಷೇಧ ಆಗತಕ್ಕದ್ದು:-

(ಎ) ಜೇಷ್ಠತೆ ಮತ್ತು ಸರ್ಕಾರಿ ನೌಕರರನ್ನು ಯಾವ ವೇತನ ಶ್ರೇಣಿಗೆ, ಹುದ್ದೆಗೆ ಶ್ರೇಣಿಗೆ, ಹುದ್ದೆಗೆ ಅಥವಾ ಸೇವೆಗೆ ಇಳಿಸಲಾಯಿತೋ ಅದರ ವೇತನ;

(ಬಿ) ಸರ್ಕಾರಿ ನೌಕರರನ್ನು ಯಾವ ವೇತನ ಶ್ರೇಣಿಗೆ, ಹುದ್ದೆಯ ಶ್ರೇಣಿಗೆ, ಹುದ್ದೆಗೆ ಅಥವಾ ಸೇವೆಗೆ ಇಳಿಸಲಾಯಿತೋ ಅದಕ್ಕೆ ಸಂಬಂಧಿಸಿದಂತೆ ಪುನಃ ಸ್ಥಾಪನೆಯ ಷರತ್ತುಗಳು ಮತ್ತು ಆ ವೇತನ ಶ್ರೇಣಿಗೆ, ಹುದ್ದೆಯ ಶ್ರೇಣಿಗೆ, ಹುದ್ದೆಗೆ ಅಥವಾ ಸೇವೆಗೆ ಅಂಥ ಪುನಃ ಸ್ಥಾಪನೆಯಾದ ಮೇಲೆ ಅವನ ಜ್ಯೇಷ್ಠತೆ ಮತ್ತು ವೇತನ;][2]

(vi) ಕಡ್ಡಾಯ ನಿವೃತ್ತಿ;

(vii) ಮುಂದೆ ಉದ್ಯೋಗಕ್ಕೆ ಅನರ್ಹತೆಯಾಗದ ಹಾಗೆ ಸೇವೆಯಿಂದ ತೆಗೆದು ಹಾಕುವುದು;

(viii) ಸಾಮಾನ್ಯವಾಗಿ ಮುಂದೆ ಉದ್ಯೋಗಕ್ಕೆ ಅನರ್ಹತೆಯಾಗತಕ್ಕ ರೀತಿಯಲ್ಲಿ ಸೇವೆಯಿಂದ ವಜಾ ಮಾಡುವುದು;

[1][ಪರಂತು, ಶಿಸ್ತು ಪ್ರಾಧಿಕಾರಿಯ ಆದೇಶದಲ್ಲಿ ನಮೂದಿಸಬೇಕಾದ ತದ್ವಿರುದ್ಧವಾದ ವಿಶೇಷ ಮತ್ತು ಸಾಕಷ್ಟು ಕಾರಣಗಳು ಇಲ್ಲದಿರುವಾಗ, (vi) ರಿಂದ (viii) ರ ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿ, ರುಜುವಾತಾದ ಭಷ್ಟಾಚಾರದ ಆರೋಪಕ್ಕಾಗಿ ಯಾವುದೇ ದಂಡನೆಯನ್ನು ವಿಧಿಸತಕ್ಕದ್ದಲ್ಲ.][1]

[3][**ವಿವರಣೆ 1**][3].- [5][ಈ ಪರಂತುಕದ ಉದ್ದೇಶಗಳಿಗಾಗಿ "ಭ್ರಷ್ಟಾಚಾರ" ಎಂಬ ಪದಾವಳಿಯು ಭ್ರಷ್ಟಚಾರ ಪ್ರತಿಬಂಧ ಅಧಿನಿಯಮ, 1988 (ಕೇಂದ್ರ ಅಧಿನಿಯಮ

1988ರ 49)ರ 13ನೇ ಪ್ರಕರಣದಲ್ಲಿ "ಲೋಕ ನೌಕರನಿಂದ ಆಪರಾಧಿಕ ದುರ್ನಡತೆ" ಎಂಬ ಪದಾವಳಿಗೆ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು.][5]

[3][**ವಿವರಣೆ 2**][3]- ಈ ಮುಂದಿನವುಗಳು ಈ ನಿಯಮದ ಅರ್ಥವ್ಯಾಪ್ತಿಯಲ್ಲಿ ದಂಡನೆಯಾಗತಕ್ಕದ್ದಲ್ಲ:-

(i) ಸರ್ಕಾರಿ ನೌಕರನ ಸೇವೆಗೆ ಅಥವಾ ಹುದ್ದೆಗೆ ಸಂಬಂಧಪಡುವ ನಿಯಮಗಳಿಗೆ ಅಥವಾ ಆದೇಶಗಳಿಗೆ ಅಥವಾ ಅವನ ನೇಮಕದ ನಿಬಂಧನೆಗಳಿಗೆ ಅನುಸಾರವಾಗಿ ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣನಾಗಲು ತಪ್ಪಿದಕ್ಕಾಗಿ ಅವನ ವೇತನ ಬಡ್ತಿಗಳನ್ನು ತಡೆಹಿಡಿಯುವುದು;

(ii) ಸರ್ಕಾರಿ ನೌಕರನು ಕಾಲಿಕ ವೇತನ ಶ್ರೇಣಿಯಲ್ಲಿ ದಕ್ಷತಾ ರೇಖೆಯನ್ನು ದಾಟಲು ಅರ್ಹನಲ್ಲವೆಂಬ ಕಾರಣಕ್ಕಾಗಿ ಅವನನ್ನು ಆ ದಕ್ಷತಾ ರೇಖೆಯಲ್ಲೇ ತಡೆಯುವುದು;

(iii) ಒಬ್ಬ ಸರ್ಕಾರಿ ನೌಕರನು ಬಡ್ತಿಗೆ ಅರ್ಹನಾಗಿರುವಂಥ ಸೇವೆಗೆ, ಹುದ್ದೆಯ ಶ್ರೇಣಿಗೆ ಅಥವಾ ಹುದ್ದೆಗೆ ಅವನ ಪ್ರಕರಣವನ್ನು ಪರಿಶೀಲಿಸಿದ ತರುವಾಯ, ಮೂಲ ಹುದ್ದೆಯಲ್ಲಾಗಲೀ ಅಥವಾ ಸ್ಥಾನಾಪನ್ನ ಹುದ್ದೆಯಲ್ಲಾಗಲೀ ಬಡ್ತಿ ನೀಡದಿರುವುದು;

(iv) ಮೇಲಿನ ಸೇವೆಯಲ್ಲಿ, ಹುದ್ದೆಯ ಶ್ರೇಣಿಯಲ್ಲಿ ಅಥವಾ ಹುದ್ದೆಯಲ್ಲಿ ಸ್ಥಾನಪನ್ನನಾಗಿರುವ ಸರ್ಕಾರಿ ನೌಕರನನ್ನು ಅಧಿವಿಚಾರಣೆಯ ತರುವಾಯ ಅಂಥ ಮೇಲಿನ ಸೇವೆಗೆ, ಹುದ್ದೆಯ ಶ್ರೇಣಿಗೆ ಅಥವಾ ಹುದ್ದೆಗೆ ಸೂಕ್ತನಲ್ಲವೆಂಬ ಕಾರಣಕ್ಕಾಗಿ ಅಥವಾ ಅವನ ನಡತೆಗೆ ಸಂಬಂಧಿಸಿರದ ಆಡಳಿತ ಕಾರಣಗಳಿಗಾಗಿ (ಉದಾ: ಖಾಯಂ ಹುದ್ದೆಯವರು ರಜೆಯಿಂದ ಅಥವಾ ಪ್ರತಿನಿಯೋಜನೆಯಿಂದ ವಾಪಸ್ಸು ಬಂದಿರುವುದು, ಹೆಚ್ಚು ಸೂಕ್ತವಾದಂಥ ಅಧಿಕಾರಿಯು ದೊರೆಯುವುದು ಇವೇ ಮುಂತಾದಂಥ) ಅವರನ್ನು ಕೆಳಗಿನ ಸೇವೆಗೆ, ಹುದ್ದೆಯ ಶ್ರೇಣಿಗೆ ಅಥವಾ ಹುದ್ದೆಗೆ ಹಿಂದಿರುಗಿಸುವುದು;

(v) ಬೇರೊಂದು ಸೇವೆಗೆ, ಹುದ್ದೆಯ ಶ್ರೇಣಿಗೆ ಅಥವಾ ಹುದ್ದೆಗೆ ಪ್ರೊಬೇಷನ್ನಿನ ಮೇಲೆ ನೇಮಕವಾದ ಸರ್ಕಾರಿ ನೌಕರನನ್ನು, ಅವನ ನೇಮಕದ ನಿಬಂಧನೆಗಳಿಗೆ ಅಥವಾ ಪ್ರೊಬೇಷನ್ನಿಗೆ ಸಂಬಂಧಿಸುವ ನಿಯಮಗಳಿಗೆ ಮತ್ತು ಆದೇಶಗಳಿಗೆ ಅನುಸಾರವಾಗಿ ಪ್ರೊಬೇಷನ್ನಿನ ಅವಧಿಯಲ್ಲಿ ಅಥವಾ ಆ ಅವಧಿಯ ಕೊನೆಯಲ್ಲಿ ಅವನ ಖಾಯಂ ಸೇವೆಗೆ, ಹುದ್ದೆಯ ಶ್ರೇಣಿಗೆ ಅಥವಾ ಹುದ್ದೆಗೆ ಹಿಂದಿರುಗಿಸುವುದು;

(vi) ಸರ್ಕಾರಿ ನೌಕರನನ್ನು ಅವನ ನಿವೃತ್ತಿ ವಯಸ್ಸಿಗೆ ಅಥವಾ ನಿವೃತ್ತಿಗೆ ಸಂಬಂಧಿಸಿದ ಉಪಬಂಧಗಳಿಗನುಸಾರವಾಗಿ ಕಡ್ಡಾಯವಾಗಿ ನಿವೃತ್ತಿಗೊಳಿಸುವುದು;

(vii) (ಎ) ಒಪ್ಪಂದದ ಮೇರೆಗೆ ನಿಯೋಜಿಸಿಕೊಂಡ ವ್ಯಕ್ತಿಯನ್ನು ಅಂಥ ಒಪ್ಪಂದದ ನಿಬಂಧನೆಗಳಿಗನುಸಾರವಾಗಿ; ಅಥವಾ

[2][(ಬಿ) ಪ್ರೊಬೇಷನ್ನಿನ ಮೇಲೆ ನೇಮಕಗೊಂಡ ಸರ್ಕಾರಿ ನೌಕರನನ್ನು ಅವನ ಪ್ರೊಬೇಷನ್ ಅವಧಿಯಲ್ಲಿ ಅಥವಾ ಅದರ ಕೊನೆಯಲ್ಲಿ, ಅವನ ನೇಮಕದ ನಿಬಂಧನೆಗಳಿಗೆ ಅಥವಾ ಅಂಥ ಪ್ರೊಬೇಷನ್‌ಗೆ ಅನ್ವಯವಾಗುವ ನಿಯಮಗಳಿಗೆ ಮತ್ತು ಆದೇಶಗಳಿಗೆ ಅನುಸಾರವಾಗಿ; ಅಥವಾ

(ಸಿ) ಹಂಗಾಮಿ ಸರ್ಕಾರಿ ನೌಕರನನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವಾ (ಹಂಗಾಮಿ ಸೇವೆ) ನಿಯಮಗಳು, 1967ರ 5ನೇ ನಿಯಮದ 1ನೇ ಉಪನಿಯಮದ ಉಪಬಂಧಗಳಿಗನುಸಾರವಾಗಿ

-ಸೇವೆಯಿಂದ ಕೊನೆಗೊಳಿಸುವುದು.][2]

........................................................................................................................................

1. **ಅಧಿಸೂಚನೆ ಸಂಖ್ಯೆ: ಜಿಎಡಿ 41 ಎಸ್‌ಎಸ್‌ಆರ್ 69, ದಿನಾಂಕ: 27.02.1970, ಜಿಎಸ್ ಆರ್ 87, ದಿನಾಂಕ: 27.02.1970ರ ಮೂಲಕ ಸೇರಿಸಲಾಗಿದೆ. ( 26.03.1970 ರಿಂದ ಜಾರಿಗೆ ಬಂದಿದೆ).**
2. **ಅಧಿಸೂಚನೆ ಸಂಖ್ಯೆ: ಜಿಎಡಿ 28 ಜಿಎಸ್‌ಆರ್ 69, ದಿನಾಂಕ: 12.12.1973, ಕೆಜಿಡಿ 24.1.1974 (ಜಿಎಸ್‌ಆರ್ 14)ರ ಮೂಲಕ ಪ್ರತಿಯೋಜಿಸಲಾಗಿದೆ.**

3. ಜಿಎಸ್‌ಆರ್ 14, ದಿನಾಂಕ: 12.12.1973ರ ಮೂಲಕ 24.01.1974ರಿಂದ ಜಾರಿಗೆ ಬರುವಂತೆ ಮರು ಸಂಖ್ಯೆ ನೀಡಲಾಗಿದೆ.
4. **ಅಧಿಸೂಚನೆ ಸಂಖ್ಯೆ ಡಿಪಿಎಆರ್ 39 ಎಸ್‌ಡಿಇ 81, ದಿನಾಂಕ: 27.06.1984, ಜಿಎಸ್‌ಆರ್ 181 ರಲ್ಲಿ ತಿದ್ದುಪಡಿ ಮಾಡಲಾಗಿದೆ.**
5. **ಅಧಿಸೂಚನೆ ಸಂಖ್ಯೆ: ಡಿಪಿಎಆರ್ 16 ಎಸ್‌ಡಿಇ 2004, ದಿನಾಂಕ: 17.11.2005ರ ಮೂಲಕ ಸೇರಿಸಲಾಗಿದೆ.**
6. **ಅಧಿಸೂಚನೆ ಸಂಖ್ಯೆ: ಡಿಪಿಎಆರ್ 16 ಎಸ್‌ಡಿಇ 90, ದಿನಾಂಕ: 23.10.1990ರ ಮೂಲಕ ತಿದ್ದುಪಡಿ ಮಾಡಲಾಗಿದೆ.**
7. **ಅಧಿಸೂಚನೆ ಸಂಖ್ಯೆ: ಜಿಎಡಿ 28 ಎಸ್‌ಎಸ್‌ಆರ್ 69, ದಿನಾಂಕ: 12.12.1973ರ ಮೂಲಕ ಪ್ರತಿಯೋಜಿಸಲಾಗಿದೆ. (ಕೆಜಿಡಿ 24.01.1974, ಜಿಎಸ್‌ಆರ್ 14).**

**9. ಶಿಸ್ತು ಪ್ರಾಧಿಕಾರಿಗಳು.-**

(1) ರಾಜ್ಯಪಾಲರು ಯಾರೇ ಸರ್ಕಾರಿ ನೌಕರನಿಗೆ 8ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸಬಹುದು.

(2) (1)ನೇ ಉಪನಿಯಮದ ಉಪಬಂಧಗಳಿಗೆ ಭಾದಕವಾಗದಂತೆ ಆದರೆ (3)ನೇ ಉಪನಿಯಮದ ಉಪಬಂಧಗಳಿಗೆ ಒಳಪಟ್ಟು,-

[3][(ಎ) XXX][3]

(ಎಎ) ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಅವರು, ವಿಧಿ ವೈದ್ಯ ವಿಜ್ಞಾನ ಪ್ರಯೋಗ ಶಾಲೆ, ಬೆಂಗಳೂರು, ಇದರ ಸಹಾಯಕ ನಿರ್ದೇಶಕ, ಸೀರಂ ವಿಜ್ಞಾನಿ, ಭೌತವಿಜ್ಞಾನಿ, ವಿಷತಜ್ಞ, ಬ್ಯಾಲಿಸ್ಟಿಕ್ ತಜ್ಞ ಮತ್ತು ಪ್ರಶ್ನಿತ ದಸ್ತಾವೇಜುಗಳ ತಜ್ಞ-ಇವರುಗಳ ಮೇಲೆ 8ನೇ ನಿಯಮದ [4][(iii), (iiiಎ), (iv) ಮತ್ತು (ivಎ) ಖಂಡಗಳಲ್ಲಿ][4] ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸಬಹುದು;

[6 &10][(ಬಿ) (i) ಪ್ರಾದೇಶಿಕ ಆಯುಕ್ತರು, ತಹಶೀಲ್ದಾರರ ಮೇಲೆ ಮತ್ತು ಅದಕ್ಕೆ ಸಮಾನ ಹುದ್ದೆಯನ್ನು ಹೊಂದಿರುವ ಅಧಿಕಾರಿಗಳ ಮೇಲೆ 8ನೇ ನಿಯಮದ (ii) ರಿಂದ (ivಎ)ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳನ್ನು ಯಾವುದೇ ದಂಡನೆಯನ್ನು ವಿಧಿಸಬಹುದು;][10]

(ii) ಜಿಲ್ಲಾಧಿಕಾರಿಗಳು, ತಹಶೀಲ್ದಾರರ ಮತ್ತು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಮೇಲೆ 8ನೇ ನಿಯಮದ (ii) ರಿಂದ (iiiಎ) ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸಬಹುದು][6]

[9][(ಬಿಬಿ) ಅಖಿಲ ಭಾರತ ಸೇವೆಗಳಿಗೆ ಸೇರಿರದ, ಆದರೆ [12][90500-123300][12] ರೂ.ಗಳ ಮತ್ತು ಅದಕ್ಕೂ ಮೇಲ್ಪಟ್ಟ (ಅಥವಾ ಕಾಲಕಾಲಕ್ಕೆ ಪರಿಷ್ಕೃತವಾಗಬಹುದಾದುದಕ್ಕೆ ಸಮಾನವಾದುದಕ್ಕಿಂತ) ಕಡಿಮೆಯಿಲ್ಲದ ವೇತನ ಶ್ರೇಣಿ ಹೊಂದಿರುವ ಇಲಾಖಾ ಮುಖ್ಯಸ್ಥರು ಮತ್ತು ಅಖಿಲ ಭಾರತ ಸೇವೆಗಳಿಗೆ ಸೇರಿದ ಇಲಾಖಾ ಮುಖ್ಯಸ್ಥರು, ತಮ್ಮ ಆಡಳಿತ ನಿಯಂತ್ರಣದಲ್ಲಿ ಕೆಲಸ ನಿರ್ವಹಿಸುತ್ತಿರುವ [12][56800-99600][12] ರೂ.ಗಳಿಗಿಂತ (ಅಥವಾ ಕಾಲಕಾಲಕ್ಕೆ ಪರಿಷ್ಕೃತವಾಗಬಹುದಾದುದಕ್ಕೆ ಸಮಾನವಾದುದಕ್ಕಿಂತ) ಹೆಚ್ಚಲ್ಲದ ವೇತನ ಶ್ರೇಣಿ ಹೊಂದಿರುವ ಸಮೂಹ 'ಬಿ' ಹುದ್ದೆ ಅಥವಾ ಸಮೂಹ 'ಎ' ಹುದ್ದೆ ಹೊಂದಿರುವ ರಾಜ್ಯ ಸಿವಿಲ್ ಸೇವೆಯ ಸದಸ್ಯನ ಮೇಲೆ 8ನೇನಿಯಮದ [4][(ii), (iii), (iiiಎ), (iv) ಮತ್ತು (ivಎ)][4] ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸಬಹುದು;

(ಬಿಬಿಬಿ) ಅಖಿತ ಭಾರತ ಸೇವೆಗಳಿಗೆ ಸೇರಿರದ, ಆದರೆ [12][90500-123300][12] ರೂ.ಗಳಿಗಿಂತ ಕಡಿಮೆ (ಅಥವಾ ಕಾಲಕಾಲಕ್ಕೆ ಪರಿಷ್ಕೃತವಾಗಬಹುದಾದುದಕ್ಕೆ ಸಮಾನವಾದುದಕ್ಕಿಂತ) ವೇತನ ಶ್ರೇಣಿ ಹೊಂದಿರುವ ಇಲಾಖಾ ಮುಖ್ಯಸ್ಥರು ಮತ್ತು ಅಖಿತ ಭಾರತ ಸೇವೆಗಳಿಗೆ ಸೇರಿದ ಇಲಾಖಾ ಮುಖ್ಯಸ್ಥರು, ತಮ್ಮ ಆಡಳಿತ ನಿಯಂತ್ರಣದಲ್ಲಿ ಕೆಲಸ ನಿರ್ವಹಿಸುತ್ತಿರುವ ರಾಜ್ಯ ಸಿವಿಲ್ ಸೇವೆಯಲ್ಲಿ ಸಮೂಹ-ಬಿ ಹುದ್ದೆಯನ್ನು ಹೊಂದಿರುವ

ಸದಸ್ಯನ ಮೇಲೆ 8ನೇ ನಿಯಮದ (ii), (iii), (iiiಎ), (iv) ಮತ್ತು (ivಎ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸಬಹುದು;][9]

[7][(ಬಿಬಿಬಿ-1) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳಿಗೆ ಸೇರಿದ, [12][74400-109600][12] ರೂ.ಗಳ (ಕಾಲಕಾಲಕ್ಕೆ ಪರಿಷ್ಕೃತವಾಗಬಹುದಾದ) ವೇತನ ಶ್ರೇಣಿಯಲ್ಲಿರುವ ಜಂಟಿ ನಿರ್ದೇಶಕರ ಹಂತದವರೆಗೆ ಮತ್ತು ಅದನ್ನೂ ಒಳಗೊಂಡಂತೆ ಯಾರೇ ಸರ್ಕಾರಿ ನೌಕರನ ಮೇಲೆ 8ನೇ ನಿಯಮದ (ii), (iii), (iiiಎ), (iv) ಮತ್ತು (ivಎ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸಬಹುದು;

(ಬಿಬಿಬಿ-2) ವೈದ್ಯಕೀಯ ಶಿಕ್ಷಣ ನಿರ್ದೇಶಕರ ಕಚೇರಿಯ ಮುಖ್ಯ ಆಡಳಿತಾಧಿಕಾರಿಯವರು ವೈದ್ಯಕೀಯ ಶಿಕ್ಷಣ ನಿರ್ದೇಶಕರ ಕಛೇರಿಯಲ್ಲಿ ಕೆಲಸ ಮಾಡುತ್ತಿರುವ ವೈದ್ಯಕೀಯ ಶಿಕ್ಷಣ ಸೇವೆಗಳ ಸಮೂಹ “ಸಿ” ಮತ್ತು “ಡಿ” ಕೇಡರ್‌ಗಳಿಗೆ ಸೇರಿದ ಯಾರೇ ಸರ್ಕಾರಿ ನೌಕರನ ಮೇಲೆ 8ನೇ ನಿಯಮದ (i) ರಿಂದ (ivಎ) ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸಬಹುದು;

(ಬಿಬಿಬಿ-3) ಜಿಲ್ಲೆಯ ಅಧಿಕಾರಿಗಳು, ಸಂಸ್ಥೆಗಳ ಮುಖ್ಯಸ್ಥರು, ಆಸ್ಪತ್ರೆಗಳ ಅಧೀಕ್ಷಕರು, ಕಛೇರಿ ಮುಖ್ಯಸ್ಥರು, ಪ್ರಾಂಶುಪಾಲರು, ಜಿಲ್ಲಾ ವೈದ್ಯಾಧಿಕಾರಿಗಳು, ಸಿವಿಲ್ ಸರ್ಜನ್‌ಗಳು, ವೈದ್ಯಕೀಯ ಶಿಕ್ಷಣ ನಿರ್ದೇಶಕರ ಕಛೇರಿಯಿಂದ ಹೊರಗಿರುವ ಕಛೇರಿಗಳಲ್ಲಿ, ಸಂಸ್ಥೆಗಳಲ್ಲಿ ಅಥವಾ ಆಸ್ಪತ್ರೆಗಳಲ್ಲಿ ತಮ್ಮ ಆಡಳಿತ ನಿಯಂತ್ರಣದಲ್ಲಿ ಕೆಲಸ ಮಾಡುತ್ತಿರುವ ವೈದ್ಯಕೀಯ ಶಿಕ್ಷಣ ಸೇವೆಗಳ ಸಮೂಹ “ಸಿ” ಮತ್ತು “ಡಿ” ಕೇಡರ್‌ಗಳಿಗೆ ಸೇರಿದ ಯಾರೇ ಸರ್ಕಾರಿ ನೌಕರರ ಮೇಲೆ 8ನೇ ನಿಯಮದ (i) ರಿಂದ (ivಎ) ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸಬಹುದು;

**ವಿವರಣೆ,**-ಜಿಲ್ಲೆಯ ಅಧಿಕಾರಿಗಳಲ್ಲಿ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯ, ವಿಕ್ಟೋರಿಯಾ ಆಸ್ಪತ್ರೆಯ, ವಾಣಿವಿಲಾಸ್ ಆಸ್ಪತ್ರೆಯ ಮತ್ತು ಮಿಂಟೋ ಆಸ್ಪತ್ರೆಯ ಅಧೀಕ್ಷಕರು, ಸರ್ಕಾರಿ ದಂತ ವೈದ್ಯಕೀಯ ಕಾಲೇಜಿನ ಮತ್ತು ಬೆಂಗಳೂರು ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರು, ಮೈಸೂರು ಕೆ.ಆರ್.ಆಸ್ಪತ್ರೆಯ, ಮೈಸೂರು ಚೆಲುವಾಂಬ ಆಸ್ಪತ್ರೆಯ, ಮೈಸೂರು ಪಿಕೆಟಿಬಿ ಆಸ್ಪತ್ರೆಯ, ದಾವಣಗೆರೆ ಸಿಜಿ ಆಸ್ಪತೆಯು, ದಾವಣಗೆರೆ ಮಹಿಳೆಯರ ಮತ್ತು ಮಕ್ಕಳ ಆಸ್ಪತ್ರೆಯ, ಮಂಗಳೂರು ಸರ್ಕಾರಿ ವೆನ್‌ಲಾಕ್ ಆಸ್ಪತ್ರೆಯ, ಮಂಗಳೂರು ಲೇಡಿ ಗೋಷೆನ್ ಆಸ್ಪತ್ರೆಯ ಅಧೀಕ್ಷಕರು ಮತ್ತು ಧಾರವಾಡದ ಮಾನಸಿಕ ಆರೋಗ್ಯ ಆಸ್ಪತ್ರೆಯ][7] [8][ಬೆಂಗಳೂರು ಹೊಸೂರು ರಸ್ತೆಯ ಎಸ್.ಡಿ.ಎಸ್. ಕ್ಷಯರೋಗ ಮತ್ತು ಎದೆರೋಗಗಳ ಆಸ್ಪತ್ರೆಯ ಅಧೀಕ್ಷಕರು, ಮೈಸೂರಿನ ಮೈಸೂರು ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರು, ಬೆಂಗಳೂರು ರಾಜೀವ್ ಗಾಂಧಿ ಎದೆರೋಗ ಆಸ್ಪತ್ರೆಯ ಪ್ರಾಂಶುಪಾಲರು][8] –ಸೇರುತ್ತಾರೆ.

(ಬಿಬಿಬಿ-4) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕರ ಕಛೇರಿಯ ಮುಖ್ಯ ಆಡಳಿತಾಧಿಕಾರಿಯವರು, ನಿರ್ದೇಶಕರ ಕಛೇರಿಯಲ್ಲಿ ತನ್ನ ಆಡಳಿತ ನಿಯಂತ್ರಣದಲ್ಲಿ ಕೆಲಸ ಮಾಡುತ್ತಿರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗೆ ಅಥವಾ ಸಾರ್ವಜನಿಕ ಆರೋಗ್ಯ ಸೇವೆಯ ಸಮೂಹ “ಸಿ” ಮತ್ತು ’ಡಿ’ ಕೇಡರ್ ಗಳಿಗೆ ಸೇರಿದ ಯಾರೇ ಸರ್ಕಾರಿ ನೌಕರರ ಮೇಲೆ 8ನೇ ನಿಯಮದ (i) ರಿಂದ (ivಎ) ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸಬಹುದು;

(ಬಿಬಿಬಿ-5) ಜಿಲ್ಲೆಯ ಅಧಿಕಾರಿಗಳು, ಸಂಸ್ಥೆಗಳ ಮುಖ್ಯಸ್ಥರು, ಆಸ್ಪತ್ರೆಗಳ ಅಧೀಕ್ಷಕರು, ಕಛೇರಿ ಮುಖ್ಯಸ್ಥರು, ಪ್ರಾಂಶುಪಾಲರು, ಜಿಲ್ಲಾ ವೈದ್ಯಾಧಿಕಾರಿಗಳು, ಸಿವಿಲ್ ಸರ್ಜನ್ನರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಅಥವಾ ಸಾರ್ವಜನಿಕ ಆರೋಗ್ಯ ಸೇವೆಗಳ ಸಮೂಹ ’ಸಿ’ ಮತ್ತು ’ಡಿ’ ಕೇಡರ್‌ಗಳಿಗೆ ಸೇರಿದ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕರ ಕಛೇರಿಯ ಹೊರಗಿರುವ ಕಛೇರಿಗಳಲ್ಲಿ ತಮ್ಮ ಆಡಳಿತ ನಿಯಂತ್ರಣದಲ್ಲಿ ಕೆಲಸ ಮಾಡುತ್ತಿರುವ ಯಾರೇ ಸರ್ಕಾರಿ ನೌಕರರ ಮೇಲೆ 8ನೇ ನಿಯಮದ (i) ರಿಂದ (ivಎ) ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸಬಹುದು;

**ವಿವರಣೆ.**- ಜಿಲ್ಲೆಯ ಅಧಿಕಾರಿಗಳು ಎಂಬುದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಜಿಲ್ಲಾ ಸರ್ಜನ್, ಹೆಚ್.ಎಫ್.ಡಬ್ಲ್ಯೂ.ಟಿ.ಸಿ. ಪ್ರಾಂಶುಪಾಲರು, ಡಿ.ಟಿ.ಸಿ ಪ್ರಾಂಶುಪಾಲರು, ಕೆ.ಸಿ.ಜಿ ಆಸ್ಪತ್ರೆಯ ಅಧೀಕ್ಷಕರು, ಜಯನಗರ ಜನರಲ್ ಆಸ್ಪತ್ರೆಯ ಅದೀಕ್ಷಕರು, ಹೆಚ್.ಎಸ್.ಐ.ಎಸ್. ಗೌಷಿಯಾ ಆಸ್ಪತ್ರೆಯ ಅಧೀಕ್ಷಕರು, ಎದೆರೋಗ ಮತ್ತು ಕ್ಷಯರೋಗ ಆಸ್ಪತ್ರೆ ಅಧೀಕ್ಷಕರು ಇವರನ್ನು ಒಳಗೊಳ್ಳತಕ್ಕದ್ದು.][7]

(ಸಿ) ನೇಮಕ ಪ್ರಾಧಿಕಾರಿಯು ಅಥವಾ ಈ ಬಗ್ಗೆ ಅನುಸೂಚಿಗಳಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರಿಯು ರಾಜ್ಯ ಸಿವಿಲ್ ಸೇವಾ ಸದಸ್ಯನ ಮೇಲೆ 8ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುವೇ ದಂಡನೆಯನ್ನು ವಿಧಿಸಬಹುದು;

(ಡಿ) ರಾಜ್ಯ ಸಿವಿಲ್ ಸೇವೆಗಳ 'ಸಿ' ಮತ್ತು 'ಡಿ' ಸಮೂಹಗಳ ಸದಸ್ಯರ ಮೇಲೆ ಸಹ ಆ ಸದಸ್ಯನು ಯಾವ ಕಛೇರಿಯಲ್ಲಿ ಸೇವೆ ಸಲ್ಲಿಸುತ್ತಿರುವನೋ ಆ ಕಛೇರಿಯ ಮುಖ್ಯಸ್ಥರು (ಸಿ) ಖಂಡದ ಮೇರೆಗೆ ದಂಡನೆಯನ್ನು ವಿಧಿಸಲು ಸಕ್ಷಮನಾದ ಪ್ರಾಧಿಕಾರಿಯ ದರ್ಜೆಗಿಂತ ಕಡಿಮೆ ದರ್ಜೆಯವರಾಗಿರದಿದ್ದರೆ 8ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುವೇ ದಂಡನೆಯನ್ನು ವಿಧಿಸಬಹುದು:

[1][ಪರಂತು, ರಾಜ್ಯ ಸಿವಿಲ್ ಸೇವೆಯ 'ಡಿ' ಸಮೂಹದ ಸದಸ್ಯರ ಮೇಲೆ ಕಛೇರಿಯ ಲಿಪಿಕ ಸಿಬ್ಬಂದಿ ವರ್ಗದ ಪ್ರಭಾರ ಹೊಂದಿರುವ ಗೆಜೆಟೆಡ್ ಅಧಿಕಾರಿಗಳು ಮತ್ತು ಅಂಥ ಸಿಬ್ಬಂದಿ ವರ್ಗದ ಪ್ರಭಾರ ಹೊಂದಿರುವ ಇತರ ನಾನ್ ಗೆಜೆಟೆಡ್ ಅಧಿಕಾರಿಗಳು ಸಹ 8ನೇ ನಿಯಮದ (i)ನೇ ಖಂಡದಲ್ಲಿ ನಿರ್ದಿಷ್ಟಪಡಿಸಿದ ಜುಲ್ಮಾನೆ ದಂಡನೆಯನ್ನು ವಿಧಿಸಬಹುದು;][1]

[2][(ಇ) 8ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು (ಕರ್ನಾಟಕ ನ್ಯಾಯಾಂಗ ಇಲಾಖೆಯ ಹೊರತು) ಯಾವುದೇ ಇಲಾಖೆಗೆ ಸೇರಿದ ರಾಜ್ಯ ಸಿವಿಲ್ ಸೇವೆಗಳ ಸಮೂಹ-ಸಿ ಮತ್ತು ಡಿ ಯ ಯಾರೇ ಸದಸ್ಯನ ಮೇಲೆ, ಅಂಥ ಸದಸ್ಯನು ಯಾವ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುವನೋ ಆ ಜಿಲ್ಲೆಯ ಜಿಲ್ಲಾಧಿಕಾರಿಗಳು ವಿಧಿಸಬಹುದು ಮತ್ತು ಈ ಖಂಡದ ಮೇರೆಗಿನ ಜಿಲ್ಲಾಧಿಕಾರಿಯ ಆದೇಶದ ವಿರುದ್ಧ ಆ ಸದಸ್ಯನು ಯಾವ ಇಲಾಖೆಗೆ ಸೇರಿರುವನೋ ಆ ಇಲಾಖೆಯ ಮುಖ್ಯಸ್ಥರಿಗೆ ಅಪೀಲು ಮಾಡಿಕೊಳ್ಳಲು ಅವಕಾಶವಿರತಕ್ಕದ್ದು;][2]

[5][(ಎಫ್) ಸರ್ಕಾರದ ಕಾರ್ಯದರ್ಶಿಗಳು ತಮ್ಮ ಆಡಳಿತ ನಿಯಂತ್ರಣದಲ್ಲಿ ಕೆಲಸ ಮಾಡುತ್ತಿರುವ ಕರ್ನಾಟಕ ಸಚಿವಾಲಯ ಸೇವೆಯ ಬಿ ಸಮೂಹದ ಸದಸ್ಯನ ಮೇಲೆ 8ನೇ ನಿಯಮದ ಖಂಡ (ii), (iii) ಮತ್ತು (iiiಎ) ಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳನ್ನು ವಿಧಿಸಬಹುದು;][5]

[11][(ಜಿ) ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಯಾವುದೇ ಇಲಾಖೆಗೆ ಸೇರಿದ (ಕರ್ನಾಟಕ ನ್ಯಾಯಾಂಗ ಇಲಾಖೆಯನ್ನು ಹೊರತುಪಡಿಸಿ) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಸಮೂಹ 'ಬಿ' ವೃಂದದ ಅಧಿಕಾರಿಗೆ 8ನೇ ನಿಯಮದ (ii) ರಿಂದ (iiiಎ)ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸಬಹುದು ಹಾಗೂ ಇದಲ್ಲದೆ 8ನೇ ನಿಯಮದ (ii) ರಿಂದ (ivಎ)ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳನ್ನು (ಕರ್ನಾಟಕ ನ್ಯಾಯಾಂಗ ಇಲಾಖೆಯನ್ನು ಹೊರತು ಪಡಿಸಿ) ಯಾವುದೇ ಇಲಾಖೆಗೆ ಸೇರಿದ ರಾಜ್ಯ ಸಿವಿಲ್ ಸೇವೆಗಳ ಸಮೂಹ-ಸಿ ಮತ್ತು ಸಮೂಹ-ಡಿ ನೌಕರನಿಗೆ ವಿಧಿಸಬಹುದು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಆದೇಶದ ವಿರುದ್ಧ ಆ ನೌಕರರನು ಯಾವ ಇಲಾಖೆಗೆ ಸೇರಿರುವನೋ ಆ ಇಲಾಖೆಯ ಮುಖ್ಯಸ್ಥರಿಗೆ ಮೇಲ್ಮನವಿ ಸಲ್ಲಿಸಲು ಅವಕಾಶವಿರತಕ್ಕದ್ದು][11]

(2ಎ) (1)ನೇ ಉಪನಿಯಮಕ್ಕೆ ಬಾಧಕವಾಗದಂತೆ ಮತ್ತು (3)ನೆಯ ಉಪನಿಯಮಕ್ಕೆ ಒಳಪಟ್ಟು (ಇಲ್ಲಿ ಇನ್ನು ಮುಂದೆ ಈ ಉಪನಿಯಮದಲ್ಲಿ 'ಮಾತೃ ಇಲಾಖಾ ಸೇವೆ' ಎಂದು ಉಲ್ಲೇಖಿತವಾಗುವ) ರಾಜ್ಯ ಸೇವೆಯ ಯಾವುದೇ ವರ್ಗದ ಅಥವಾ ಶ್ರೇಣಿಯ ಸದಸ್ಯನಾಗಿರುವ ಯಾರೇ ಸರ್ಕಾರಿ ನೌಕರರನ್ನು (ಇಲ್ಲಿ ಇನ್ನು ಮುಂದೆ ಈ ಉಪನಿಯಮದಲ್ಲಿ ಪ್ರತಿನಿಯೋಜಿತ ಸೇವೆ ಎಂದು ಉಲ್ಲೇಖಿತವಾಗುವ) ಬೇರೊಂದು ರಾಜ್ಯದ ಯಾವುದೇ ವರ್ಗದ

ಅಥವಾ ಶ್ರೇಣಿಯ ಸೇವೆಗೆ ಪ್ರತಿನಿಯೋಜಿಸಿದ ಸಂದರ್ಭದಲ್ಲಿ, ಪ್ರತಿನಿಯೋಜಿತ ಸೇವೆಯ ವರ್ಗಕ್ಕೆ ಅಥವಾ ಶ್ರೇಣಿಗೆ ಅವನನ್ನು ನೇಮಕ ಮಾಡಿದ ಪ್ರಾಧಿಕಾರಿಯು, ಅವನನನ್ನು ಅಮಾನತ್ತಿನಲ್ಲಿಡಲು ನೇಮಕ ಪ್ರಾಧಿಕಾರಿಯ ಅಧಿಕಾರಗಳನ್ನು ಮತ್ತು ಅವನ ವಿರುದ್ಧ ಶಿಸ್ತು ವ್ಯವಹರಣೆಯನ್ನು ತೆಗೆದುಕೊಳ್ಳುವ ಉದ್ದೇಶಕ್ಕಾಗಿ ಶಿಸ್ತು ಪ್ರಾಧಿಕಾರಿಯ ಅಧಿಕಾರಗಳನ್ನು ಹೊಂದಿರತಕ್ಕದು;

ಪರಂತು, ಅವನನ್ನು ಪ್ರತಿನಿಯೋಜಿತ ಸೇವೆಗೆ ನೇಮಕ ಮಾಡಿದ ಪ್ರಾಧಿಕಾರಿಯು ಸಂದರ್ಭಾನುಸಾರ, ಅವನ ಅಮಾನತ್ತಿನ ಆದೇಶಕ್ಕೆ ಅಥವಾ ಶಿಸ್ತು ವ್ಯವಹರಣೆಗಳನ್ನು ಪ್ರಾರಂಭಿಸುವುದಕ್ಕೆ ಕಾರಣವಾದ ಸಂದರ್ಭಗಳನ್ನು ಸಾಧ್ಯವಾದದಷ್ಟು ಬೇಗನೆ ಮಾತೃ ಇಲಾಖಾ ಸೇವೆಯ ನೇಮಕ ಪ್ರಾಧಿಕಾರಿಗೆ ತಿಳಿಸತಕ್ಕದ್ದು.

(3) ಈ ನಿಯಮದಲ್ಲಿ ಏನೇ ಒಳಗೊಂಡಿದ್ದರೂ, ನೇಮಕ ಪ್ರಾಧಿಕಾರಿಗಿಂತ ಕೆಳದರ್ಜೆಯ ಯಾರೇ ಪ್ರಾಧಿಕಾರಿಯು 8ನೇ ನಿಯಮದ (v) ರಿಂದ (viii)ರ ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ದಂಡನೆಯನ್ನು ವಿಧಿಸತಕ್ಕದ್ದಲ್ಲ.

.............................................................................................................

1. **ಅಧಿಸೂಚನೆ ಸಂಖ್ಯೆ: ಜಿಎಡಿ 28 ಓಎಸ್‌ಆರ್ 59, ದಿನಾಂಕ: 07.02.1962ರ ಮೂಲಕ ಸೇರ್ಪಡೆ ಮಾಡಲಾಗಿದೆ.**
2. **ಅಧಿಸೂಚನೆ ಸಂಖ್ಯೆ ಜಿಎಡಿ 12 ಎಸ್‌ಎಸ್‌ಆರ್ 73, ದಿನಾಂಕ: 11.07.73, ಜಿಎಸ್‌ಆರ್ 186 ದಿನಾಂಕ: 11.07.73ರ ಮೂಲಕ 2.08.73 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.**
3. **ಅಧಿಸೂಚನೆ ಸಂಖ್ಯೆ: ಜಿಎಡಿ 28, ಎಸ್‌ಎಸ್ ಆರ್ 69, ದಿನಾಂಕ: 12.12.1973ರ ಮೂಲಕ ಬಿಟ್ಟುಬಿಡಲಾಗಿದೆ.**
4. ಅಧಿಸೂಚನೆ ಸಂಖ್ಯೆ ಜಿಎಸ್ 28, ಎಸ್‌ಎಸ್‌ಆರ್ 69, ದಿನಾಂಕ: 12.12.1973 ಕೆಜಿಡಿ 24.01.1974 ರ ಮೂಲಕ ಪ್ರತಿಯೋಜಿಸಲಾಗಿದೆ.
5. ಅಧಿಸೂಚನೆ ಸಂಖ್ಯೆ: ಜಿಎಡಿ 12 ಎಸ್‌ಎಸ್‌ಆರ್ 75, ದಿನಾಂಕ: 27.07.75, ಜಿಎಸ್‌ಆರ್ 152, ದಿನಾಂಕ: 27.05.75ರ ಮೂಲಕ 12.12.75 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
6. ಅಧಿಸೂಚನೆ ಸಂಖ್ಯೆ: ಡಿಪಿಎಆರ್ 63 ಎಸ್‌ಎಸ್‌ಆರ್ 1976, ದಿನಾಂಕ: 15.05.1978ರ ಮೂಲಕ ಪ್ರತಿಯೋಜಿಸಲಾಗಿದೆ.
7. ಅಧಿಸೂಚನೆ ಸಂಖ್ಯೆ ಡಿಪಿಎಆರ್11 ಎಸ್‌ಡಿಇ 2002 (II) ದಿನಾಂಕ: 09.08.2002ರ ಮೂಲಕ (20.08.2002 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
8. ಅಧಿಸೂಚನೆ ಸಂಖ್ಯೆ: ಡಿಪಿಎಆರ್ 21 ಎಸ್‌ಡಿಇ 2003 (II) ದಿನಾಂಕ: 20.02.2004ರ ಮೂಲಕ ಸೇರಿಸಲಾಗಿದೆ (ಕೆಜಿಡಿ 21.02.2004)
9. ಅಧಿಸೂಚನೆ ಸಂಖ್ಯೆ ಡಿಪಿಎಆರ್ 1 ಎಸ್‌ಡಿಇ 2006 ದಿನಾಂಕ: 28.07.2006ರ ಮೂಲಕ ಪ್ರತಿಯೋಜಿಸಲಾಗಿದೆ.
10. ಅಧಿಸೂಚನೆ ಸಂಖ್ಯೆ: ಡಿಪಿಎಆರ್ 10, ಎಸ್‌ಡಿಇ 2006, ದಿನಾಂಕ: 25.01.2007ರ ಮೂಲಕ ಸೇರಿಸಲಾಗಿದೆ.
11. ಅಧಿಸೂಚನೆ ಸಂಖ್ಯೆ ಡಿಪಿಎಆರ್ 67 ಎಸ್‌ಡಿಇ 2013 ದಿನಾಂಕ: 05.11.2014ರ ಮೂಲಕ ಸೇರಿಸಲಾಗಿದೆ.
12. ಅಧಿಸೂಚನೆ ಸಂಖ್ಯೆ ಡಿಪಿಎಆರ್ 27 ಎಸ್‌ಡಿಇ 2018 ದಿನಾಂಕ: 08.04.2019ರ ಮೂಲಕ ಪ್ರತಿಯೋಜಿಸಲಾಗಿದೆ.

**10. ಅಮಾನತು:-**

(1)ನೇಮಕ ಪ್ರಾಧಿಕಾರಿಯು ಅಥವಾ ಅವನು ಯಾವ ಪ್ರಾಧಿಕಾರಿಗೆ ಅಧೀನನಾಗಿರುವನೋ ಆ ಯಾರೇ ಪ್ರಾಧಿಕಾರಿಯು ಅಥವಾ ಈ ಬಗ್ಗೆ ಸರ್ಕಾರದಿಂದ ಅಧಿಕಾರ ಪಡೆದ ಇತರ ಯಾರೇ ಪ್ರಾಧಿಕಾರಿಯು ಸರ್ಕಾರ ನೌಕರನನ್ನು,-

[7][(ಎ) ಕಾನೂನುಸಮ್ಮತ ಸಂಭಾವನೆಯನ್ನು ಹೊರತುಪಡಿಸಿ, ಅವನು ಲಂಚವನ್ನು ಸ್ವೀಕರಿಸುವಾಗ ಭ್ರಷ್ಟಚಾರ ಪ್ರತಿಬಂಧ ಅಧಿನಿಯಮ, 1988ರ ಅಥವಾ ಯಾವುದೇ ಇತರ ಕಾನೂನಿನ ಮೇರೆಗಿನ ಉಪಬಂಧಗಳ ಅಡಿಯಲ್ಲಿ ತನಿಖೆ ನಡೆಸಲು ಅಧಿಕೃತರಾದ ವ್ಯಕ್ತಿಗಳು ಅವನು ಲಂಚವನ್ನು

ಸ್ವೀಕರಿಸುತ್ತಿರುವಾಗಲೇ ಹಿಡಿದಿರುವುದನ್ನು ತೋರಿಸುವ ಮೇಲುನೋಟದ ಸಾಕ್ಷ್ಯವಿದ್ದಲ್ಲಿ;

[15][(ಎಎ) ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, 1988ರ ಅಡಿಯಲ್ಲಿ ಅಥವಾ ಇತರೆ ಯಾವುದೇ ಕಾನೂನಿನಡಿಯಲ್ಲಿ ಅಪರಾಧಗಳ ತನಿಖೆ ನಡೆಸಲು ಅಧಿಕಾರ ಹೊಂದಿದ ವ್ಯಕ್ತಿಗಳಿಗೆ, ಅವನು ತನ್ನ ಸರ್ಕಾರಿ ಕರ್ತವ್ಯ ನಿರ್ವಹಿಸುವಾಗ ಯಾವುದೆ ಕಾಲದಲ್ಲಿ ಅವನ ಬಲ್ಲ ಆದಾಯ ಮೂಲಗಳಿಗಿಂತ ಹೆಚ್ಚಿನ ಆರ್ಥಿಕ ಸಂಪನ್ಮೂಲಗಳನ್ನು ಅಥವಾ ಆಸ್ತಿಯನ್ನು ಅವನು ಹೊಂದಿದ್ದಾನೆಂದು ಅಥವಾ ಹೊಂದಿದ್ದನೆಂದು ತೋರಿಸುವ ಮೇಲ್ನೋಟದ ಸಾಕ್ಷ್ಯವಿರುವಲ್ಲಿ][15];

(ಬಿ) ಅವನು ಕರ್ತವ್ಯವನ್ನು ನಿರ್ವಹಸುತ್ತಿರುವಾಗ, ನೈತಿಕ ಅಧಃಪತನವನ್ನು ಒಳಗೊಳ್ಳುವ ಯಾವುದೇ ಅಪರಾಧವನ್ನು ಮಾಡಿದ್ದಕ್ಕಾಗಿ ಅವನ ವಿರುದ್ಧ ಸಕ್ಷಮ ನ್ಯಾಯಾಲಯದ ಮುಂದೆ ಆರೋಪ ಪಟ್ಟಿಯನ್ನು ಸಲ್ಲಿಸಿರುವಲ್ಲಿ;

(ಸಿ) ಭ್ರಷ್ಟಾಚಾರದ, ಸರ್ಕಾರಿ ಹಣದ ಆಪರಾಧಿಕ ದುರ್ವಿನಿಯೋಗದ ಅಥವಾ ಅಪರಾಧಿಕ ದುರುಪಯೋಗದ ಆರೋಪಗಳ ಮೇಲೆ ಅವನ ವಿರುದ್ಧ ಸಕ್ಷಮ ನ್ಯಾಯಾಲಯದ ಮುಂದೆ ಆರೋಪ ಪಟ್ಟಿಯನ್ನು ಸಲ್ಲಿಸಿರುವಲ್ಲಿ;

(ಡಿ) ಅವನ ವಿರುದ್ಧ ತೀವ್ರ ಕರ್ತವ್ಯಲೋಪದ ಬಗ್ಗೆ ಮೇಲುನೋಟದ ಸಾಕ್ಷ್ಯವಿದ್ದಲ್ಲಿ][7]

-ಅಮಾನತ್ತಿನಲ್ಲಿಡಬಹುದು;

[3][ಪರಂತು, ಈ ಬಗ್ಗೆ ಸರ್ಕಾರವು ಅಧಿಕೃತಗೊಳಿಸಿದ ಪ್ರಾಧಿಕಾರಿಯು ನೇಮಕ ಪ್ರಾಧಿಕಾರಿಗಿಂತ ಕಡಿಮೆ ದರ್ಜೆಯವನಾಗಿದ್ದು ಅವನು ಅಮಾನತು ಆದೇಶವನ್ನು ಮಾಡಿರುವಲ್ಲಿ, ಅಂಥ ಪ್ರಾಧಿಕಾರಿಯು ಯಾವ ಸಂದರ್ಭಗಳಲ್ಲಿ ಆ ಆದೇಶವನ್ನು ಮಾಡಲಾಯಿತು ಎಂಬ ಬಗ್ಗೆ ನೇಮಕ ಪ್ರಾಧಿಕಾರಿಗೆ ಆ ಕೂಡಲೇ ವರದಿ ಮಾಡತಕ್ಕದ್ದು][3]

[1][(2) ಸರ್ಕಾರಿ ನೌಕರನನ್ನು,-

(ಎ) ಅವನನ್ನು ಕ್ರಿಮಿನಲ್ ಆರೋಪದ ಮೇಲಾಗಲೀ ಅಥವಾ ಅನ್ಯಥಾ ಆಗಲಿ ನಲವತ್ತೆಂಟು ಗಂಟೆಗಳಿಗೆ ಮೀರಿದ ಅವಧಿಗೆ ಅಭಿರಕ್ಷೆಯಲ್ಲಿ ತಡೆಹಿಡಿದಿರಿಸಿದ್ದರೆ, ಅವನನ್ನು ತಡೆಹಿಡಿದಿರಿಸಿದ ದಿನಾಂಕದಿಂದ;

(ಬಿ) ಒಂದು ಅಪರಾಧಕ್ಕಾಗಿ ಅಪರಾಧ ನಿರ್ಣಯವಾಗಿರುವ ಸಂದರ್ಭದಲ್ಲಿ, ಅವನಿಗೆ ನಲವತ್ತೆಂಟು ಗಂಟೆಗಳಿಗೆ ಮೀರಿದ ಅವಧಿಯ ಕಾರಾವಾಸ ಶಿಕ್ಷೆಯನ್ನು ವಿಧಿಸಿದ್ದರೆ ಮತ್ತು ಅಂಥ ಅಪರಾಧ ನಿರ್ಣಯದ ಪರಿಣಾಮವಾಗಿ ಅವನನ್ನು ಆ ಕೂಡಲೇ ವಜಾ ಮಾಡಿರದಿದ್ದರೆ ಅಥವಾ ತೆಗೆದುಹಾಕಿರದಿದ್ದರೆ ಅಥವಾ ಕಡ್ಡಾಯ ನಿವೃತ್ತಿಗೊಳಿಸಿರದಿದ್ದರೆ, ಅವನ ಆ ಅಪರಾಧ ನಿರ್ಣಯದ ದಿನಾಂಕದಿಂದ

- ನೇಮಕ ಪ್ರಾಧಿಕಾರಿಯ ಆದೇಶದ ಮೂಲಕ ಅಮಾನತ್ತಿನಲ್ಲಿ ಇಡಲಾಗಿದೆಯೆಂದು ಭಾವಿಸತಕ್ಕದ್ದು.

**ವಿವರಣೆ,-** ಈ ಉಪನಿಯಮದ (ಬಿ) ಖಂಡದಲ್ಲಿ ಉಲ್ಲೇಖಿಸಿದ ನಲವತ್ತೆಂಟು ಗಂಟೆಗಳ ಅವಧಿಯನ್ನು, ಅಪರಾಧವು ನಿರ್ಣಯವಾದ ತರುವಾಯ ಕಾರಾವಾಸದ ಪ್ರಾರಂಭದಿಂದ ಲೆಕ್ಕ ಹಾಕತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ಕಾರಾವಾಸದ ಮಧ್ಯೆ ಮಧ್ಯೆ ಬರುವ ಅವಧಿಗಳು ಯಾವುವಾದರೂ ಇದ್ದರೆ, ಅವುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು.][1]

[7][(3) ಸರ್ಕಾರಿ ನೌಕರನನ್ನು ಅಮಾನತ್ತಿನಲ್ಲಿಡಲು ಸಕ್ಷಮನಾದ ಪ್ರಾಧಿಕಾರಿಯು, ಪ್ರಕರಣಕ್ಕೆ ಸಂಬಂಧಿಸಿದ ಸುಸಂಗತ ವಿಷಯ ಸಾಮಗ್ರಿಯನ್ನು ಪರಿಶೀಲಿಸತಕ್ಕದ್ದು ಮತ್ತು ಸರ್ಕಾರಿ ನೌಕರನ ವಿರುದ್ಧ ಮಾಡಿದ ಆರೋಪಗಳನ್ನು ಸಮರ್ಥಿಸುವ ಮೇಲುನೋಟದ ಸಾಕ್ಷ್ಯ ಇದೆಯೇ ಪ್ರಾಧಿಕಾರಿಯು ಸಂಬಂಧಪಟ್ಟ ಸರ್ಕಾರಿ ನೌಕರನನ್ನು ಅಮಾನತ್ತಿನಲ್ಲಿಡಬಹುದು.][7]

[8][(4) XXX][8]

[1&20][(5) (ಎ) ಉಪನಿಯಮ(3)ಕ್ಕೆ ಒಳಪಟ್ಟು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ 1988(1988ರ ಕೇಂದ್ರ ಅಧಿನಿಯಮ ಸಂಖ್ಯೆ:49) ಅಥವಾ ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984(1985ರ ಕರ್ನಾಟಕ ಅಧಿನಿಯಮ 04) ರ ಉಪಬಂಧಗಳ ಮೇರೆಗೆ ಸರ್ಕಾರಿ ನೌಕರರ ವಿರುದ್ಧ ಪ್ರಕರಣಗಳನ್ನು ತನಿಖೆ ಮಾಡುವುದಕ್ಕೆ ಅಧಿಕೃತಗೊಂಡ ಸಂಸ್ಥೆಯಲ್ಲಿ ಸಕ್ಷಮ ಪ್ರಾಧಿಕಾರವು ತನಿಖೆ ಮಾಡುವಾಗ ಒಬ್ಬ ಸರ್ಕಾರಿ ನೌಕರನ ವಿರುದ್ಧ ಮೇಲ್ನೋಟದ ಸಾಕ್ಷ್ಯವಿದೆ ಎಂದು ಕಂಡುಬಂದಲ್ಲಿ

ಹಾಗೂ ಆತನನ್ನು ಅಮಾನತ್ತಿನಲ್ಲಿಡಬಹುದು ಎಂದು ಶಿಫಾರಸ್ಸು ಮಾಡಿದ್ದಲ್ಲಿ ಅಂತಹ ಸರ್ಕಾರಿ ನೌಕರರನನ್ನು ಅಮಾನತ್ತಿನಲ್ಲಿಡಲು ಸಕ್ಷಮವಾದ ಪ್ರಾಧಿಕಾರವು ಅಂತಹ ಸರ್ಕಾರಿ ನೌಕರನನ್ನು ಅಮಾನತ್ತಿನಲ್ಲಿರಿಸಬಹುದು.

(ಬಿ) ಅಮಾನತ್ತುಗೊಂಡ ಆರು ತಿಂಗಳ ಅವಧಿಯೊಳಗೆ ಆಪಾಧಿತ ನೌಕರನ ವಿರುದ್ಧ ಇಲಾಖಾ ವಿಚಾರಣೆ ಪ್ರಾರಂಭಿಸದಿದ್ದಲ್ಲಿ ಅಥವಾ ನ್ಯಾಯಾಲಯದಲ್ಲಿ ದೋಷಾರೋಪಣೆ ಪಟ್ಟಿ ಸಲ್ಲಿಸದಿದ್ದಲ್ಲಿ ಅಂತಹ ನೌಕರನ ಅಮಾನತ್ತನ್ನು ರದ್ದುಗೊಳಿಸುವ ಅಥವಾ ಮುಂದುವರೆಸುವ ಬಗ್ಗೆ ಸಕ್ಷಮ ಪ್ರಾಧಿಕಾರವು ತೀರ್ಮಾನಿಸತಕ್ಕದ್ದು ಹಾಗೂ ಈ ಅವಧಿಯೊಳಗೆ ತೀರ್ಮಾನಿಸಿ ಮುಂದುವರೆಸಲು ಆದೇಶಿಸದಿದ್ದಲ್ಲಿ ಅಮಾನತ್ತು ಭಾವಿತ (Deemed) ಆಧಾರದ ಮೇಲೆ ಅಂದರೆ ಅಮಾನತ್ತಿನ ದಿನಾಂಕದಿಂದ ಆರು ತಿಂಗಳು ಪೂರ್ಣಗೊಂಡ ದಿನಾಂಕದಿಂದ ರದ್ದಾಗುವುದು. ಈ ರೀತಿ ಅಮಾನತ್ತು ಆದೇಶವು ರದ್ದುಗೊಂಡ ನಂತರ, ನೇಮಕಾತಿ ಪ್ರಾಧಿಕಾರದಿಂದ ಸ್ಥಳ ನಿಯುಕ್ತಿ ಆದೇಶವನ್ನು ತಕ್ಷಣವೇ ಕೋರುವುದು ಸರ್ಕಾರಿ ನೌಕರನ ಕರ್ತವ್ಯವಾಗಿರುತ್ತದೆ ಹಾಗೂ ಅವನು ಆ ರೀತಿ ಕೋರಲು ವಿಫಲನಾದಲ್ಲಿ ಆತನ ಅಮಾನತ್ತಿನ ಆದೇಶವು ರದ್ದಾದ ದಿನಾಂಕದಿಂದ ಆತನು ಅನಧಿಕೃತವಾಗಿ ಗೈರು ಹಾಜರಾಗಿರುವನೆಂದು ಭಾವಿಸತಕ್ಕದ್ದು;][1]

ಪರಂತು, ಸರ್ಕಾರಿ ನೌಕರನನ್ನು ಅಮಾನತ್ತಿನಲ್ಲಿಡಲು ಸಕ್ಷಮವಾದ ಪ್ರಾಧಿಕಾರವು ಸದರಿ ಅವಧಿಯೊಳಗೆ ಖಂಡ (ಎ)ರಲ್ಲಿ ಉಲ್ಲೇಖಿಸಿರುವ ಪ್ರಾಧಿಕಾರದೊಂದಿಗೆ ಸಮಾಲೋಚಿಸಿದ ನಂತರವೇ ಮತ್ತು ಅಂತಹ ಪ್ರಾಧಿಕಾರವು ಸದರಿ ಅವಧಿಯೊಳಗಾಗಿ ವಿಸ್ತರಿಸಲು ಶಿಫಾರಸ್ಸನ್ನು ಮಾಡಿದಾಗ ಮಾತ್ರ ಈ ಖಂಡದ ಮೇರೆಗೆ ನಿರ್ದಿಷ್ಟಪಡಿಸಿರುವ ಅಮಾನತ್ತಿನ ಅವಧಿಯನ್ನು ಮೀರಿ ವಿಸ್ತರಿಸಬಹುದು. ಇಲ್ಲವಾದಲ್ಲಿ ಈ ಖಂಡದ ಮೇರೆಗೆ ಸರ್ಕಾರಿ ನೌಕರನನ್ನು ಅಮಾನತ್ತಿನಲ್ಲಿಡುವ ಆದೇಶವು ಸ್ವಯಂಚಾಲಿತವಾಗಿ ರದ್ದಾಗುವುದು][20]

[21][(6) XXX][21]

[22][**ಟಿಪ್ಪಣಿ:** ಅಮಾನತ್ತುಗೊಂಡ ಸರ್ಕಾರಿ ನೌಕರನನ್ನು ಅಮಾನತ್ತಿನಿಂದ ತೆರವುಗೊಳಿಸಿದಾಗ ಆತನನ್ನು ಯಾವ ಹುದ್ದೆ/ಸ್ಥಾನದಿಂದ ಅಮಾನತ್ತುಗೊಳಿಸಲಾಗಿತ್ತೋ ಅದೇ ಹುದ್ದೆ/ಸ್ಥಾನದಲ್ಲಿ ಪುನರ್ ನೇಮಕ ಮಾಡತಕ್ಕದ್ದಲ್ಲ][22]

[2][(7) XXX][2]

(8) (1)ನೇ ಉಪನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಈ ಮುಂದಿನ ಪ್ರಾಧಿಕಾರಿಗಳು ವಿಚಾರಣೆಯು ಇತ್ಯರ್ಥದಲ್ಲಿರುವಾಗ ಈ ಕೆಳಕಡಂತೆ ಅಮಾನತ್ತು ಮಾಡಬಹುದು.

| **ರಾಜ್ಯ ಸಿವಿಲ್ ಸೇವೆಗಳ ಸದಸ್ಯರ ವರ್ಗ** | **ಅಮಾನತ್ತು ಮಾಡಬಹುದಾದ ಪ್ರಾಧಿಕಾರಿ** |
| --- | --- |
| (i) ಕರ್ನಾಟಕ ನ್ಯಾಯಾಂಗ ಸೇವೆಯ ಸದಸ್ಯರು | ಕರ್ನಾಟಕ ಉಚ್ಛ ನ್ಯಾಯಾಲಯ |
| [13][(ii) ಕರ್ನಾಟಕ ಆಡಳಿತ ಸೇವೆಯ ಸಮೂಹ 'ಬಿ' ಅಧಿಕಾರಿಗಳು, ಎಂದರೆ, ತಹಶೀಲ್ದಾರರು ಮತ್ತು ಪ್ರಾದೇಶಿಕ ಆಯುಕ್ತರ ಆಡಳಿತ ನಿಯಂತ್ರಣದಲ್ಲಿರುವ ಸಂಬಂಧಿತ ಇಲಾಖೆಗಳಲ್ಲಿ ತತ್ಸಮಾನ ಹುದ್ದೆಗಳನ್ನು ಹೊಂದಿರುವ ಅಧಿಕಾರಿಗಳು | ಪ್ರಾದೇಶಿಕ ಆಯುಕ್ತರು][13] |

(1) 10(1) ನೇ ನಿಯಮದ ಅಡಿಯಲ್ಲಿ, ಗ್ರಾಮಲೆಕ್ಕಿಗರನ್ನು ಅಮಾನತ್ತುಗೊಳಿಸುವ ಅಧಿಕಾರವನ್ನು, ಉಪ ವಿಭಾಗಗಳ ಉಪವಿಭಾಗಾಧಿಕಾರಿಗಳಿಗೆ ವಹಿಸಿಕೊಡಲಾಗಿದೆ. ಅಧಿಸೂಚನೆ ಸಂಖ್ಯೆ ಜಿಎಡಿ 4 ಎಸ್ಎಸ್ಆರ್ 73, ದಿನಾಂಕ 23ನೇ ಜೂನ್ 1973ನ್ನು ನೋಡಿ.

(2) ಜಿಲ್ಲೆಯ ಪರಿಮಿತಿಗಳ ಆಚೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರದ ಯಾರೇ ಅಧಿಕಾರಿಯ ನೇರ ಆಡಳಿತ ನಿಯಂತ್ರಣದಲ್ಲಿ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುವ, ರಾಜ್ಯ ಸಿವಿಲ್ ಸೇವೆಯ ಎಲ್ಲಾ 'ಸಿ'-ಸಮೂಹದವರನ್ನು ಮತ್ತು 'ಡಿ'-ಸಮೂಹದವರನ್ನು ಕರ್ನಾಟಕ ನ್ಯಾಯಾಂಗ ಸೇವೆಯವರನ್ನು ಹೊರತುಪಡಿಸಿ,

ಅಮಾನತ್ತುಗೊಳಿಸುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಪ್ರತ್ಯಾಯೋಜಿಸಲಾಗಿದೆ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 24 ಎಸ್ಎಸ್ಆರ್ 75 ದಿನಾಂಕ: 11.12.1975ನ್ನು ನೋಡಿ.

(ಎ) ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಅವರ ಕಾರ್ಯ ವ್ಯಾಪ್ತಿಯಲ್ಲಿರುವ ಜಿಲ್ಲೆಯ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್ ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಜ್ಯ ಸಿವಿಲ್ ಸೇವೆಗೆ ಸೇರಿದ ಯಾವುದೇ ಇಲಾಖೆಯ (ಕರ್ನಾಟಕ ನ್ಯಾಯಾಂಗ ಇಲಾಖೆಯನ್ನು ಹೊರತುಪಡಿಸಿ) ಸಮೂಹ-ಸಿ ಮತ್ತು ಸಮೂಹ-ಡಿ ನೌಕರರನ್ನು ಅಮಾನತ್ತುಗೊಳಿಸುವ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ.

(3) ಗ್ರಾಮ ಸೇವಕರನ್ನು ಅಮಾನತ್ತುಗೊಳಿಸುವ ಅಧಿಕಾರವನ್ನು ಕೃಷಿ ಇಲಾಖೆಯ ವಿಭಾಗೀಯ ಜಂಟಿ ನಿರ್ದೇಶಕರಿಗೆ ವಹಿಸಿಕೊಡಲಾಗಿದೆ. ಜಿಎಡಿ 37 ಎಸ್ಎಸ್ಆರ್ 76, ದಿನಾಂಕ: 4ನೇ ಆಗಸ್ಟ 1976ನ್ನು ನೋಡಿ.

(4) ಸರ್ಕಾರದ ಕಾರ್ಯದರ್ಶಿಗಳಿಗೆ, ತಮ್ಮ ಆಡಳಿತ ನಿಯಂತ್ರಣದಲ್ಲಿ ಕೆಲಸ ಮಾಡುತ್ತಿರುವ ಕರ್ನಾಟಕ ಸಚಿವಾಲಯದ ಸಮೂಹ ಸಿ ಮತ್ತು ಡಿ ನೌಕರರನ್ನು ಅಮಾನತ್ತುಗೊಳಿಸುವ ಅಧಿಕಾರವನ್ನು ವಹಿಸಿಕೊಡಲಾಗಿದೆ. ಅಧಿಸೂಚನೆ ಸಂಖ್ಯೆ: ಜಿಎಡಿ 38 ಎಸ್ಎಸ್ಆರ್ 74(1) ದಿನಾಂಕ 19ನೇ ಅಕ್ಟೋಬರ್ 1974ನ್ನು ನೋಡಿ.

(5) ಕೆ.ಸಿ.ಎಸ್.ಆರ್.ನ ಪರಿಶಿಷ್ಟ-I ರಲ್ಲಿ ನಿರ್ದಿಷ್ಟಪಡಿಸಲಾದ ಪ್ರಧಾನ ಇಲಾಖಾ ಮುಖ್ಯಸ್ಥರಿಗೆ, ಸಮೂಹ 'ಬಿ' ಅಧಿಕಾರಿಗಳನ್ನು ಅಮಾನತ್ತುಗೊಳಿಸುವ ಅಧಿಕಾರವನ್ನು ವಹಿಸಿಕೊಡಲಾಗಿದೆ. ಅಧಿಸೂಚನೆ ಸಂಖ್ಯೆ: ಡಿಪಿಎಆರ್ 34 ಎಸ್ಎಸ್ಆರ್ 74 ದಿನಾಂಕ: 3ನೇ ಸೆಪ್ಟೆಂಬರ್ 76ನ್ನು ನೋಡಿ.

[4][(6) ಸರ್ಕಾರದ ಕಾರ್ಯದರ್ಶಿ, ಸಿಬ್ಬಂಧಿ ಮತ್ತು ಆಡಳಿತ ಸುಧಾರಣಾ ಇಲಾಖೆ ಇವರಿಗೆ, ಕರ್ನಾಟಕ ಸರ್ಕಾರ ಸಚಿವಾಲಯ ಸೇವೆಗೆ ಸೇರಿದ ಎಲ್ಲ ಸಮೂಹ 'ಸಿ' ಮತ್ತು ಸಮೂಹ 'ಡಿ' ನೌಕರರನ್ನು ಅಮಾನತ್ತುಗೊಳಿಸುವ ಅಧಿಕಾರ ನೀಡಲಾಗಿದೆ][4].

[5][(7) ಸರ್ಕಾರದ ಎಲ್ಲಾ ಅಪರ ಕಾರ್ಯದರ್ಶಿಗಳಿಗೆ, ಜಂಟಿ ಕಾರ್ಯದರ್ಶಿಗಳಿಗೆ ಮತ್ತು ಉಪಕಾರ್ಯದರ್ಶಿಗಳಿಗೆ, ತಮ್ಮ ನಿಯಂತ್ರಣದಲ್ಲಿ ಕೆಲಸ ಮಾಡುತ್ತಿರುವ ಕರ್ನಾಟಕ ಸರ್ಕಾರ ಸಚಿವಾಲಯ ಸೇವೆಗೆ ಸೇರಿದ ಸಮೂಹ 'ಸಿ' ಅಥವಾ 'ಡಿ' ಹುದ್ದೆ ಹೊಂದಿರುವ ಯಾರೇ ಸರ್ಕಾರಿ ನೌಕರನನ್ನು ಅಮಾನತ್ತಿನಲ್ಲಿಡುವ ಅಧಿಕಾರವನ್ನು ನೀಡಲಾಗಿದೆ][5].

[6][(8) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಇವರಿಗೆ ಜನರಲ್ ಡ್ಯೂಟಿ ಮೆಡಿಕಲ್ ಆಫೀಸರುಗಳನ್ನು ಅಮಾನತ್ತಿನಲ್ಲಿಡುವ ಅಧಿಕಾರವನ್ನು ನೀಡಲಾಗಿದೆ][6].

[10][(9) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇವರಿಗೆ, ಸಾರ್ವಜನಿಕ ಶಿಕ್ಷಣ ಇಲಾಖೆಯ ಸಮೂಹ 'ಎ' ಕಿರಿಯ ಶ್ರೇಣಿಯ ಅಧಿಕಾರಿಗಳನ್ನು [12][XXX][12] ಅಮಾನತ್ತಿನಲ್ಲಿಡುವ ಅಧಿಕಾರವನ್ನು ನೀಡಲಾಗಿದೆ][10].

[9][(10) (ಎ) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಇವರಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವಾ ಇಲಾಖೆಗೆ ಸೇರಿದ [18][74400-109600][18] ರೂಪಾಯಿಗಳ (ಕಾಲಕಾಲಕ್ಕೆ ಪರಿಷ್ಕೃತವಾಗಬಹುದಾದಂಥ) ವೇತನ ಶ್ರೇಣಿಯವರೆಗಿನ ಮತ್ತು ಈ ವೇತನ ಶ್ರೇಣಿಯನ್ನೊಳಗೊಂಡ ಹುದ್ದೆ ಹೊಂದಿರುವ ಯಾರೇ ಸರ್ಕಾರಿ ನೌಕರನನ್ನು ಅಮಾನತ್ತಿನಲ್ಲಿಡುವ ಅಧಿಕಾರವನ್ನು ನೀಡಲಾಗಿದೆ; ಮತ್ತು

[14][(b) Deputy Commissioner of Excise at District level and Joint Commissioner of Excise (Enforcement and Intelligence) at the Divisional level and Joint Commissioner of Excise (State Excise Intelligence Bureau) at the State level are empowered to place under suspension any Group "C" and "D" official working under their administrative control.][14]

[16][(c) Technical Assistants to the Deputy Commissioner and Ex-Officio Deputy Directors of Land Records are empowered to place under suspension

any Group “C” and “D” Official working under their respective administrative control][16]; and

[19][(ಡಿ) ಸರ್ಕಾರದ ಕಾರ್ಯದರ್ಶಿ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಹಾಗೂ ಪದನಿಮಿತ್ತ ಸರ್ಕಾರದ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖೀಕ ಇಲಾಖೆ ಇವರಿಗೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಕಾರ್ಯವ್ಯಾಪ್ತಿಗೆ ಒಳಪಡುವ ಯಾವುದೇ ಇಲಾಖೆಗೆ ಸೇರಿದ ಬಿ, ಸಿ ಮತ್ತು ಡಿ ಗುಂಪಿಗೆ ಸೇರಿದ ಸರ್ಕಾರಿ ನೌಕರರನ್ನು ಸೇವೆಯಿಂದ ಅಮಾನತ್ತುಗೊಳಿಸುವ ಅಧಿಕಾರವನ್ನು ನೀಡಲಾಗಿದ][19]

[9][(ಇ) ಕೋಷ್ಟಕ-I ಮತ್ತು II ರಲ್ಲಿ ನಿರ್ದಿಷ್ಟಪಡಿಸಿದ ಈ ಕೆಳಕಂಡ ಅಧಿಕಾರಿಗಳಿಗೆ ತಮ್ಮ ಆಡಳಿತ ನಿಯಂತ್ರಣದಲ್ಲಿ ಕೆಲಸ ಮಾಡುತ್ತಿರುವ ಸಮೂಹ 'ಸಿ' ಮತ್ತು 'ಡಿ' ಹುದ್ದೆಗಳನ್ನು ಹೊಂದಿರುವ ಸರ್ಕಾರಿ ನೌಕರರನ್ನು ಅಮಾನತ್ತಿನಲ್ಲಿಡುವ ಅಧಿಕಾರವನ್ನು ನೀಡಲಾಗಿದೆ:-

**ಕೋಷ್ಟಕ-I**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ**

1. ಮುಖ್ಯ ಆಡಳಿತಾಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ.
2. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ
3. ಜಿಲ್ಲಾ ಸರ್ಜನ್
4. ಪ್ರಾಂಶುಪಾಲರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಕೇಂದ್ರ
5. ಪ್ರಾಂಶುಪಾಲರು, ಜಿಲ್ಲಾ ತರಬೇತಿ ಕೇಂದ್ರ
6. ಅಧೀಕ್ಷಕರು, ಕೆ.ಸಿ.ಜಿ.ಆಸ್ಪತ್ರೆ, ಬೆಂಗಳೂರು
7. ಅಧೀಕ್ಷಕರು, ಜಯನಗರ ಜನರಲ್ ಆಸ್ಪತ್ರೆ, ಬೆಂಗಳೂರು.
8. ಅಧೀಕ್ಷಕರು, ಎದೆರೋಗ ಮತ್ತು ಕ್ಷಯರೋಗ ಆಸ್ಪತ್ರೆ, ಬೆಂಗಳೂರು
9. ಅಧೀಕ್ಷಕರು, ಹೆಚ್.ಎಸ್.ಐ.ಎಸ್ ಗೌಶಿಯಾ ಆಸ್ಪತ್ರೆ, ಬೆಂಗಳೂರು
10. ಜಿಲ್ಲೆ ಅಧಿಕಾರಿ

**ಕೋಷ್ಟಕ-II**

**ವೈದ್ಯಕೀಯ ಶಿಕ್ಷಣ ಇಲಾಖೆ**

1. ಮುಖ್ಯ ಆಡಳಿತಾಧಿಕಾರಿ, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ
2. ಅಧೀಕ್ಷಕರು, ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ, ಬೆಂಗಳೂರು
3. ಅಧೀಕ್ಷಕರು, ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು
4. ಅಧೀಕ್ಷಕರು, ವಾಣಿವಿಲಾಸ ಆಸ್ಪತ್ರೆ, ಬೆಂಗಳೂರು
5. ಅಧೀಕ್ಷಕರು, ಮಿಂಟೋ ಆಸ್ಪತ್ರೆ, ಬೆಂಗಳೂರು
6. ಪ್ರಾಂಶುಪಾಲರು, ಸರ್ಕಾರಿ ದಂತ ವೈದ್ಯಕೀಯ ಕಾಲೇಜು, ಬೆಂಗಳೂರು
7. ಪ್ರಾಂಶುಪಾಲರು, ಬೆಂಗಳೂರು ವೈದ್ಯಕೀಯ ಕಾಲೇಜು, ಬೆಂಗಳೂರು
8. ಅಧೀಕ್ಷಕರು, ಕೆ.ಆರ್.ಆಸ್ಪತ್ರೆ, ಮೈಸೂರು
9. ಅಧೀಕ್ಷಕರು, ಚೆಲುವಾಂಬ ಆಸ್ಪತ್ರೆ, ಮೈಸೂರು
10. ಅಧೀಕ್ಷಕರು, ಪಿ.ಕೆ.ಟಿ.ಬಿ. ಆಸ್ಪತ್ರೆ, ಮೈಸೂರು
11. ಅಧೀಕ್ಷಕರು, ಸಿ.ಜಿ.ಆಸ್ಪತ್ರೆ, ದಾವಣಗೆರೆ
12. ಅಧೀಕ್ಷಕರು, ಮಹಿಳೆ ಮತ್ತು ಮಕ್ಕಳ ಆಸ್ಪತ್ರೆ, ದಾವಣಗೆರೆ
13. ಅಧೀಕ್ಷಕರು,ಸರ್ಕಾರಿ ವೆನ್‌ಲಾಕ್ ಆಸ್ಪತ್ರೆ, ಮಂಗಳೂರು
14. ಅಧೀಕ್ಷಕರು, ಲೇಡಿ ಗೋಷನ್ ಆಸ್ಪತ್ರೆ, ಮಂಗಳೂರು
15. ಅಧೀಕ್ಷಕರು, ಮಾನಸಿಕ ಆಸ್ಪತ್ರೆ, ಧಾರವಾಡ][9]

[11][16 ಅಧೀಕ್ಷಕರು, ಎಸ್‌ಡಿಎಸ್ ಕ್ಷಯರೋಗ ಮತ್ತು ಎದೆರೋಗಗಳ ಆಸ್ಪತ್ರೆ, ಹೊಸೂರು ರಸ್ತೆ, ಬೆಂಗಳೂರು

17. ಪ್ರಾಂಶುಪಾಲರು, ಮೈಸೂರು ವೈದ್ಯಕೀಯ ಕಾಲೇಜು, ಮೈಸೂರು
18. ಪ್ರಾಂಶುಪಾಲರು, ರಾಜೀವ್ ಗಾಂಧಿ ಎದೆರೋಗ ಆಸ್ಪತ್ರೆ, ಬೆಂಗಳೂರು][11]

---

1. ಅಧಿಸೂಚನೆ ಸಂಖ್ಯೆ ಜಿಎಎಸ್ 28 ಎಸ್‌ಎಸ್‌ಆರ್ 69, ದಿನಾಂಕ: 12.12.1973, ಕೆಜಿಡಿ ದಿನಾಂಕ: 24.1.74ರ ಮೂಲಕ ಪ್ರತಿಯೋಜಿಸಲಾಗಿದೆ.

2. ಅಧಿಸೂಚನೆ ಸಂಖ್ಯೆ ಜಿಎಡಿ 18ಎಸ್‌ಎಸ್‌ಆರ್ 74, ದಿನಾಂಕ: 06.08.74 ರ ಮೂಲಕ ಬಿಟ್ಟುಬಿಡಲಾಗಿದೆ. (29.08.74 ರಿಂದ ಜಾರಿಗೆ ಬಂದಿದೆ.)
3. ಅಧಿಸೂಚನೆ ಸಂಖ್ಯೆ: ಡಿಪಿಎಆರ್ 56 ಎಸ್‌ಎಸ್‌ಆರ್ 76, ದಿನಾಂಕ: 12.04.77 ರ ಮೂಲಕ ಪ್ರತಿಯೋಜಿಸಲಾಗಿದೆ.
4. ಅಧಿಸೂಚನೆ ಸಂಖ್ಯೆ ಡಿಪಿಎಆರ್ 15 ಎಸ್‌ಡಿಇ 96, ದಿನಾಂಕ: 20.06.97 ರ ಮೂಲಕ ಸೇರಿಸಲಾಗಿದೆ.
5. ಅಧಿಸೂಚನೆ ಸಂಖ್ಯೆ:ಡಿಪಿಎಆರ್ 7 ಎಸ್‌ಡಿಇ 96, ದಿನಾಂಕ: 20.06.1997 ರ ಮೂಲಕ ಸೇರಿಸಲಾಗಿದೆ.
6. ಅಧಿಸೂಚನೆ ಸಂಖ್ಯೆ: ಡಿಪಿಎಆರ್ 26 ಎಸ್‌ಡಿಇ 2001, ದಿನಾಂಕ; 07.12.2001ರ ಮೂಲಕ ಸೇರಿಸಲಾಗಿದೆ.
7. ಅಧಿಸೂಚನೆ ಸಂಖ್ಯೆ ಡಿಪಿಎಆರ್ 4 ಎಸ್‌ಡಿಇ 2000, ದಿನಾಂಕ: 05.4.2002ರ ಮೂಲಕ ಪ್ರತಿಯೋಜಿಸಲಾಗಿದೆ. (15.4.2002 ರಿಂದ ಜಾರಿಗೆ ಬಂದಿದೆ)
8. ಅಧಿಸೂಚನೆ ಸಂಖ್ಯೆ ಡಿಪಿಎಆರ್ 4 ಎಸ್‌ಡಿಇ 2000, ದಿನಾಂಕ: 05.4.2002ರ ಮೂಲಕ ಬಿಟ್ಟುಬಿಡಲಾಗಿದೆ.
9. ಅಧಿಸೂಚನೆ ಸಂಖ್ಯೆ ಡಿಪಿಎಆರ್ 11 ಎಸ್‌ಡಿಇ 2002 (1), ದಿನಾಂಕ: 19.06.2002ರ ಮೂಲಕ ಸೇರಿಸಲಾಗಿದೆ.
10. ಅಧಿಸೂಚನೆ ಸಂಖ್ಯೆ ಡಿಪಿಎಆರ್ 29 ಎಸ್‌ಡಿಇ 2002, ದಿನಾಂಕ: 4.02.2003ರ ಮೂಲಕ ಸೇರಿಸಲಾಗಿದೆ.
11. ಅಧಿಸೂಚನೆ ಸಂಖ್ಯೆ ಡಿಪಿಎಆರ್ 21 ಎಸ್‌ಡಿ ಒ 2003 (1), ದಿನಾಂಕ: 01.01.2004 ರ ಮೂಲಕ ಸೇರಿಸಲಾಗಿದೆ.
12. ಅಧಿಸೂಚನೆ ಸಂಖ್ಯೆ ಡಿಪಿಎಆರ್ 6 ಎಸ್‌ಡಿಇ 2004, ದಿನಾಂಕ; 16.07.2004ರ ಮೂಲಕ ಬಿಟ್ಟುಬಿಡಲಾಗಿದೆ. (ಕೆಜಿಡಿ 12.08.2004)
13. ಅಧಿಸೂಚನೆ ಸಂಖ್ಯೆ ಡಿಪಿಎಆರ್ 10 ಎಸ್‌ಡಿಇ 2006, ದಿನಾಂಕ; 25.01.2007ರ ಮೂಲಕ ಪ್ರತಿಯೋಜಿಸಲಾಗಿದೆ.
14. ಅಧಿಸೂಚನೆ ಸಂಖ್ಯೆ ಡಿಪಿಎಆರ್ 4 ಎಸ್‌ಡಿಇ 2008, ದಿನಾಂಕ: 18.07.2008ರ ಮೂಲಕ ಸೇರಿಸಲಾಗಿದೆ. ತಿದ್ದೋಲೆ ಸಂಖ್ಯೆ: ಸಿಆಸುಇ 09 ಸೇಇವಿ 2009, ದಿನಾಂಕ: 21.03.2009
15. ಅಧಿಸೂಚನೆ ಸಂಖ್ಯೆ ಡಿಪಿಎಆರ್ 25 ಎಸ್‌ಡಿಇ 2007, ದಿನಾಂಕ: 26.08.2008ರ ಮೂಲಕ ಸೇರಿಸಲಾಗಿದೆ.
16. ಅಧಿಸೂಚನೆ ಸಂಖ್ಯೆ ಡಿಪಿಎಆರ್ 20 ಎಸ್‌ಡಿಇ 2009, ದಿನಾಂಕ; 30.07.2009ರ ಮೂಲಕ ಸೇರಿಸಲಾಗಿದೆ.
17. ಅಧಿಸೂಚನೆ ಸಂಖ್ಯೆ ಡಿಪಿಎಆರ್ 67 ಎಸ್‌ಡಿಇ 2013, ದಿನಾಂಕ; 5.11.2014ರ ಮೂಲಕ ಸೇರಿಸಲಾಗಿದೆ.
18. ಅಧಿಸೂಚನೆ ಸಂಖ್ಯೆ ಡಿಪಿಎಆರ್ 27 ಎಸ್‌ಡಿಇ 2018, ದಿನಾಂಕ; 08.04.2019 ಮೂಲಕ ಪ್ರತಿಯೋಜಿಸಲಾಗಿದೆ.
19. ಅಧಿಸೂಚನೆ ಸಂಖ್ಯೆ ಡಿಪಿಎಆರ್ 23 ಎಸ್‌ಡಿಇ 2019, ದಿನಾಂಕ; 10.01.2020ರ ಮೂಲಕ ಸೇರಿಸಲಾಗಿದೆ.
20. ಅಧಿಸೂಚನೆ ಸಂಖ್ಯೆ ಡಿಪಿಎಆರ್ 28 ಎಸ್‌ಡಿಇ 2018, ದಿನಾಂಕ; 29.10.2020ರ ಮೂಲಕ ಪ್ರತಿಯೋಜಿಸಲಾಗಿದೆ.
21. ಅಧಿಸೂಚನೆ ಸಂಖ್ಯೆ ಡಿಪಿಎಆರ್ 28 ಎಸ್‌ಡಿಇ 2018, ದಿನಾಂಕ; 29.10.2020ರ ಮೂಲಕ ಬಿಟ್ಟುಬಿಡಲಾಗಿದೆ.
22. ಅಧಿಸೂಚನೆ ಸಂಖ್ಯೆ ಡಿಪಿಎಆರ್ 28 ಎಸ್‌ಡಿಇ 2018, ದಿನಾಂಕ; 29.10.2020ರ ಮೂಲಕ ಸೇರಿಸಲಾಗಿದೆ.

[1][**10ಎ. ಪ್ರಾಧಿಕಾರಿಯು ವ್ಯವಹರಣೆಗಳನ್ನು ಹೂಡುವುದು:-**

(1) ರಾಜ್ಯಪಾಲರು ಅಥವಾ ಅವರಿಂದ ಅಧಿಕಾರ ಪಡೆದ ಇತರ ಯಾರೇ ಪ್ರಾಧಿಕಾರಿಯು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ,-
(ಎ) ಯಾರೇ ಸರ್ಕಾರಿ ನೌಕರನ ವಿರುದ್ಧ ಶಿಸ್ತು ವ್ಯವಹರಣೆಗಳನ್ನು ಹೂಡಬಹುದು;
(ಬಿ) ಈ ನಿಯಮಗಳ ಮೇರೆಗೆ ಶಿಸ್ತು ಪ್ರಾಧಿಕಾರಿಯು ಯಾವ ಸರ್ಕಾರಿ ನೌಕರನ ವಿರುದ್ಧ 8ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸಲು ಸಕ್ಷಮನಾಗಿರುವನೋ ಆ ಸರ್ಕಾರಿ ನೌಕರನ ವಿರುದ್ಧ ಶಿಸ್ತು ವ್ಯವಹರಣೆಗಳನ್ನು ಹೂಡಲು ಆ ಶಿಸ್ತು ಪ್ರಾಧಿಕಾರಿಗೆ ನಿರ್ದೇಶಿಸಬಹುದು.

(2) 8ನೇ ನಿಯಮದ (i) ರಿಂದ (ivಎ) ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ಈ ನಿಯಮಗಳ ಮೇರೆಗೆ ವಿಧಿಸಲು ಸಕ್ಷಮನಾಗಿರುವ ಶಿಸ್ತು ಪ್ರಾಧಿಕಾರಿಯು, 8ನೇ ನಿಯಮದ (v) ರಿಂದ (viii)ರ ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸಲು ಈ ನಿಯಮಗಳ ಮೇರೆಗೆ ಸಕ್ಷಮನಾಗಿಲ್ಲದಿದ್ದರೂ ಆ ಶಿಸ್ತು ಪ್ರಾಧಿಕಾರಿಯು (v) ರಿಂದ (viii)ರ ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ಆ ಯಾರೇ ಸರ್ಕಾರಿ ನೌಕರನಿಗೆ ವಿಧಿಸಲು ಶಿಸ್ತು ವ್ಯವಹರಣೆಗಳನ್ನು ಹೂಡಬಹುದು][1].

..........................................................................................................................................

1. ಅಧಿಸೂಚನೆ ಸಂಖ್ಯೆ ಜಿಎಡಿ 28 ಎಸ್‌ಎಸ್‌ಆರ್ 69, ದಿನಾಂಕ: 12.12.1973ರ ಮೂಲಕ ಸೇರಿಸಲಾಗಿದೆ. 10ಎ ನಿಯಮದ ಮೇರೆಗೆ ಸದರಿ ನಿಯಮದ ಉದ್ದೇಶಕ್ಕಾಗಿ ಸರ್ಕಾರದ ಕಾರ್ಯದರ್ಶಿಗಳಿಗೆ ಅಧಿಕಾರ ನೀಡಲಾಗಿದೆ. ಅಧಿಸೂಚನೆ ಸಂಖ್ಯೆ: ಜಿಎಡಿ 38 ಎಸ್‌ಎಸ್‌ಆರ್ 74 (ii), ದಿನಾಂಕ: 19.10.74ನ್ನು ನೋಡಿ.

**[1][11. ಕಠಿಣ ದಂಡನೆಗಳನ್ನು ವಿಧಿಸಲು ಕಾರ್ಯವಿಧಾನ,-**

(1) 8ನೇ ನಿಯಮದ (v) ರಿಂದ (viii)ರ ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸುವ ಆದೇಶವನ್ನು, ಸಾಧ್ಯವಾಗಬಹುದಾದಷ್ಟರ ಮಟ್ಟಿಗೆ, ಈ ನಿಯಮದಲ್ಲಿ ಮತ್ತು ನಿಯಮ II-ಎ ದಲ್ಲಿ ಉಪಬಂಧಿಸಿದ ರೀತಿಯಲ್ಲಿ ವಿಚಾರಣೆಯನ್ನು ಮಾಡಿದ ತರುವಾಯ ಹೊರತು ಮಾಡತಕ್ಕದ್ದಲ್ಲ.

(2) ಶಿಸ್ತು ಪ್ರಾಧಿಕಾರಿಯು ಸರ್ಕಾರಿ ನೌಕರನ ವಿರುದ್ಧ ದುರ್ನಡತೆಯ ಅಥವಾ ದುರ್ವರ್ತನೆಯ ಯಾವುದೇ ಆರೋಪಣೆಯ ಸತ್ಯಾಂಶವನ್ನು ವಿಚಾರಣೆ ಮಾಡಲು ಆಧಾರಗಳು ಇವೆ ಎಂದು ಅಭಿಪ್ರಾಯಪಟ್ಟಾಗಲೆಲ್ಲಾ, ತಾನೇ ಸ್ವತಃ ವಿಚಾರಣೆ ಮಾಡಬಹುದು ಅಥವಾ ಅದರ ಸತ್ಯಾಂಶವನ್ನು ವಿಚಾರಣೆ ಮಾಡಲು ಈ ನಿಯಮದ ಮೇರೆಗೆ ಒಬ್ಬ ಪ್ರಾಧಿಕಾರಿಯನ್ನು ನೇಮಿಸಬಹುದು.

[2 &4][* ಪರಂತುಕ-XXX][2&4]

**ವಿವರಣೆ:-** ಶಿಸ್ತು ಪ್ರಾಧಿಕಾರಿಯು ತಾನೇ ವಿಚಾರಣೆಯನ್ನು ನಡೆಸುವಲ್ಲಿ (7) ರಿಂದ (20)ರ ವರೆಗಿನ ಉಪನಿಯಮಗಳಲ್ಲಿ ಮತ್ತು (22)ನೇ ಉಪನಿಯಮದಲ್ಲಿ ವಿಚಾರಣಾ ಪ್ರಾಧಿಕಾರಿಗೆ ಮಾಡಿದ ಯಾವುದೇ ಉಲ್ಲೇಖವನ್ನು ಶಿಸ್ತು ಪ್ರಾಧಿಕಾರಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

(3) ಸರ್ಕಾರಿ ನೌಕರನ ವಿರುದ್ಧ ಈ ನಿಯಮದ ಮತ್ತು 11ಎ ನಿಯಮದ ಮೇರೆಗೆ ವಿಚಾರಣೆಯನ್ನು ನಡೆಸಲು ಪ್ರಸ್ತಾವಿಸಿರುವಲ್ಲಿ, ಶಿಸ್ತು ಪ್ರಾಧಿಕಾರಿಯು,-

(i) ದುರ್ನಡತೆಯ ಅಥವಾ ದುರ್ವರ್ತನೆಯ ಆರೋಪಣೆಗಳ ಸರಾಂಶವನ್ನು ಆರೋಪಗಳ ಪಟ್ಟಿಯಲ್ಲಿ ನಿಶ್ಚಿತವಾಗಿ ಮತ್ತು ಸ್ಪಷ್ಟವಾಗಿ;

(ii) ಪ್ರತಿಯೊಂದು ಆರೋಪ ಪಟ್ಟಿಗೆ ಸಮರ್ಥನೆಯಾಗಿ, ದುರ್ನಡತೆಯ ಅಥವಾ ದುರ್ವರ್ತನೆಯ ಆರೋಪಗಳ ವಿವರಣೆಯನ್ನು ಸಿದ್ಧಪಡಿಸತಕ್ಕದ್ದು ಅಥವಾ ಸಿದ್ಧಪಡಿಸುವಂತೆ ಮಾಡತಕ್ಕದ್ದು ಮತ್ತು ಅವು,-

(ಎ) ಸರ್ಕಾರಿ ನೌಕರನ ಯಾವುದೇ ಒಪ್ಪಿಗೆ ಅಥವಾ ತಪ್ಪೊಪ್ಪಿಗೆ ಒಳಗೊಂಡಂತೆ ಎಲ್ಲ ಸುಸಂಬದ್ಧ ಸಂಗತಿಗಳ ವಿವರಣೆಯನ್ನು;

(ಬಿ) ಯಾವ ದಸ್ತಾವೇಜುಗಳ ಮೂಲಕ ಮತ್ತು ಯಾವ ಸಾಕ್ಷಿದಾರರ ಮೂಲಕ ಆರೋಪ ವಿಷಯಗಳನ್ನು ಸಮರ್ಥಿಸಲು ಪ್ರಸ್ತಾಪಿಸಲಾಗಿದೆಯೋ ಆ ದಸ್ತಾವೇಜುಗಳ ಪಟ್ಟಿಯನ್ನು ಮತ್ತು ಆ ಸಾಕ್ಷಿದಾರರ ಪಟ್ಟಿಯನ್ನು ಒಳಗೊಂಡಿರತಕ್ಕದ್ದು.

(4) ಶಿಸ್ತು ಪ್ರಾಧಿಕಾರಿಯು ಆರೋಪ ಪಟ್ಟಿಯ ಪ್ರತಿಯನ್ನು, ದುರ್ನಡತೆಯ ಅಥವಾ ದುರ್ವರ್ತನೆಯ ಆರೋಪಗಳ ವಿವರಣೆಯನ್ನು ಮತ್ತು ಯಾವ ದಸ್ತಾವೇಜುಗಳ ಮೂಲಕ ಮತ್ತು ಯಾವ ಸಾಕ್ಷಿದಾರರ ಮೂಲಕ ಆ ಆರೋಪ ವಿಷಯಗಳನ್ನು ಸಮರ್ಥಿಸಲು ಪ್ರಸ್ತಾವಿಸಲಾಗಿದೆಯೋ ಆ ದಸ್ತಾವೇಜುಗಳ ಮತ್ತು ಸಾಕ್ಷಿದಾರರ ಪಟ್ಟಿಯನ್ನು ಸರ್ಕಾರಿ ನೌಕರನಿಗೆ ಕೊಡತಕ್ಕದ್ದು ಅಥವಾ ಕೊಡಿಸತಕ್ಕದ್ದು ಮತ್ತು ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ತನ್ನ ಪ್ರತಿರಕ್ಷೆಯ ಲಿಖಿತ ಹೇಳಿಕೆಯನ್ನು ಸಲ್ಲಿಸಲು ಮತ್ತು ತಾನೇ ಖುದ್ದಾಗಿ ಅಹವಾಲು ಹೇಳಿಕೊಳ್ಳಲು

ಅವನು ಇಚ್ಛಿಸುತ್ತಾನೆಯೇ ಎಂಬುದನ್ನು ತಿಳಿಸಲು ಸರ್ಕಾರಿ ನೌಕರನನ್ನು ಅಗತ್ಯಪಡಿಸತಕ್ಕದ್ದು.

(5)(ಎ) ಪ್ರತಿರಕ್ಷೆಯ ಲಿಖಿತ ಹೇಳಿಕೆಯನ್ನು ಸ್ವೀಕರಿಸಿದ ಮೇಲೆ, ಶಿಸ್ತು ಪ್ರಾಧಿಕಾರಿಯು ಒಪ್ಪದಿರುವಂಥ ಆರೋಪ ವಿಷಯಗಳ ಬಗ್ಗೆ ತಾನೇ ಸ್ವತಃ ವಿಚಾರಣೆ ಮಾಡಬಹುದು ಅಥವಾ (2)ನೇ ಉಪನಿಯಮದ ಮೇರೆಗೆ ಈ ಉದ್ದೇಶಕ್ಕಾಗಿ ವಿಚಾರಣಾ ಪ್ರಾಧಿಕಾರಿಯನ್ನು ನೇಮಿಸುವುದು ಅವಶ್ಯವೆಂದು ಪರಿಗಣಿಸಿದರೆ, ಹಾಗೆ ಮಾಡಬಹುದು ಮತ್ತು ಸರ್ಕಾರಿ ನೌಕರನು ತನ್ನ ಪ್ರತಿರಕ್ಷೆಯ ಲಿಖಿತ ಹೇಳಿಕೆಯಲ್ಲಿ ಎಲ್ಲ ಆರೋಪಗಳನ್ನು ಒಪ್ಪಿಕೊಂಡಿರುವಲ್ಲಿ, ಶಿಸ್ತು ಪ್ರಾಧಿಕಾರಿಯು ತಾನು ಸೂಕ್ತವೆಂದು ಭಾವಿಸಬಹುದಾದಂಥ ಸಾಕ್ಷ್ಯವನ್ನು ಪಡೆದುಕೊಂಡ ತರುವಾಯ, ಪ್ರತಿಯೊಂದು ಆರೋಪದ ಮೇಲೆ ತನ್ನ ನಿರ್ಣಯಗಳನ್ನು ದಾಖಲಿಸತಕ್ಕದ್ದು ಮತ್ತು 11ಎ ನಿಯಮದಲ್ಲಿ ವಿಧಿಸಿರುವ ರೀತಿಯಲ್ಲಿ ಕ್ರಮ ಕೈಗೊಳ್ಳತಕ್ಕದ್ದು.

(ಬಿ) ಸರ್ಕಾರಿ ನೌಕರನು ಪ್ರತಿರಕ್ಷೆಯ ಲಿಖಿತ ಹೇಳಿಕೆಯನ್ನು ಸಲ್ಲಿಸದಿದ್ದಲ್ಲಿ, ಶಿಸ್ತು ಪ್ರಾಧಿಕಾರಿಯು ತಾನೇ ಸ್ವತಃ ಆರೋಪ ವಿಷಯಗಳ ಬಗ್ಗೆ ವಿಚಾರಣೆ ಮಾಡಬಹುದು ಅಥವಾ ಈ ಉದ್ದೇಶಕ್ಕಾಗಿ ವಿಚಾರಣಾ ಪ್ರಾಧಿಕಾರಿಯನ್ನು (2)ನೇ ಉಪನಿಯಮದ ಮೇರೆಗೆ ನೇಮಿಸುವುದು ಅವಶ್ಯವೆಂದು ತಾನು ಪರಿಗಣಿಸಿದರೆ, ಹಾಗೆ ಮಾಡಬಹುದು.

(ಸಿ) ಶಿಸ್ತು ಪ್ರಾಧಿಕಾರಿಯು ತಾನೇ ಸ್ವತಃ ಯಾವುದೇ ಆರೋಪ ವಿಷಯಗಳ ಬಗ್ಗೆ ವಿಚಾರಣೆ ಮಾಡುವಲ್ಲಿ ಅಥವಾ ಅಂಥ ಆರೋಪದ ಬಗ್ಗೆ ವಿಚಾರಣೆಯನ್ನು ಮಾಡುವುದಕ್ಕಾಗಿ ವಿಚಾರಣಾ ಪ್ರಾಧಿಕಾರಿಯನ್ನು ನೇಮಿಸುವಲ್ಲಿ, ಆರೋಪ ವಿಷಯಗಳನ್ನು ಸಮರ್ಥಿಸುವ ಸಲುವಾಗಿ ತನ್ನ ಪರವಾಗಿ ಪ್ರಕರಣವನ್ನು ಮಂಡಿಸುವುದಕ್ಕೆ ಸರ್ಕಾರಿ ನೌಕರನನ್ನು ಅಥವಾ ನ್ಯಾಯವಾದಿಯನ್ನು "ಮಂಡನಾಧಿಕಾರಿ"ಯನ್ನಾಗಿ ಆದೇಶದ ಮೂಲಕ ನೇಮಿಸಬಹುದು.

(6) ಶಿಸ್ತು ಪ್ರಾಧಿಕಾರಿಯು ವಿಚಾರಣಾ ಪ್ರಾಧಿಕಾರಿಯಾಗಿರುವಾಗ ವಿಚಾರಣಾ ಪ್ರಾಧಿಕಾರಿಗೆ,-

(i) ಆರೋಪ ಪಟ್ಟಿಯ ಮತ್ತು ದುರ್ನಡತೆಯ ಅಥವಾ ದುರ್ವರ್ತನೆಯ ಆರೋಪಣೆಗಳ ವಿವರ ಪಟ್ಟಿಯ ಪ್ರತಿಯನ್ನು;

(ii) ಸರ್ಕಾರಿ ನೌಕರನು ಸಲ್ಲಿಸಿದ ಪ್ರತಿರಕ್ಷೆಯ ಲಿಖಿತ ಹೇಳಿಕೆ ಯಾವುದಾದರೂ ಇದ್ದರೆ, ಅದರ ಪ್ರತಿಯನ್ನು;

(iii) (3)ನೇ ಉಪನಿಯಮದಲ್ಲಿ ಉಲ್ಲೇಖಿಸಿದ ಸಾಕ್ಷಿದಾರರ ಹೇಳಿಕೆಗಳು ಯಾವುವಾದರೂ ಇದ್ದರೇ, ಅವುಗಳ ಪ್ರತಿಯನ್ನು;

(iv) (3)ನೇ ಉಪನಿಯಮದಲ್ಲಿ ಉಲ್ಲೇಖಿಸಿದ ದಸ್ತಾವೇಜುಗಳನ್ನು ಸರ್ಕಾರಿ ನೌಕರನಿಗೆ ತಲುಪಿಸಿರುವುದನ್ನು ರುಜುವಾತುಪಡಿಸುವ ಸಾಕ್ಷ್ಯವನ್ನು; ಮತ್ತು

(v) "ಮಂಡನಾಧಿಕಾರಿ"ಯನ್ನು ನೇಮಿಸಿದ ಆದೇಶದ ಪ್ರತಿಯನ್ನು

-ಕಳುಹಿಸಿಕೊಡತಕ್ಕದ್ದು;

[3, 4 &5][ಪರಂತುಕವನ್ನು-XXX] [3, 4 &5]

(7) ಸರ್ಕಾರಿ ನೌಕರನು, ಆರೋಪ ವಿಷಯಗಳನ್ನು ಹಾಗೂ ದುರ್ನಡತೆ ಅಥವಾ ದುರ್ವರ್ತನೆಯ ಆರೋಪಣೆಗಳ ವಿವರಣೆಯನ್ನು ಅವನು ಸ್ವೀಕರಿಸಿದ ದಿನಾಂಕದಿಂದ ಹತ್ತು ಕೆಲಸದ ದಿನಗಳೊಳಗೆ, ವಿಚಾರಣಾ ಪ್ರಾಧಿಕಾರಿಯು ಈ ಸಂಬಂಧವಾಗಿ ಲಿಖಿತ ನೋಟೀಸಿನ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಅಂಥ ದಿವಸದಂದು ಮತ್ತು ಅಂಥ ಕಾಲದಲ್ಲಿ ಅಥವಾ ವಿಚಾರಣಾ ಪ್ರಾಧಿಕಾರಿಯು ಅನುಮತಿಸಬಹುದಾದಂಥ ಹತ್ತು ದಿನಗಳಿಗೆ ಮೀರದ ಇನ್ನೂ ಹೆಚ್ಚಿನ ಅವಧಿಯೊಳಗೆ ವಿಚಾರಣಾ ಪ್ರಾಧಿಕಾರಿಯ ಮುಂದೆ ಖುದ್ದಾಗಿ ಹಾಜರಾಗತಕ್ಕದ್ದು.

(8) ಸರ್ಕಾರಿ ನೌಕರನು ತನ್ನ ಪರವಾಗಿ ಪ್ರಕರಣವನ್ನು ಮಂಡಿಸಲು ಯಾರೇ ಇತರ ಸರ್ಕಾರಿ ನೌಕರನ [6][ಅಥವಾ ನಿವೃತ್ತ ಸರ್ಕಾರಿ ನೌಕರನ][6] ನೆರವನ್ನು ತೆಗೆದುಕೊಳ್ಳಬಹುದು, ಆದರೆ ಶಿಸ್ತು ಪ್ರಾಧಿಕಾರಿಯು ನೇಮಿಸಿದ ಮಂಡನಾಧಿಕಾರಿಯು ನ್ಯಾಯವಾದಿಯಾಗಿದ್ದರೆ ಅಥವಾ ಶಿಸ್ತು ಪ್ರಾಧಿಕಾರಿಯ ಪ್ರಕರಣದ ಸಂದರ್ಭಗಳನ್ನು ಗಮನಿಸಿ ನ್ಯಾಯವಾದಿಯನ್ನು ನೇಮಿಸಿಕೊಳ್ಳಲು ಅನುಮತಿಸಿದ ಹೊರತು, ಈ ಉದ್ದೇಶಕ್ಕಾಗಿ ನ್ಯಾಯವಾದಿಯನ್ನು ನೇಮಕ ಮಾಡಿಕೊಳ್ಳತಕ್ಕದ್ದಲ್ಲ;

[6][ಪರಂತು, ನಿವೃತ್ತ ಸರ್ಕಾರಿ ನೌಕರನು ನ್ಯಾಯವಾದಿ ಕೂಡ ಆಗಿದ್ದಾಗ, ಸರ್ಕಾರಿ ನೌಕರನು, ಶಿಸ್ತು ಪ್ರಾಧಿಕಾರಿಯು ನೇಮಿಸಿದ ಮಂಡನಾಧಿಕಾರಿಯು ನ್ಯಾಯವಾದಿಯಾಗಿದ್ದರೆ ಅಥವಾ ಶಿಸ್ತು ಪ್ರಾಧಿಕಾರಿಯು ಪ್ರಕರಣದ ಸಂದರ್ಭಗಳನ್ನು ಗಮನಿಸಿ ನ್ಯಾಯವಾದಿಯಾಗಿರುವ

ನಿವೃತ್ತ ಸರ್ಕಾರಿ ನೌಕರನನ್ನು ನೇಮಿಸಿಕೊಳ್ಳಲು ಅನುಮತಿಸಿದ ಹೊರತು, ನೇಮಿಸಿಕೊಳ್ಳತಕ್ಕದ್ದಲ್ಲ.][6]

(9) ಸರ್ಕಾರಿ ನೌಕರನು ತನ್ನ ಪ್ರತಿರಕ್ಷೆಯ ಲಿಖಿತ ಹೇಳಿಕೆಯಲ್ಲಿ ಯಾವುದೇ ಆರೋಪ ವಿಷಯಗಳನ್ನು ಒಪ್ಪದೆ ಅಥವಾ ಪ್ರತಿರಕ್ಷೆಯ ಯಾವುವೇ ಲಿಖಿತ ಹೇಳಿಕೆಯನ್ನು ಸಲ್ಲಿಸದೆ ವಿಚಾರಣಾ ಪ್ರಾಧಿಕಾರಿಯ ಮುಂದೆ ಹಾಜರಾದರೆ, ಅಂಥ ಪ್ರಾಧಿಕಾರಿಯು, ಅವನು ತಪ್ಪಿತಸ್ಥನೇ ಅಥವಾ ಯಾವುದಾದರೂ ಪ್ರತಿರಕ್ಷೆಯನ್ನು ಸಲ್ಲಿಸುವನೇ ಮತ್ತು ಯಾವುವೇ ಆರೋಪ ವಿಷಯದ ತಪ್ಪಿತಸ್ಥನೆಂದು ಒಪ್ಪಿಕೊಳ್ಳುತ್ತಾನೆಯೇ ಹೇಗೆ ಎಂಬುದನ್ನು ಅವನನ್ನು ಕೇಳತಕ್ಕದ್ದು, ವಿಚಾರಣಾ ಪ್ರಾಧಿಕಾರಿಯು ಅವನ ಆ ಹೇಳಿಕೆಯನ್ನು ದಾಖಲಿಸತಕ್ಕದ್ದು, ಆ ದಾಖಲೆಗೆ ರುಜು ಹಾಕತಕ್ಕದ್ದು ಮತ್ತು ಅದರ ಮೇಲೆ ಸರ್ಕಾರಿ ನೌಕರನ ರುಜುವನ್ನು ಪಡೆಯತಕ್ಕದ್ದು.

(10) ವಿಚಾರಣಾ ಪ್ರಾಧಿಕಾರಿಯು, ಯಾವ ಆರೋಪ ವಿಷಯಗಳಿಗೆ ಸಂಬಂಧಿಸಿದಂತೆ ಸರ್ಕಾರಿ ನೌಕರನು ತಪ್ಪಿತಸ್ಥನೆಂದು ಒಪ್ಪಿಕೊಳ್ಳುವನೋ ಅವುಗಳಿಗೆ ಸಂಬಂಧಿಸಿದಂತೆ ತಪ್ಪಿತಸ್ಥನೆಂಬ ನಿರ್ಣಯವನ್ನು ದಾಖಲಿಸತಕ್ಕದ್ದು.

(11) ವಿಚಾರಣಾ ಪ್ರಾಧಿಕಾರಿಯು, ಸರ್ಕಾರಿ ನೌಕರನು ನಿರ್ದಿಷ್ಟಪಡಿಸಿದ ಕಾಲದೊಳಗೆ ಹಾಜರಾಗಲು ತಪ್ಪಿದರೆ ಅಥವಾ ವಾದಿಸಲು ನಿರಾಕರಿಸಿದರೆ, ಇಲ್ಲವೇ ವಾದಿಸುವುದನ್ನು ಬಿಟ್ಟರೆ, ಅವನು ಆರೋಪ ವಿಷಯಗಳನ್ನು ರುಜುವಾತುಪಡಿಸಲು ಯಾವ ಸಾಕ್ಷ್ಯವನ್ನು ಒದಗಿಸಲು ಮಂಡನಾಧಿಕಾರಿಯು ಉದ್ದೇಶಿಸಿರುವನೋ ಅದನ್ನು ಒದಗಿಸಲು ಮಂಡನಾಧಿಕಾರಿಯನ್ನು ಅಗತ್ಯಪಡಿಸತಕ್ಕದ್ದು ಮತ್ತು ಆ ಸರ್ಕಾರಿ ನೌಕರನು ತನ್ನ ಪ್ರತಿರಕ್ಷೆಯನ್ನು ಸಿದ್ಧಪಡಿಸುವ ಉದ್ದೇಶಕ್ಕಾಗಿ,-

(i) (3)ನೇ ಉಪನಿಯಮದಲ್ಲಿ ಉಲ್ಲೇಖಿಸಿದ ಪಟ್ಟಿಯಲ್ಲಿ ನಿರ್ದಿಷ್ಟಪಡಿಸಿದ ದಸ್ತಾವೇಜುಗಳನ್ನು ಆದೇಶ ಹೊರಡಿಸಿದ ಐದು ದಿನಗಳೊಳಗೆ ಅಥವಾ ವಿಚಾರಣಾ ಪ್ರಾಧಿಕಾರಿಯು ಅನುಮತಿಸಬಹುದಾದಂತೆ ಐದು ದಿನಗಳಿಗೆ ಮೀರದಂಥ ಇನ್ನೂ ಹೆಚ್ಚಿನ ಕಾಲಾವಧಿಯೊಳಗೆ ಪರಿಶೀಲಿಸಬಹುದೆಂದು;

(ii) ತನ್ನ ಪರವಾಗಿ ವಿಚಾರಣೆ ಮಾಡಬೇಕಾದ ಸಾಕ್ಷಿದಾರರ ಪಟ್ಟಿಯನ್ನು ಒಪ್ಪಿಸಬಹುದೆಂದು;

(iii) (3)ನೇ ಉಪನಿಯಮದಲ್ಲಿ ಉಲ್ಲೇಖಿಸಿದ ಪಟ್ಟಿಯಲ್ಲಿ ನಮೂದಿಸಿದ ಸಾಕ್ಷಿದಾರರ ಹೇಳಿಕೆಗಳು ಯಾವುವಾದರೂ ಇದ್ದರೆ, ಅವುಗಳನ್ನು ಪರಿಶೀಲಿಸಲು ಮತ್ತು ಉದ್ಧೃತ ಭಾಗಗಳನ್ನು ತೆಗೆದುಕೊಳ್ಳಲು ಬಾಯಿಮಾತಿನಲ್ಲಿ ಅಥವಾ ಬರವಣಿಗೆಯಲ್ಲಿ ವಿನಂತಿಸಿಕೊಳ್ಳಬಹುದೆಂದು ಮತ್ತು ವಿಚಾರಣಾ ಪ್ರಾಧಿಕಾರಿಯು ಸಾಧ್ಯವಾದಷ್ಟು ಬೇಗನೆ ಮತ್ತು ಯಾವುದೇ ಸಂದರ್ಭದಲ್ಲಿ ಶಿಸ್ತು ಪ್ರಾಧಿಕಾರಿಯು ಅವನಿಗೆ ಒದಗಿಸತಕ್ಕದ್ದೆಂದು;

(iv) ಸರ್ಕಾರದ ಸ್ವಾಧೀನದಲ್ಲಿರುವ ಆದರೆ (3)ನೇ ಉಪನಿಯಮದಲ್ಲಿ ಉಲ್ಲೇಖಿಸಿದ ಪಟ್ಟಿಯಲ್ಲಿ ನಮೂದಿಸಿರದ ಯಾವುವೇ ದಸ್ತಾವೇಜುಗಳನ್ನು ಪತ್ತೆ ಹಚ್ಚುವುದಕ್ಕಾಗಿ ಅಥವಾ ಹಾಜರುಪಡಿಸುವುದಕ್ಕಾಗಿ ಆದೇಶ ಹೊರಡಿಸಿದ ಹತ್ತು ದಿನಗಳೊಳಗಾಗಿ ಅಥವಾ ವಿಚಾರಣಾ ಪ್ರಾಧಿಕಾರಿಯು ಅನುಮತಿಸಬಹುದಾದಂತೆ ಹತ್ತು ದಿನಗಳಿಗೆ ಮೀರದ ಇನ್ನೂ ಹೆಚ್ಚಿನ ಕಾಲಾವಧಿಯೊಳಗಾಗಿ ನೋಟೀಸನ್ನು ನೀಡಬಹುದೆಂದು

-ಆದೇಶವನ್ನು ದಾಖಲಿಸಿದ ತರುವಾಯ, ಮೂವತ್ತು ದಿವಸಗಳಿಗೆ ಮೀರದ ಮುಂದಿನ ದಿನಾಂಕಕ್ಕೆ ಪ್ರಕರಣವನ್ನು ಮುಂದೂಡತಕ್ಕದ್ದು;

ಪರಂತು, ಸರ್ಕಾರವು ಪತ್ತೆ ಹಚ್ಚಬೇಕೆಂದು ಅಥವಾ ಹಾಜರುಪಡಿಸಬೇಕೆಂದು ಸರ್ಕಾರಿ ನೌಕರನು ಅಗತ್ಯಪಡಿಸಿದ ದಸ್ತಾವೇಜುಗಳ ಸುಸಂಬದ್ಧತೆಯನ್ನು ಅವನು ಸೂಚಿಸತಕ್ಕದ್ದು.

(12) ವಿಚಾರಣಾ ಪ್ರಾಧಿಕಾರಿಯು, ದಸ್ತಾವೇಜುಗಳನ್ನು ಪತ್ತೆ ಹಚ್ಚುವ ಅಥವಾ ಹಾಜರುಪಡಿಸುವ ಬಗೆಗಿನ ನೋಟೀಸನ್ನು ಸ್ವೀಕರಿಸಿದ ಮೇಲೆ, ಅದನ್ನು ಅಥವಾ ಅದರ ಪ್ರತಿಗಳನ್ನು, ಯಾವ ಪ್ರಾಧಿಕಾರಿಯ ಅಭಿರಕ್ಷೆಯಲ್ಲಿ ಅಥವಾ ಸ್ವಾಧೀನದಲ್ಲಿ ಆ ದಸ್ತಾವೇಜುಗಳನ್ನು ಇಡಲಾಗಿದೆಯೋ ಆ ಪ್ರಾಧಿಕಾರಿಗೆ ಅಂಥ ಕೋರಿಕೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದ ಹೊತ್ತಿಗೆ ದಸ್ತಾವೇಜನ್ನು ಹಾಜರುಪಡಿಸುವ ಬಗೆಗಿನ ಕೋರಿಕೆಯ ಜೊತೆ ಕಳುಹಿಸತಕ್ಕದ್ದು;

ಪರಂತು, ಯಾವ ದಸ್ತಾವೇಜುಗಳು ಪ್ರಕರಣಕ್ಕೆ ಸುಸಂಗತ ಅಲ್ಲವೆಂದು ವಿಚಾರಣಾ ಪ್ರಾಧಿಕಾರಿಯು ಅಭಿಪ್ರಾಯಪಡುವನೋ ಆ ದಸ್ತಾವೇಜುಗಳಿಗೆ ಕೋರಿಕೆ ಸಲ್ಲಿಸಲು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ನಿರಾಕರಿಸಬಹುದು.

(13) (12)ನೇ ಉಪನಿಯಮದಲ್ಲಿ ಉಲ್ಲೇಖಿಸಿದ ಕೋರಿಕೆಯನ್ನು ಸ್ವೀಕರಿಸಿದ ಮೇಲೆ, ಕೋರಲಾದ ದಸ್ತಾವೇಜುಗಳನ್ನು ಅಭಿರಕ್ಷೆಯಲ್ಲಿ ಅಥವಾ ಸ್ವಾಧೀನದಲ್ಲಿ ಇಟ್ಟುಕೊಂಡಿರುವ ಪ್ರತಿಯೊಬ್ಬ ಪ್ರಾಧಿಕಾರಿಯು ಅವುಗಳನ್ನು ವಿಚಾರಣಾ ಪ್ರಾಧಿಕಾರಿಯ ಮುಂದೆ ಹಾಜರುಪಡಿಸತಕ್ಕದ್ದು;

ಪರಂತು, ಕೋರಲಾದ ದಸ್ತಾವೇಜುಗಳನ್ನು ಅಭಿರಕ್ಷೆಯಲ್ಲಿಟ್ಟುಕೊಂಡಿರುವ ಅಥವಾ ಸ್ವಾಧೀನದಲ್ಲಿಟ್ಟುಕೊಂಡಿರುವ ಪ್ರಾಧಿಕಾರಿಗೆ, ಅಂಥ ಎಲ್ಲ ಅಥವಾ ಯಾವುದೇ ದಸ್ತಾವೇಜುಗಳನ್ನು ಹಾಜರುಪಡಿಸುವುದು ಸಾರ್ವಜನಿಕ ಹಿತದೃಷ್ಟಿಗೆ ಅಥವಾ ರಾಜ್ಯದ ಭದ್ರತೆಗೆ ವಿರುದ್ಧವಾಗುವುದೆಂದು ಮನದಟ್ಟಾದರೆ, ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ಅವನು ಅದನ್ನು ತದನುಸಾರವಾಗಿ ವಿಚಾರಣಾ ಪ್ರಾಧಿಕಾರಿಗೆ ತಿಳಿಸತಕತಕ್ಕದ್ದು ಮತ್ತು ವಿಚಾರಣಾ ಪ್ರಾಧಿಕಾರಿಯು, ಹಾಗೆ ತಿಳಿದ ತರುವಾಯ ಸರ್ಕಾರಿ ನೌಕರನಿಗೆ ಆ ವಿಷಯವನ್ನು ತಿಳಿಸತಕ್ಕದ್ದು ಮತ್ತು ಅಂಥ ದಸ್ತಾವೇಜುಗಳನ್ನು ಹಾಜರುಪಡಿಸುವ ಅಥವಾ ಪತ್ತೆಹಚ್ಚುವ ಬಗ್ಗೆ ತಾನು ಮಾಡಿದ ಕೋರಿಕೆಯನ್ನು ಹಿಂತೆಗೆದುಕೊಳ್ಳತಕ್ಕದ್ದು.

(14) ವಿಚಾರಣೆಗಾಗಿ ನಿಗದಿಪಡಿಸಿದ ದಿನಾಂಕದಂದು, ಯಾವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯದಿಂದ ಆರೋಪ ವಿಷಯಗಳನ್ನು ರುಜುವಾತುಪಡಿಸಲು ಪ್ರಸ್ತಾವಿಸಲಾಗಿದೆಯೋ ಆ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಶಿಸ್ತು ಪ್ರಾಧಿಕಾರಿಯು ಅಥವಾ ಅವನ ಪರವಾಗಿ ಹಾಜರುಪಡಿಸತಕ್ಕದ್ದು. ಮಂಡನಾಧಿಕಾರಿಯು ಅಥವಾ ಅವನ ಪರವಾಗಿ ಸಾಕ್ಷಿದಾರರನ್ನು ವಿಚಾರಣೆ ಮಾಡತಕ್ಕದ್ದು ಮತ್ತು ಸರ್ಕಾರಿ ನೌಕರನು ಅಥವಾ ಅವನ ಪರವಾಗಿ ಪಾಟಿ ಸವಾಲು ಮಾಡಬಹುದು. ಮಂಡನಾಧಿಕಾರಿಯು ಯಾವ ಅಂಶಗಳ ಮೇಲೆ ಪಾಟಿ ಸವಾಲು ಆಗಿದೆಯೋ ಆ ಯಾವುವೇ ಅಂಶಗಳ ಮೇಲೆ ಸಾಕ್ಷಿದಾರರನ್ನು ಪುನಃ ವಿಚಾರಣೆ ಮಾಡಲು ಹಕ್ಕುಳ್ಳವನಾಗಿರತಕ್ಕದ್ದು. ಆದರೆ ವಿಚಾರಣಾ ಪ್ರಾಧಿಕಾರಿಯ ಅನುಮತಿಯಿಲ್ಲದೆ, ಯಾವುದೇ ಹೊಸ ವಿಷಯದ ಬಗ್ಗೆ ವಿಚಾರಣೆ ಮಾಡಕೂಡದು; ವಿಚಾರಣಾ ಪ್ರಾಧಿಕಾರಿಯು ತಾನು ಸೂಕ್ತವೆಂದು ಭಾವಿಸಬಹುದಾದಂಥ ಪ್ರಶ್ನೆಗಳನ್ನು ಸಹ ಸಾಕ್ಷಿದಾರರಿಗೆ ಹಾಕಬಹುದು.

(15) ಶಿಸ್ತು ಪ್ರಾಧಿಕಾರಿಯ ಪರವಾಗಿ ಪ್ರಕರಣವು ಮುಕ್ತಾಯಗೊಳ್ಳುವುದಕ್ಕೆ ಮುಂಚೆ ಅವಶ್ಯವೆಂದು ಕಂಡುಬಂದರೆ, ವಿಚಾರಣಾ ಪ್ರಾಧಿಕಾರಿಯು, ತನ್ನ ವಿವೇಚನಾನುಸಾರ ಸರ್ಕಾರಿ ನೌಕರನಿಗೆ ಕೊಟ್ಟ ಪಟ್ಟಿಯಲ್ಲಿ ಒಳಗೊಳ್ಳದಿರುವ ಸಾಕ್ಷ್ಯವನ್ನು ಒದಗಿಸಲು ಮಂಡನಾಧಿಕಾರಿಗೆ ಅನುಮತಿಸಬಹುದು ಅಥವಾ ತಾನೇ ಸ್ವತಃ ಹೊಸ ಸಾಕ್ಷ್ಯವನ್ನು ತರಿಸಿಕೊಳ್ಳಬಹುದು ಅಥವಾ ಯಾರೇ ಸಾಕ್ಷಿದಾರರನ್ನು ಪುನಃ ಕರೆಸಿಕೊಳ್ಳಬಹುದು ಮತ್ತು ಪುನಃ ವಿಚಾರಣೆ ಮಾಡಬಹುದು ಮತ್ತು ಅಂಥ ಸಂದರ್ಭದಲ್ಲಿ ಹಾಜರುಪಡಿಸಲು ಪ್ರಸ್ತಾವಿಸಿದ ಇನ್ನೂ ಹೆಚ್ಚಿನ ಸಾಕ್ಷ್ಯದ ಪಟ್ಟಿಯ ಪ್ರತಿಯನ್ನು ಸರ್ಕಾರಿ ನೌಕರನು ಕೇಳಿದರೆ, ಅದನ್ನು ಪಡೆಯಲು ಮತ್ತು ವಿಚಾರಣೆಯನ್ನು ಮುಂದಕ್ಕೆ ಹಾಕಿದ ದಿನವನ್ನು ಹಾಗೂ ಯಾವ ದಿನಕ್ಕೆ ವಿಚಾರಣೆಯನ್ನು ಮುಂದಕ್ಕೆ ಹಾಕಿತ್ತೋ ಆ ದಿನವನ್ನು ಬಿಟ್ಟು, ಅಂಥ ಹೊಸ ಸಾಕ್ಷ್ಯವನ್ನು ಹಾಜರುಪಡಿಸುವುದಕ್ಕೆ ಮುಂಚೆ ವಿಚಾರಣೆಯನ್ನು ಮೂರು ದಿನ ಮುಂದಕ್ಕೆ ಹಾಕಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು. ವಿಚಾರಣಾ ಪ್ರಾಧಿಕಾರಿಯು ಅಂಥ ದಸ್ತಾವೇಜುಗಳನ್ನು ದಾಖಲೆ ಮೇಲೆ ತರುವುದಕ್ಕೆ ಮುಂಚೆ ಪರೀಕ್ಷಿಸುವುದಕ್ಕಾಗಿ ಸರ್ಕಾರಿ ನೌಕರನಿಗೆ ಒಂದು ಅವಕಾಶವನ್ನು ಕೊಡತಕ್ಕದ್ದು. ಹೊಸ ಸಾಕ್ಷ್ಯವನ್ನು ಹಾಜರುಪಡಿಸುವುದು ನ್ಯಾಯದ ಹಿತದೃಷ್ಟಿಯಿಂದ ಅವಶ್ಯವೆಂದು ವಿಚಾರಣಾ ಪ್ರಾಧಿಕಾರಿಯು ಅಭಿಪ್ರಾಯಪಡುವಲ್ಲಿ, ಅಂಥ ಹೊಸ ಸಾಕ್ಷ್ಯವನ್ನು ಒದಗಿಸಲು ಸಹ ಸರ್ಕಾರಿ ನೌಕರನಿಗೆ ಅನುಮತಿಸಬಹುದು.

**ಸೂಚನೆ:-** ಸಾಕ್ಷ್ಯದಲ್ಲಿರುವ ಯಾವುದೇ ಕೊರತೆಯನ್ನು ತುಂಬಲು ಹೊಸ ಸಾಕ್ಷ್ಯವನ್ನು ಅನುಮತಿಸತಕ್ಕದ್ದಲ್ಲ ಅಥವಾ ತರಿಸಿಕೊಳ್ಳತಕ್ಕದ್ದಲ್ಲ ಅಥವಾ ಯಾರೇ ಸಾಕ್ಷಿದಾರರನ್ನು ಪುನಃ ಕರೆಸಿಕೊಳ್ಳತಕ್ಕದ್ದಲ್ಲ. ಮೂಲತಃ ಹಾಜರುಪಡಿಸಿದಂಥ ಸಾಕ್ಷ್ಯದಲ್ಲಿ ಅಂತರ್ನಿಹಿತ ಲೋಪ ಇರುವಲ್ಲಿ ಅಥವಾ ದೋಷವಿರುವಲ್ಲಿ ಮಾತ್ರ ಅಂಥ ಸಾಕ್ಷ್ಯವನ್ನು ತರಿಸಿಕೊಳ್ಳಬಹುದು.

(16) ಶಿಸ್ತು ಪ್ರಾಧಿಕಾರಿಯ ಪರವಾಗಿ ವಾದವನ್ನು ಮುಕ್ತಾಯಗೊಳಿಸಿದಾಗ, ಸರ್ಕಾರಿ ನೌಕರನನ್ನು, ಅವನು ಇಚ್ಛಿಸಿದರೆ ಮೌಖಿಕವಾಗಿ ಅಥವಾ ಬರವಣಿಗೆಯಲ್ಲಿ ಅವನ ಪ್ರತಿರಕ್ಷೆಯನ್ನು ಹೇಳಲು ಅಗತ್ಯಪಡಿಸತಕ್ಕದ್ದು. ಪ್ರತಿರಕ್ಷೆಯನ್ನು ಮೌಖಿಕವಾಗಿ ಹೇಳಿದರೆ, ಅದನ್ನು ದಾಖಲಿಸತಕ್ಕದ್ದು ಮತ್ತು ಸರ್ಕಾರಿ ನೌಕರನನ್ನು ಆ ದಾಖಲೆಗೆ ರುಜು ಮಾಡಲು

ಅಗತ್ಯಪಡಿಸತಕ್ಕದ್ದು. ಇವೆರಡೂ ಸಂದರ್ಭಗಳಲ್ಲೂ ಪ್ರತಿರಕ್ಷೆಯ ಹೇಳಿಕೆಯ ಪ್ರತಿಯನ್ನು, ಮಂಡನಾಧಿಕಾರಿ ಯಾರಾದರೂ ನೇಮಕಗೊಂಡಿದ್ದರೆ, ಅವರಿಗೆ ಕೊಡತಕ್ಕದ್ದು.

(17) ಸರ್ಕಾರಿ ನೌಕರನ ಪರವಾಗಿರುವ ಸಾಕ್ಷ್ಯವನ್ನು ಆ ತರುವಾಯ ಹಾಜರುಪಡಿಸತಕ್ಕದ್ದು. ಸರ್ಕಾರಿ ನೌಕರನು ಇಚ್ಛಿಸಿದರೆ ತನ್ನ ಪರವಾಗಿ ತಾನೇ ವಿಚಾರಣೆಗೊಳಪಡಬಹುದು. ಸರ್ಕಾರಿ ನೌಕರನು ಹಾಜರುಪಡಿಸಿದ ಸಾಕ್ಷಿದಾರರನ್ನು ತರುವಾಯ ವಿಚಾರಣೆ ಮಾಡತಕ್ಕದ್ದು ಮತ್ತು ಶಿಸ್ತು ಪ್ರಾಧಿಕಾರಿಯ ಪರವಾಗಿರುವ ಸಾಕ್ಷಿದಾರರಿಗೆ ಅನ್ವಯವಾಗಬಹುದಾದ ಉಪಬಂಧಗಳಿಗೆ ಅನುಸಾರವಾಗಿ ವಿಚಾರಣಾ ಪ್ರಾಧಿಕಾರಿಯಿಂದ ಪಾಟೀ ಸವಾಲಿಗೆ, ಪುನಃ ವಿಚಾರಣೆಗೆ ಮತ್ತು ವಿಚಾರಣೆಗೆ ಆ ಸಾಕ್ಷಿದಾರರು ಗುರಿಯಾಗತಕ್ಕದ್ದು.

(18) ವಿಚಾರಣಾ ಪ್ರಾಧಿಕಾರಿಯು, ಸರ್ಕಾರಿ ನೌಕರನು ತನ್ನ ವಾದವನ್ನು ಮುಕ್ತಾಯಗೊಳಿಸಿದ ತರುವಾಯ ಮತ್ತು ಆ ಸರ್ಕಾರಿ ನೌಕರನು ತಾನೇ ಸ್ವತಃ ವಿಚಾರಣೆಗೆ ಒಳಪಟ್ಟಿರದಿದ್ದರೆ ಸಾಕ್ಷ್ಯದಲ್ಲಿ ಸರ್ಕಾರಿ ನೌಕರನ ವಿರುದ್ಧ ಕಂಡುಬರುವ ಯಾವುದೇ ಸಂದರ್ಭಗಳನ್ನು ವಿವರಿಸಲು ಅವನಿಗೆ ಅವಕಾಶ ಒದಗಿಸುವ ಉದ್ದೇಶಕ್ಕಾಗಿ ಸಾಕ್ಷ್ಯದಲ್ಲಿ ಅವನ ವಿರುದ್ಧವಾಗಿ ಕಂಡುಬಂದಿರುವ ಆ ಸಂದರ್ಭಗಳ ಬಗ್ಗೆ ಅವನನ್ನು ಸಾಮಾನ್ಯವಾಗಿ ಪ್ರಶ್ನಿಸಬಹುದು.

(19) ವಿಚಾರಣಾ ಪ್ರಾಧಿಕಾರಿಯು, ಸಾಕ್ಷ್ಯವನ್ನು ಹಾಜರುಪಡಿಸುವುದು ಪೂರ್ಣವಾದ ತರುವಾಯ, ಮಂಡನಾಧಿಕಾರಿ ಯಾರಾದರೂ ನೇಮಕಗೊಂಡಿದ್ದರೆ, ಅವರನ್ನು ಮತ್ತು ಸರ್ಕಾರಿ ನೌಕರನನ್ನು ವಿಚಾರಣೆ ಮಾಡಬಹುದು ಅಥವಾ ತಮ್ಮ ತಮ್ಮ ವಾದಗಳ ಲಿಖಿತ ಸಾರಾಂಶಗಳನ್ನು ದಾಖಲ್ಮಾಡಲು ಅವರು ಇಚ್ಛಿಸಿದರೆ, ಅವರಿಗೆ ಹಾಗೆ ಮಾಡಲು ಅನುಮತಿಸಬಹುದು.

(20) ಆರೋಪಗಳ ಪಟ್ಟಿಯನ್ನು ಯಾವ ಸರ್ಕಾರಿ ನೌಕರನಿಗೆ ಕೊಡಲಾಗಿದೆಯೋ ಆ ಸರ್ಕಾರಿ ನೌಕರನು, ಆ ಉದ್ದೇಶಕ್ಕಾಗಿ ನಿರ್ದಿಷ್ಟಪಡಿಸಿದ ದಿನಾಂಕದಂದು ಅಥವಾ ಅದಕ್ಕಿಂತ ಮುಂಚೆ ಪ್ರತಿರಕ್ಷೆಯ ಲಿಖಿತ ಹೇಳಿಕೆಯನ್ನು ಸಲ್ಲಿಸದಿದ್ದರೆ ಅಥವಾ ವಿಚಾರಣಾ ಪ್ರಾಧಿಕಾರಿಯ ಮುಂದೆ ಖುದ್ದಾಗಿ ಹಾಜರಾಗದಿದ್ದರೆ ಅಥವಾ ವಿಚಾರಣೆಯ ಯಾವುದೇ ಹಂತದಲ್ಲಿ ಈ ನಿಯಮದ ಉಪಬಂಧಗಳನ್ನು ಪಾಲಿಸಲು ತಪ್ಪಿದರೆ ಅಥವಾ ನಿರಾಕರಿಸಿದರೆ, ವಿಚಾರಣಾ ಪ್ರಾಧಿಕಾರಿಯು ಏಕಪಕ್ಷೀಯವಾಗಿ ವಿಚಾರಣೆಯನ್ನು ನಡೆಸಬಹುದು.

(21) (ಎ) 8ನೇ ನಿಯಮದ (i) ರಿಂದ (ivಎ) ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸಲು ಸಕ್ಷಮನಾಗಿರುವ, ಆದರೆ 8ನೇ ನಿಯಮದ (v) ರಿಂದ (viii)ರ ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸಲು ಸಕ್ಷಮನಾಗಿಲ್ಲದಿರುವ, ಶಿಸ್ತು ಪ್ರಾಧಿಕಾರಿಯು ಯಾವುದೇ ಆರೋಪ ವಿಷಯಗಳನ್ನು ತಾನೇ ಸ್ವತಃ ವಿಚಾರಣೆ ಮಾಡಿರುವಲ್ಲಿ ಅಥವಾ ವಿಚಾರಣೆ ಮಾಡಿಸಿರುವಲ್ಲಿ ಮತ್ತು ಆ ಪ್ರಾಧಿಕಾರಿಯು ತನ್ನದೇ ನಿರ್ಣಯಗಳನ್ನು ಗಮನದಲ್ಲಿಟ್ಟುಕೊಂಡು ಅಥವಾ ಆ ಪ್ರಾಧಿಕಾರಿಯ ನೇಮಕ ಮಾಡಿದ ಯಾರೇ ವಿಚಾರಣಾ ಪ್ರಾಧಿಕಾರಿಯ ಯಾವುದೇ ನಿರ್ಣಯಗಳ ಮೇಲಣ ತನ್ನ ತೀರ್ಮಾನವನ್ನು ಗಮನದಲ್ಲಿಟ್ಟುಕೊಂಡು, 8ನೇ ನಿಯಮದ (v) ರಿಂದ (viii) ರ ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳನ್ನು ಸರ್ಕಾರಿ ನೌಕರನ ಮೇಲೆ ವಿಧಿಸಬೇಕೆಂದು ಅಭಿಪ್ರಾಯಪಟ್ಟರೆ, ಆ ಪ್ರಾಧಿಕಾರಿಯು (v) ರಿಂದ (viii) ರ ವರೆಗಿನ ದಂಡನೆಗಳನ್ನು ವಿಧಿಸಲು ಸಕ್ಷಮನಾಗಿರುವಂಥ ಶಿಸ್ತು ಪ್ರಾಧಿಕಾರಿಗೆ ವಿಚಾರಣೆಯ ದಾಖಲೆಗಳನ್ನು ಕಳುಹಿಸತಕ್ಕದ್ದು.

(ಬಿ) ಯಾವ ಶಿಸ್ತು ಪ್ರಾಧಿಕಾರಿಗೆ ದಾಖಲೆಗಳನ್ನು ಹಾಗೆ ಕಳುಹಿಸಲಾಗಿದೆಯೋ ಆ ಶಿಸ್ತು ಪ್ರಾಧಿಕಾರಿಯು ದಾಖಲೆಯಲ್ಲಿನ ಸಾಕ್ಷ್ಯದ ಆಧಾರದ ಮೇಲೆ ಕ್ರಮವನ್ನು ಜರುಗಿಸಬಹುದೆಂದು ಅಥವಾ ಯಾರೇ ಸಾಕ್ಷಿದಾರರನ್ನು ಇನ್ನಷ್ಟು ಪರೀಕ್ಷಿಸುವುದು ನ್ಯಾಯದ ಹಿತದೃಷ್ಟಿಯಿಂದ ಅವಶ್ಯವೆಂದು ಆ ಪ್ರಾಧಿಕಾರಿಯು ಅಭಿಪ್ರಾಯಪಡುವಲ್ಲಿ, ಸಾಕ್ಷಿದಾರನನ್ನು ಪುನಃ ಕರೆಸಿಕೊಳ್ಳಬಹುದು ಮತ್ತು ಸಾಕ್ಷಿದಾರನನ್ನು ವಿಚಾರಣೆ ಮಾಡಬಹುದು. ಪಾಟೀ ಸವಾಲು ಮಾಡಬಹುದು ಹಾಗೂ ಪುನಃ ವಿಚಾರಣೆ ಮಾಡಬಹುದು ಮತ್ತು ಈ ನಿಯಮಗಳಿಗೆ ಅನುಸಾರವಾಗಿ ತಾನು ಸೂಕ್ತವೆಂದು ಭಾವಿಸಬಹುದಾದಂಥ ದಂಡನೆಯನ್ನು ಸರ್ಕಾರಿ ನೌಕರನ ಮೇಲೆ ವಿಧಿಸಬಹುದು.

(22) ಯಾರೇ ವಿಚಾರಣಾ ಪ್ರಾಧಿಕಾರಿಯು, ವಿಚಾರಣೆಯಲ್ಲಿ ಪೂರ್ಣ ಸಾಕ್ಷ್ಯವನ್ನು ಅಥವಾ ಅದರ ಯಾವುದೇ ಭಾಗವನ್ನು ಆಲಿಸಿದ ಮತ್ತು ದಾಖಲಿಸಿದ ತರುವಾಯ, ವಿಚಾರಣೆಯ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವುದು ನಿಂತುಹೋಗಿರುವಾಗಲೆಲ್ಲಾ ಮತ್ತು ಅವನ ಸ್ಥಾನದಲ್ಲಿ ಅಂಥ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವಂಥ ಮತ್ತು ಚಲಾಯಿಸುವಂಥ ಬೇರೊಬ್ಬ ವಿಚಾರಣಾ

ಪ್ರಾಧಿಕಾರಿಯು ಬಂದಾಗ, ಹಾಗೆ ಬಂದ ಆ ವಿಚಾರಣಾ ಪ್ರಾಧಿಕಾರಿಯು, ಹಿಂದಿನ ವಿಚಾರಣಾಧಿಕಾರಿಯು ಹಾಗೆ ದಾಖಲಿಸಿದ ಅಥವಾ ಹಿಂದಿನ ವಿಚಾರಣಾಧಿಕಾರಿಯು ಭಾಗಶಃ ದಾಖಲಿಸಿದ ಮತ್ತು ತಾನು ಸ್ವತಃ ಭಾಗಶಃ ದಾಖಲಿಸಿದ ಸಾಕ್ಷ್ಯದ ಮೇಲೆ ಕ್ರಮ ಜರುಗಿಸಬಹುದು:

ಪರಂತು, ಯಾರ ಸಾಕ್ಷ್ಯವನ್ನು ಈಗಾಗಲೇ ದಾಖಲಿಸಲಾಗಿದೆಯೋ ಆ ಯಾರೇ ಸಾಕ್ಷಿದಾರರನ್ನು ಮತ್ತಷ್ಟು ವಿಚಾರಣೆ ಮಾಡುವುದು ನ್ಯಾಯದ ಹಿತದೃಷ್ಟಿಯಿಂದ ಅವಶ್ಯವೆಂದು ನಂತರ ಬಂದ ವಿಚಾರಣಾ ಪ್ರಾಧಿಕಾರಿಯು ಅಭಿಪ್ರಾಯಪಟ್ಟಲ್ಲಿ, ಅವರು ಇಲ್ಲಿ ಈ ಹಿಂದೆ ಉಪಬಂಧಿಸಲಾದಂತೆ ಅಂಥ ಯಾರೇ ಸಾಕ್ಷಿದಾರರನ್ನು ಪುನಃ ಕರೆಸಿಕೊಳ್ಳಬಹುದು, ವಿಚಾರಣೆ ಮಾಡಬಹುದು, ಪಾಟೀ ಸವಾಲು ಮಾಡಬಹುದು ಮತ್ತು ಪುನಃ ವಿಚಾರಣೆ ಮಾಡಬಹುದು.

[1][(22ಎ) ಈ ನಿಯಗಳಲ್ಲಿ ಏನೇ ಒಳಗೊಂಡಿದ್ದರೂ, ಶಿಸ್ತು ವ್ಯವಹರಣೆಯನ್ನು ಎದುರಿಸುತ್ತಿರುವ ಸರ್ಕಾರಿ ನೌಕರನನ್ನು, ಅಂಥ ಶಿಸ್ತು ವ್ಯವಹರಣೆಯನ್ನು ಪ್ರಾರಂಭಿಸಿದ ಶಿಸ್ತು ಪ್ರಾಧಿಕಾರಿಯ ಅಧಿಕಾರ ವ್ಯಾಪ್ತಿಯ ಹೊರಗೆ ವರ್ಗಾವಣೆ ಮಾಡಿದ್ದರೆ, ಪ್ರತಿನಿಯೋಜಿಸಿದ್ದರೆ ಅಥವಾ ಅನ್ಯಥಾ ಸ್ಥಳನಿಯುಕ್ತಿ ಮಾಡಿದ್ದರೆ, ಅದೇ ಪ್ರಾಧಿಕಾರಿಯು ಈ ನಿಯಮಗಳಿಗನುಸಾರವಾಗಿ, ಅಂಥ ಸರ್ಕಾರಿ ನೌಕರನ ಮೇಲಿನ ಆರೋಪಗಳ ವಿಷಯಗಳ ಬಗ್ಗೆ ವಿಚಾರಣೆಯನ್ನು ಮುಂದುವರೆಸತಕ್ಕದ್ದು ಮತ್ತು ಮುಕ್ತಾಯಗೊಳಿಸತಕ್ಕದ್ದು ಅಥವಾ ಮುಂದುವರೆಯುವಂತೆ ಮಾಡತಕ್ಕದ್ದು ಮತ್ತು ಮುಕ್ತಾಯಗೊಳಿಸುವಂತೆ ಮಾಡತಕ್ಕದ್ದು ಮತ್ತು ಸರ್ಕಾರಿ ನೌಕರನು ಯಾರ ಅಧಿಕಾರ ವ್ಯಾಪ್ತಿಯೊಳಗೆ ಪ್ರಸ್ತುತ ಕೆಲಸ ಮಾಡುತ್ತಿರುವನೋ ಆ ಶಿಸ್ತು ಪ್ರಾಧಿಕಾರಿಗೆ ವ್ಯವಹರಣೆಗಳ ಸಂಪೂರ್ಣ ದಾಖಲೆಯನ್ನು ಕಳಿಸತಕ್ಕದ್ದು ಮತ್ತು ಆ ತರುವಾಯ ಆ ಶಿಸ್ತು ಪ್ರಾಧಿಕಾರಿಯು ದಾಖಲೆಯಲ್ಲಿನ ಸಾಕ್ಷ್ಯದ ಆಧಾರದ ಮೇಲೆ ಅಥವಾ ನ್ಯಾಯದ ಹಿತದೃಷ್ಟಿಯಿಂದ ಸಾಕ್ಷಿದಾರರ ಪೈಕಿ ಯಾರೇ ಸಾಕ್ಷಿದಾರರನ್ನು ಮತ್ತಷ್ಟು ವಿಚಾರಣೆ ಮಾಡುವುದು ಅವಶ್ಯವೆಂದು ಅಭಿಪ್ರಾಯಪಟ್ಟರೆ, ಸಾಕ್ಷಿದಾರರನ್ನು ಪುನಃ ಕರೆಸಬಹುದು, ವಿಚಾರಣೆ ಮಾಡಬಹುದು, ಪಾಟೀ ಸವಾಲು ಮಾಡಬಹುದು ಅಥವಾ ಮರು ವಿಚಾರಣೆ ಮಾಡಬಹುದು ಮತ್ತು ಈ ನಿಯಮಗಳಿಗನುಸಾರವಾಗಿ, ತಾನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಹೊರಡಿಸಬಹುದು.][1]

(23) (i) ವಿಚಾರಣೆಯು ಮುಕ್ತಾಯಗೊಂಡ ತರುವಾಯ, ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದರಲ್ಲಿ,-

(ಎ) ಆರೋಪ ವಿಷಯಗಳ ಪಟ್ಟಿ ಮತ್ತು ದುರ್ನಡತೆಯ ಅಥವಾ ದುರ್ವರ್ತನೆಯ ಆರೋಪಗಳ ವಿವರಣೆ;

(ಬಿ) ಪ್ರತಿಯೊಂದು ಆರೋಪ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರಿ ನೌಕರನ ಪ್ರತಿರಕ್ಷೆ;

(ಸಿ) ಪ್ರತಿಯೊಂದು ಆರೋಪ ವಿಷಯಕ್ಕೆ ಸಂಬಂಧಿಸಿದಂತೆ ಸಾಕ್ಷ್ಯದ ನಿರ್ಧಾರಣೆ;

(ಡಿ) ಪ್ರತಿಯೊಂದು ಆರೋಪ ವಿಷಯದ ಮೇಲೆ ನಿರ್ಣಯ ಮತ್ತು ಆ ಬಗೆಗಿನ ಸಮರ್ಥನೆಗಳು –ಒಳಗೊಂಡಿರತಕ್ಕದ್ದು.

**ವಿವರಣೆ:-** ವಿಚಾರಣೆಯ ವ್ಯವಹರಣೆಯು, ಯಾವುದೇ ಆರೋಪ ವಿಷಯವು ಮೂಲ ಆರೋಪ ವಿಷಯಗಳಿಗಿಂತ ಭಿನ್ನವಾದುದೆಂಬುದನ್ನು ರುಜುವಾತುಪಡಿಸುತ್ತದೆಂದು ವಿಚಾರಣಾ ಪ್ರಾಧಿಕಾರಿಯು ಅಭಿಪ್ರಾಯಪಟ್ಟರೆ, ಅಂಥ ಆರೋಪ ವಿಷಯಗಳ ಮೇಲೆಯೂ ತನ್ನ ನಿರ್ಣಯಗಳನ್ನು ಅವರು ದಾಖಲಿಸಬಹುದು;

ಪರಂತು, ಅಂಥ ಆರೋಪ ವಿಷಯದ ಮೇಲಣ ನಿರ್ಣಯಗಳನ್ನು ಯಾವ ಸಂಗತಿಗಳ ಮೇಲೆ ಅಂಥ ಆರೋಪದ ವಿಷಯವು ಆಧಾರಿತವಾಗಿದೆಯೋ ಆ ಸಂಗತಿಗಳನ್ನು ಸರ್ಕಾರಿ ನೌಕರನು, ಒಪ್ಪಿಕೊಂಡಿದ್ದ ಹೊರತು ಅಥವಾ ಅಂಥ ಆರೋಪ ವಿಷಯದ ಬಗ್ಗೆ ತನ್ನ ಪ್ರತಿವಾದವನ್ನು ಮಂಡಿಸಲು ಅವನಿಗೆ ಸೂಕ್ತ ಅವಕಾಶವನ್ನು ಕೊಟ್ಟಿದ್ದ ಹೊರತು ದಾಖಲಿಸತಕ್ಕದ್ದಲ್ಲ.

(ii) ವಿಚಾರಣಾ ಪ್ರಾಧಿಕಾರಿಯು, ತಾನೇ ಶಿಸ್ತು ಪ್ರಾಧಿಕಾರಿಯಾಗಿರದಿದ್ದರೆ, ಶಿಸ್ತು ಪ್ರಾಧಿಕಾರಿಗೆ ವಿಚಾರಣೆಯ ದಾಖಲೆಗಳನ್ನು ಕಳುಹಿಸಿಕೊಡತಕ್ಕದ್ದು, ಅವುಗಳಲ್ಲಿ,-

(ಎ) (i)ನೇ ಖಂಡದ ಮೇರೆಗೆ ತಾನು ಸಿದ್ಧಪಡಿಸಿದ ವರದಿ;

(ಬಿ) ಸರ್ಕಾರಿ ನೌಕರನು ಸಲ್ಲಿಸಿದ ಪ್ರತಿರಕ್ಷೆಯ ಲಿಖಿತ ಹೇಳಿಕೆ ಯಾವುದಾದರೂ ಇದ್ದರೆ, ಅದು;

(ಸಿ) ವಿಚಾರಣಾ ಕಾಲದಲ್ಲಿ ಹಾಜರುಪಡಿಸಿದ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯ;

(ಡಿ) ವಿಚಾರಣಾ ಕಾಲದಲ್ಲಿ ಮಂಡನಾಧಿಕಾರಿಯು ಅಥವಾ ಸರ್ಕಾರಿ ನೌಕರನು ಅಥವಾ ಅವರಿಬ್ಬರೂ ದಾಖಲ್ಮಾಡಿದ ಲಿಖಿತ ಸಾರಾಂಶ ಯಾವುವಾದರೂ ಇದ್ದರೆ ಅವು; ಮತ್ತು

(ಇ) ವಿಚಾರಣೆಗೆ ಸಂಬಂಧಿಸಿದಂತೆ ಶಿಸ್ತು ಪ್ರಾಧಿಕಾರಿಯು ಮತ್ತು ವಿಚಾರಣಾ ಪ್ರಾಧಿಕಾರಿಯು ಮಾಡಿದ ಆದೇಶಗಳು ಯಾವುವಾದರೂ ಇದ್ದರೆ, ಅವು

-ಒಳಗೊಂಡಿರತಕ್ಕದ್ದು.

.................................................................................................................................

1. ಅಧಿಸೂಚನೆ ಸಂಖ್ಯೆ: ಜಿಎಡಿ 28 ಎಸ್ಎಸ್ಆರ್ 69, ದಿನಾಂಕ: 12.12.73, ಕೆಜಿಡಿ 21.1.74ರ ಮೂಲಕ ಪ್ರತಿಯೋಜಿಸಲಾಗಿದೆ.
2. ಅಧಿಸೂಚನೆ ಸಂಖ್ಯೆ ಡಿಪಿಎಆರ್ 5 ಎಸ್‌ಡಿಇ 86, ದಿನಾಂಕ: 7.5.86ರ ಮೂಲಕ ಸೇರಿಸಲಾಗಿದೆ.
3. ಅಧಿಸೂಚನೆ ಸಂಖ್ಯೆ ಡಿಪಿಎಆರ್ 5 ಎಸ್‌ಸಡಿಇ 86, ದಿನಾಂಕ: 7.5.86ರ ಮೂಲಕ ಪ್ರತಿಯೋಜಿಸಲಾಗಿದೆ.
4. ಅಧಿಸೂಚನೆ ಸಂಖ್ಯೆ ಡಿಪಿಎಆರ್ 4 ಎಸ್‌ಡಿಇ 2000, ದಿನಾಂಕ: 15.04.2002ರ ಮೂಲಕ (15.4.2002 ರಿಂದ ಪರಿಣಾಮಕಾರಿಯಾಗುವಂತೆ) ಬಿಟ್ಟುಬಿಡಲಾಗಿದೆ (ಕೆಜಿಡಿ 15.4.2002).
5. ಅಧಿಸೂಚನೆ ಸಂಖ್ಯೆ:ಡಿಪಿಎಆರ್ 25 ಎಸ್‌ಡಿಇ 1982, ದಿನಾಂಕ: 23.08.1983ರ ಮೂಲಕ ಸೇರಿಸಲಾಗಿದೆ.
6. ಅಧಿಸೂಚನೆ ಸಂಖ್ಯೆ: ಡಿಪಿಎಆರ್ 41 ಎಸ್‌ಡಿಇ 84, ದಿನಾಂಕ: 17.06.85ರ ಮೂಲಕ ಸೇರಿಸಲಾಗಿದೆ.(ಕೆಜಿಡಿ 11.7.85)
7. ಅಧಿಸೂಚನೆ ಸಂಖ್ಯೆ: ಡಿಪಿಎಆರ್ 19 ಎಸ್‌ಡಿಇ 95, ದಿನಾಂಕ: 07.03.2002ರ ಮೂಲಕ 11.4.2002 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**[1][11ಎ. ವಿಚಾರಣಾ ವರದಿಯ ಮೇಲೆ ಕ್ರಮ:-**

**(1)** ಶಿಸ್ತು ಪ್ರಾಧಿಕಾರಿಯು, ತಾನೇ ವಿಚಾರಣಾ ಪ್ರಾಧಿಕಾರಿಯಾಗಿಲ್ಲದಿದ್ದರೆ, ತಾನು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ, ಇನ್ನೂ ಹೆಚ್ಚಿನ ವಿಚಾರಣೆಗಾಗಿ ಮತ್ತು ವರದಿಗಾಗಿ ವಿಚಾರಣಾ ಪ್ರಾಧಿಕಾರಿಗೆ ಪ್ರಕರಣವನ್ನು ವಾಪಸ್ಸು ಕಳಿಸಬಹುದು ಮತ್ತು ವಿಚಾರಣಾ ಪ್ರಾಧಿಕಾರಿಯು ಆ ತರುವಾಯ ಸಾಧ್ಯವಾದಷ್ಟು ಮಟ್ಟಿಗೆ 11ನೇ ನಿಯಮದ ಉಪಬಂಧಗಳಿಗನುಸಾರವಾಗಿ ಇನ್ನೂ ಹೆಚ್ಚಿನ ವಿಚಾರಣೆ ನಡೆಸಲು ಕ್ರಮ ಕೈಗೊಳ್ಳತಕ್ಕದ್ದು][1]

(2) ಶಿಸ್ತು ಪ್ರಾಧಿಕಾರಿಯು, ಆರೋಪದ ಯಾವುದೇ ವಿಷಯದ ಮೇಲೆ ವಿಚಾರಣಾ ಪ್ರಾಧಿಕಾರಿಯ ನಿರ್ಣಯಗಳನ್ನು ಒಪ್ಪದಿದ್ದರೆ, ಹಾಗೆ ಒಪ್ಪದಿರುವುದಕ್ಕೆ ತನ್ನ ಕಾರಣಗಳನ್ನು ದಾಖಲಿಸತಕ್ಕದ್ದು ಮತ್ತು ದಾಖಲೆಯಲ್ಲಿರುವ ಸಾಕ್ಷ್ಯವು ಆ ಉದ್ದೇಶಕ್ಕಾಗಿ ಸಾಕಷ್ಟಿದ್ದರೆ ಅಂಥ ಆರೋಪದ ಮೇಲೆ ತನ್ನ ನಿರ್ಣಯಗಳನ್ನು ದಾಖಲಿಸತಕ್ಕದ್ದು.

(3) ಶಿಸ್ತು ಪ್ರಾಧಿಕಾರಿಯು ಎಲ್ಲ ಅಥವಾ ಯಾವುದೇ ಆರೋಪ ವಿಷಯಗಳ ಮೇಲಿನ ತನ್ನ ನಿರ್ಣಯಗಳನ್ನು ಗಮನದಲ್ಲಿರಿಸಿಕೊಂಡು [2][8ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ಒಂದು ಅಥವಾ ಹೆಚ್ಚು ದಂಡನೆಗಳನ್ನು][2] ಸರ್ಕಾರಿ ನೌಕರನ ಮೇಲೆ ವಿಧಿಸಬೇಕೆಂದು ಅಭಿಪ್ರಾಯಪಟ್ಟರೆ, ಅವರು 12ನೇ ನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಅಂಥ ದಂಡನೆಯನ್ನು ವಿಧಿಸುವ ಆದೇಶವನ್ನು ಮಾಡಬಹುದು;

ಪರಂತು, ಆಯೋಗದೊಡನೆ ಸಮಾಲೋಚಿಸುವುದು ಅವಶ್ಯವಿರುವಂಥ ಪ್ರತಿಯೊಂದು ಪ್ರಕರಣದಲ್ಲಿ, ಶಿಸ್ತು ಪ್ರಾಧಿಕಾರಿಯು ಸರ್ಕಾರಿ ನೌಕರನ ಮೇಲೆ ವಿಧಿಸಬೇಕೆಂದು ಪ್ರಸ್ತಾವಿಸಿದ ದಂಡನೆಗಳ ಮೇಲೆ ಆಯೋಗದ ಸಲಹೆಗಾಗಿ ವಿಚಾರಣಾ ದಾಖಲೆಯನ್ನು ಆಯೋಗಕ್ಕೆ ಕಳಿಸಿಕೊಡತಕ್ಕದ್ದು ಮತ್ತು ಸರ್ಕಾರಿ ನೌಕರನ ಮೇಲೆ ಯಾವುದೇ ದಂಡನೆಯನ್ನು ವಿಧಿಸುವ ಯಾವುದೇ ಆದೇಶವನ್ನು ಮಾಡುವುದಕ್ಕೆ ಮುಂಚೆ ಅಂಥ ಸಲಹೆಯನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

(4) [3][XXX][3&1]

.................................................................................................................................

1. ಅಧಿಸೂಚನೆ ಸಂಖ್ಯೆ: ಜಿಎಡಿ 28 ಎಸ್ಎಸ್ಆರ್ 69, ದಿನಾಂಕ: 12.12.1973ರ ಮೂಲಕ ಸೇರಿಸಲಾಗಿದೆ.
2. ಅಧಿಸೂಚನೆ ಸಂಖ್ಯೆ: ಡಿಪಿಎಆರ್ 70 ಎಸ್ಎಸ್ಆರ್ 76, ದಿನಾಂಕ: 15.1.77ರ ಮೂಲಕ ಸೇರಿಸಲಾಗಿದೆ.

3. ಅಧಿಸೂಚನೆ ಸಂಖ್ಯೆ: ಡಿಪಿಎಆರ್ 70 ಎಸ್‌ಎಸ್‌ಆರ್ 76, ದಿನಾಂಕ: 15.1.1977ರ ಮೂಲಕ ಬಿಟ್ಟುಬಿಡಲಾಗಿದೆ.

[1][12. **ಲಘು ದಂಡನೆಗಳನ್ನು ವಿಧಿಸಲು ಕಾರ್ಯವಿಧಾನ;-**

(1) 11ಎ ನಿಯಮದ (3)ನೇ ಉಪನಿಯಮದ ಉಪಬಂಧಗಳಿಗೊಳಪಟ್ಟು, 8ನೇ ನಿಯಮದ (i) ರಿಂದ (ivಎ) ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ಸರ್ಕಾರಿ ನೌಕರನಿಗೆ ವಿಧಿಸುವ ಯಾವುದೇ ಆದೇಶವನ್ನು,-

(ಎ) ಸರ್ಕಾರಿ ನೌಕರನಿಗೆ ಅವನ ವಿರುದ್ಧ ಕ್ರಮ ಕೈಗೊಳ್ಳುವ ಪ್ರಸ್ತಾವವನ್ನು ಮತ್ತು ಯಾವ ದುರ್ನಡತೆಯ ಅಥವಾ ದುರ್ವರ್ತನೆಯ ಮೇಲೆ ಕ್ರಮ ಕೈಗೊಳ್ಳಲು ಪ್ರಸ್ತಾವಿಸಲಾಗಿದೆಯೋ ಆ ದುರ್ನಡತೆಯ ಅಥವಾ ದುರ್ವರ್ತನೆಯ ಆರೋಪಗಳನ್ನು ಲಿಖಿತದಲ್ಲಿ ತಿಳಿಸಿದ ತರುವಾಯ ಹೊರತು ಮತ್ತು ಆ ಪ್ರಸ್ತಾವದ ವಿರುದ್ಧ ಅವನು ಇಚ್ಛಿಸಬಹುದಾದಂಥ ಮನವಿಯನ್ನು ಮಾಡಿಕೊಳ್ಳಲು ಅವನಿಗೆ ಸಮಂಜಸವಾದ ಅವಕಾಶವನ್ನು ಕೊಟ್ಟ ತರುವಾಯ ಹೊರತು;

(ಬಿ) ಯಾವ ಪ್ರಕರಣದಲ್ಲಿ ಶಿಸ್ತು ಪ್ರಾಧಿಕಾರಿಯು ವಿಚಾರಣೆ ನಡೆಸುವುದು ಅವಶ್ಯವೆಂದು ಅಭಿಪ್ರಾಯ ಪಡುವನೋ ಅಂಥ ಪ್ರತಿಯೊಂದು ಪ್ರಕರಣದಲ್ಲಿ, 11ನೇ ನಿಯಮದ (3) ರಿಂದ (23)ರ ವರೆಗಿನ ಉಪನಿಯಮಗಳಲ್ಲಿ ಗೊತ್ತುಪಡಿಸಿದ ರೀತಿಯಲ್ಲಿ ವಿಚಾರಣೆಯನ್ನು ನಡೆಸಿದ ತರುವಾಯ ಹೊರತು.

[2][ಪರಂತು, 11ನೇ ನಿಯಮದ (3) ರಿಂದ (23)ರ ವರೆಗಿನ ಉಪನಿಯಮಗಳಲ್ಲಿ ಗೊತ್ತುಪಡಿಸಿದ ರೀತಿಯಲ್ಲಿ ವಿಚಾರಣೆಯನ್ನು ನಡೆಸದೆಯೇ, ಸಂಚಿತ ಪರಿಣಾಮಸಹಿತ ವೇತನ ಬಡ್ತಿಗಳನ್ನು ತಡೆಹಿಡಿಯುವ ದಂಡನೆಯನ್ನು ವಿಧಿಸುವ ಆದೇಶವನ್ನು ಮಾಡತಕ್ಕದ್ದಲ್ಲ.][2]

(ಸಿ)(ಎ)ಖಂಡದ ಮೇರೆಗೆ ಸರ್ಕಾರಿ ನೌಕರನು ಸಲ್ಲಿಸಿದ ಮನವಿ ಯಾವುದಾದರೂ ಇದ್ದರೆ, ಅದನ್ನು ಮತ್ತು (ಬಿ) ಖಂಡದ ಮೇರೆಗೆ ನಡೆಸದೆಯೇ ವಿಚಾರಣೆಯ ದಾಖಲೆಯು ಯಾವುದಾದರೂ ಇದ್ದರೆ, ಅದನ್ನು ಪರಿಗಣಿಸಿದ ತರುವಾಯ ಹೊರತು;

(ಡಿ) ದುರ್ನಡತೆಯ ಅಥವಾ ದುರ್ವರ್ತನೆಯ ಪ್ರತಿಯೊಂದು ಆರೋಪಣೆಯ ಮೇಲೆ ನಿರ್ಣಯವನ್ನು ದಾಖಲಿಸಿದ ತರುವಾಯ ಹೊರತು; ಮತ್ತು

(ಇ)ಆಯೋಗದೊಡನೆ ಸಮಾಲೋಚನೆ ನಡೆಸುವುದು ಅವಶ್ಯವಿರುವಲ್ಲಿ, ಅದರೊಂದಿಗೆ ಅಂಥ ಸಮಾಲೋಚನೆ ನಡೆಸಿದ ತರುವಾಯ ಹೊರತು.

-ಮಾಡತಕ್ಕದ್ದಲ್ಲ.

(2) ಅಂಥ ಪ್ರಕರಣಗಳಲ್ಲಿ ವ್ಯವಹರಣೆಗಳ ದಾಖಲೆಯು,-

(i) ಸರ್ಕಾರಿ ನೌಕರನ ವಿರುದ್ಧ ಕ್ರಮ ತೆಗೆದುಕೊಳ್ಳುವ ಪ್ರಸ್ತಾವದ ಬಗ್ಗೆ ಸರ್ಕಾರಿ ನೌಕರನಿಗೆ ತಿಳಿವಳಿಕೆಯ ಪ್ರತಿಯನ್ನು:

(ii) ಅವನಿಗೆ ಕೊಟ್ಟ ದುರ್ನಡತೆಯ ಅಥವಾ ದುರ್ವತನೆಯ ಆರೋಪಣೆಗಳ ವಿವರಣೆಯ ಪ್ರತಿಯನ್ನು

(iii) ಅವನ ಮನವಿ ಯಾವುದಾದರೂ ಇದ್ದರೆ, ಅದನ್ನು;

(iv) ವಿಚಾರಣೆಯ ಕಾಲದಲ್ಲಿ ಹಾಜರುಪಡಿಸಿದ ಸಾಕ್ಷ್ಯವನ್ನು;

(v) ಆಯೋಗದ ಸಲಹೆ ಯಾವುದಾದರೂ ಇದ್ದರೆ, ಅದನ್ನು;

(vi) ದುರ್ನಡತೆಯ ಅಥವಾ ದುರ್ವರ್ತನೆಯ ಪ್ರತಿಯೊಂದು ಆರೋಪಣೆಯ ಮೇಲಣ ನಿರ್ಣಯಗಳನ್ನು; ಮತ್ತು

(vii) ಪ್ರಕರಣದ ಮೇಲಣ ಆದೇಶಗಳನ್ನು, ಆ ಸಂಬಂಧವಾದ ಕಾರಣಗಳ ಸಹಿತ

-ಒಳಗೊಂಡಿರತಕ್ಕದ್ದು.][1]

.....................................................................................................................................

1. ಅಧಿಸೂಚನೆ ಸಂಖ್ಯೆ: ಜಿಎಡಿ 28 ಎಸ್‌ಎಸ್‌ಆರ್ 69, ದಿನಾಂಕ: 12.12.1973ರ ಮೂಲಕ ಸೇರಿಸಲಾಗಿದೆ.
2. ಅಧಿಸೂಚನೆ ಸಂಖ್ಯೆ: ಡಿಪಿಎಆರ್ 13 ಎಸ್‌ಡಿಇ 97, ದಿನಾಂಕ; 1.09.1998ರ ಮೂಲಕ 01.9.98 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.( ಕೆಜಿಡಿ 7.9.98)

[1][**12ಎ. ಆದೇಶಗಳನ್ನು ತಿಳಿಸುವುದು:**

ಶಿಸ್ತು ಪ್ರಾಧಿಕಾರಿಯು ಮಾಡಿದ ಆದೇಶಗಳನ್ನು ಸರ್ಕಾರಿ ನೌಕರನಿಗೆ ತಿಳಿಸತಕ್ಕದ್ದು ಮತ್ತು ಅವನಿಗೆ, ಶಿಸ್ತು ಪ್ರಾಧಿಕಾರಿಯು ವಿಚಾರಣೆಯನ್ನೇನಾದರೂ ನಡೆಸಿದ್ದರೆ, ಅದರ ವರದಿಯ ಪ್ರತಿಯನ್ನು ಮತ್ತು ಪ್ರತಿಯೊಂದು ಆರೋಪ ವಿಷಯದ ಮೇಲೆ ಅವರ ನಿರ್ಣಯಗಳ ಪ್ರತಿಯನ್ನು ಅಥವಾ ಶಿಸ್ತು ಪ್ರಾಧಿಕಾರಿಯು ವಿಚಾರಣಾ ಪ್ರಾಧಿಕಾರಿಯಾಗಿಲ್ಲದಿದ್ದರೆ, ವಿಚಾರಣಾ ಪ್ರಾಧಿಕಾರಿಯ ವರದಿಯ ಪ್ರತಿಯನ್ನು ಮತ್ತು ವಿಚಾರಣಾ ಪ್ರಾಧಿಕಾರಿಯ ನಿರ್ಣಯಗಳನ್ನು ಶಿಸ್ತು ಪ್ರಾಧಿಕಾರಿಯು ಒಪ್ಪದಿರುವುದಕ್ಕೆ ಕಾರಣಗಳು ಯಾವುವಾದರೂ ಇದ್ದರೆ, ಆ ಸಂಕ್ಷಿಪ್ತ ಕಾರಣಗಳೊಂದಿಗೆ ಶಿಸ್ತು ಪ್ರಾದಿಕಾರಿಯ ನಿರ್ಣಯಗಳ ವಿವರಣೆಯ ಪ್ರತಿಯನ್ನು (ಅವನಿಗೆ ಅವುಗಳನ್ನು ಈಗಾಗಲೇ ಒದಗಿಸಿರದಿದ್ದರೆ) ಮತ್ತು 14ಎ ನಿಯಮದ ಮೇರೆಗೆ [3][ಲೋಕಾಯುಕ್ತರು ಅಥವಾ ಉಪಲೋಕಾಯುಕ್ತರು][3] ವಿಚಾರಣೆ ನಡೆಸಿರುವಲ್ಲಿ, [3][ಲೋಕಾಯುಕ್ತರ ಅಥವಾ ಸಂದರ್ಭಾನುಸಾರ ಉಪಲೋಕಾಯುಕ್ತರ][3] ಶಿಫಾರಸ್ಸುಗಳೊಂದಿಗೆ ವಿಚಾರಣಾ ಅಧಿಕಾರಿಯ ನಿರ್ಣಯಗಳ ಪ್ರತಿಯನ್ನು ಮತ್ತು ಆಯೋಗವು ಮಾಡಿದ ಸಲಹೆ ಯಾವುದಾದರೂ ಇದ್ದರೆ, ಅದರ ಪ್ರತಿಯನ್ನು ಸಹ ಮತ್ತು ಶಿಸ್ತು ಪ್ರಾಧಿಕಾರಿಯು ಆಯೋಗದ ಸಲಹೆಯನ್ನು ಒಪ್ಪಿಕೊಳ್ಳದಿದ್ದರೆ, ಹಾಗೆ ಒಪ್ಪಿಕೊಳ್ಳದಿರುವುದಕ್ಕೆ, ಇರುವ ಕಾರಣಗಳ ಸಂಕ್ಷಿಪ್ತ ವಿವರಣೆಯನ್ನು ಒದಗಿಸತಕ್ಕದ್ದು;][1]

[2][ಪರಂತು, ಶಿಸ್ತು ಪ್ರಾಧಿಕಾರಿಯು ಸರ್ಕಾರಿ ನೌಕರನನ್ನು ದೋಷಮುಕ್ತನನ್ನಾಗಿ ಮಾಡಿದ್ದರೆ ಅಥವಾ ಅಂಥ ದಸ್ತಾವೇಜುಗಳನ್ನು ಸರ್ಕಾರಿ ನೌಕರನಿಗೆ ಈಗಾಗಲೇ ಒದಗಿಸಿದ್ದರೆ, ಸದರಿ ದಸ್ತಾವೇಜುಗಳ ಪ್ರತಿಗಳನ್ನು ಸರ್ಕಾರಿ ನೌಕರನಿಗೆ ಈಗಾಗಲೇ ಒದಗಿಸಿದ್ದರೆ, ಸದರಿ ದಸ್ತಾವೇಜುಗಳ ಪ್ರತಿಗಳನ್ನು ಒದಗಿಸುವುದು ಅವಶ್ಯಕವಾಗಿರತಕ್ಕದ್ದಲ್ಲ.][2]

---

1. ಅಧಿಸೂಚನೆ ಸಂಖ್ಯೆ: ಜಿಎಡಿ 28 ಎಸ್ಎಸ್ಆರ್ 69, ದಿನಾಂಕ: 12.12.1973ರ ಮೂಲಕ ಸೇರಿಸಲಾಗಿದೆ.
2. ಅಧಿಸೂಚನೆ ಸಂಖ್ಯೆ: ಡಿಪಿಎಆರ್ 34 ಎಸ್ಎಸ್ಆರ್ 76, ದಿನಾಂಕ: 07.07.76, ಕೆಜಿಡಿ 22.7.76ರ ಮೂಲಕ ಪ್ರತಿಯೋಜಿಸಲಾಗಿದೆ.
3. ಅಧಿಸೂಚನೆ ಸಂಖ್ಯೆ ಡಿಪಿಎಆರ್ 5 ಎಸ್‌ಡಿಇ 86, ದಿನಾಂಕ: 7.05.86 ಕೆಜಿಡಿ 7.05.86ರ ಮೂಲಕ ಪ್ರತಿಯೋಜಿಸಲಾಗಿದೆ.

**13. ಜಂಟಿ ವಿಚಾರಣೆ.-**

(1) ಇಬ್ಬರು ಅಥವಾ ಹೆಚ್ಚು ಸರ್ಕಾರಿ ನೌಕರರು ಯಾವುದೇ ಪ್ರಕರಣಕ್ಕೆ ಸಂಬಂಧಪಟ್ಟಿದ್ದರೆ, ಸರ್ಕಾರವು ಅಥವಾ ಅಂಥ ಎಲ್ಲ ಸರ್ಕಾರಿ ನೌಕರರನ್ನು ಸೇವೆಯಿಂದ ವಜಾ ಮಾಡುವ ದಂಡನೆಯನ್ನು ವಿಧಿಸಲು ಸಕ್ಷಮನಾಗಿರುವ ಇತರ ಯಾರೇ ಪ್ರಾಧಿಕಾರಿಯು, ಒಂದೇ ವ್ಯವಹರಣೆಯಲ್ಲಿ ಅವರೆಲ್ಲರ ಮೇಲೆ ಶಿಸ್ತು ಕ್ರಮ ಕೈಕೊಳ್ಳುವಂತೆ ಶಿಸ್ತು ಪ್ರಾಧಿಕಾರಿಗೆ ನಿರ್ದೇಶಿಸಿ ಆದೇಶ ಮಾಡಬಹುದು;

[1][ಪರಂತು, ಅಂಥ ಸರ್ಕಾರಿ ನೌಕರನ ಮೇಲೆ ವಜಾ ದಂಡನೆಯನ್ನು ವಿಧಿಸಲು ಸಕ್ಷಮರಾದ ಪ್ರಾಧಿಕಾರಿಗಳು ಬೇರೆ ಬೇರೆಯಾಗಿದ್ದರೆ ಒಂದೇ ವ್ಯವಹರಣೆಯಲ್ಲಿ ಶಿಸ್ತು ಕ್ರಮ ಕೈಗೊಳ್ಳುವುದಕ್ಕಾಗಿ ಆದೇಶವನ್ನು ಅಂಥ ಪ್ರಾಧಿಕಾರಿಗಳ ಪೈಕಿ ಉನ್ನತ ಪ್ರಾಧಿಕಾರಿಯು ಇತರರ ಸಮ್ಮತಿ ಪಡೆದು ಮಾಡಬಹುದು.][1]

(2) 9ನೇ ನಿಯಮದ (3)ನೇ ಉಪನಿಯಮದ ಉಪಬಂಧಗಳಿಗೆ ಒಳಪಟ್ಟು, ಅಂಥ ಯಾವುದೇ ಆದೇಶದಲ್ಲಿ,-

(i) ಅಂಥ ಒಂದೇ ವ್ಯವಹರಣೆಯ ಉದ್ದೇಶಕ್ಕಾಗಿ ಶಿಸ್ತು ಪ್ರಾಧಿಕಾರಿಯಾಗಿ ಯಾವ ಪ್ರಾಧಿಕಾರಿಯು ಕಾರ್ಯನಿರ್ವಹಿಸಬಹುದೋ ಆ ಪ್ರಾಧಿಕಾರಿಯನ್ನು;

(ii) 8ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ಯಾವ ದಂಡನೆಗಳನ್ನು ವಿಧಿಸಲು ಅಂಥ ಶಿಸ್ತು ಪ್ರಾಧಿಕಾರಿಯು ಸಕ್ಷಮನಾಗಿರತಕ್ಕದ್ದೋ ಆ ದಂಡನೆಗಳನ್ನು; ಮತ್ತು

(iii) [2][11ನೇ ಮತ್ತು 11ಎ][2] ನಿಯಮಗಳಲ್ಲಿ ಅಥವಾ 12ನೇ ನಿಯಮದಲ್ಲಿ ಗೊತ್ತುಪಡಿಸಿದ ಕಾರ್ಯವಿಧಾನವನ್ನು ಆ ವ್ಯವಹರಣೆಯಲ್ಲಿ ಅನುಸರಿಸಬೇಕೇ ಎಂಬುದನ್ನು

-ನಿರ್ದಿಷ್ಟಪಡಿಸತಕ್ಕದ್ದು.

---

1. ಅಧಿಸೂಚನೆ ಸಂಖ್ಯೆ ಜಿಎಡಿ 28 ಎಸ್‌ಎಸ್‌ಆರ್ 69, ದಿನಾಂಕ: 12.12.1973ರ ಮೂಲಕ ಸೇರಿಸಲಾಗಿದೆ. (ಕೆಜಿಡಿ ದಿನಾಂಕ: 24.1.74)
2. ಅಧಿಸೂಚನೆ ಸಂಖ್ಯೆ: ಜಿಎಡಿ 28 ಎಸ್‌ಎಸ್‌ಆರ್ 69, ದಿನಾಂಕ: 12.12.73ರ ಮೂಲಕ 24.1.74 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**14. ಕೆಲವು ಸಂದರ್ಭಗಳಲ್ಲಿ ವಿಶೇಷ ಕಾರ್ಯವಿಧಾನ:-**

[1][11 ರಿಂದ 13ರ ವರೆಗಿನ ನಿಯಮಗಳಲ್ಲಿ][1] ಏನೇ ಒಳಗೊಂಡಿದ್ದರೂ,-

(i) ಕ್ರಿಮಿನಲ್ ಆರೋಪದ ಮೇಲೆ ಸರ್ಕಾರಿ ನೌಕರನು ಅಪರಾಧ ನಿರ್ಣೀತನಾಗಿರುವುದಕ್ಕೆ ಯಾವ ನಡತೆಯು ಎಡೆಮಾಡಿಕೊಟ್ಟಿದೆಯೋ ಆ ನಡತೆಯ ಆಧಾರದ ಮೇಲೆ ಅವನಿಗೆ ದಂಡನೆಯನ್ನು ವಿಧಿಸಿರುವಲ್ಲಿ; ಅಥವಾ

(ii) ಸಂಬಂಧಿಸಿದ ಅಧಿಕಾರಿಯು ತಲೆಮರೆಸಿಕೊಂಡಿರುವಲ್ಲಿ, ಅಥವಾ ಸಂಬಂಧಿಸಿದ ಅಧಿಕಾರಿಯು ವಿಚಾರಣೆಯಲ್ಲಿ ಭಾಗವಹಿಸದಿರುವಲ್ಲಿ, ಅಥವಾ ಅವನ ಜತೆ ಸಂಪರ್ಕ ಸಾಧಿಸಲು ಸಾಧ್ಯವಿಲ್ಲದಿರುವಲ್ಲಿ, ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ಅಥವಾ ಶಿಸ್ತು ಪ್ರಾಧಿಕಾರಿಯು ಸದರಿ ನಿಯಮಗಳಲ್ಲಿ ಗೊತ್ತುಪಡಿಸಿದ ವಿಧಾನವನ್ನು ಸಮಂಜಸವಾಗಿ ಅನುಸರಿಸುವುದು ಕಾರ್ಯಸಾಧ್ಯವಿಲ್ಲವೆಂದು ಅಭಿಪ್ರಾಯಪಟ್ಟಲ್ಲಿ, ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ; ಅಥವಾ

(iii) ರಾಜ್ಯದ ಭದ್ರತೆಯ ಹಿತದೃಷ್ಟಿಯಿಂದ ಅಂಥ ವಿಧಾನವನ್ನು ಅನುಸರಿಸುವುದು ಯುಕ್ತವಲ್ಲವೆಂದು ರಾಜ್ಯಪಾಲರಿಗೆ ಮನದಟ್ಟಾದರೆ –ಶಿಸ್ತು ಪ್ರಾಧಿಕಾರಿಯು ಆ ಬಗ್ಗೆ ಸೂಕ್ತವೆಂದು ತಾನು ಭಾವಿಸುವಂಥ ಆದೇಶವನ್ನು ಹೊರಡಿಸಬಹುದು.

ಪರಂತು, ಯಾವ ಪ್ರಕರಣದಲ್ಲಿ ಆಯೋಗದೊಡನೆ ಸಮಾಲೋಚನೆಯು ಅವಶ್ಯವಾಗಿರುವುದೋ ಆ ಯಾವುದೇ ಪ್ರಕರಣದಲ್ಲಿ ಅಂಥ ಆದೇಶವನ್ನು ಹೊರಡಿಸುವುದಕ್ಕೆ ಮುಂಚೆ ಆಯೋಗದೊಡನೆ ಸಮಾಲೋಚಿಸತಕ್ಕದ್ದು.

[2 &3] [ಎರಡನೇ ಪರಂತುಕ -XXX] [2 &3]

.................................................................................................................................................

1. ಅಧಿಸೂಚನೆ ಸಂಖ್ಯೆ ಜಿಎಡಿ 28 ಎಸ್‌ಎಸ್‌ಆರ್ 69, ದಿನಾಂಕ: 12.12.73ರ ಮೂಲಕ 24.1.74 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. ಅಧಿಸೂಚನೆ ಸಂಖ್ಯೆ ಡಿಪಿಎಆರ್ 60 ಎಸ್ ಎಸ್‌ಆರ್ 80, ದಿನಾಂಕ: 27.11.1980ರ ಮೂಲಕ ಸೇರಿಸಲಾಗಿದೆ.
3. ಅಧಿಸೂಚನೆ ಸಂಖ್ಯೆ ಡಿಪಿಎಆರ್ 15 ಸೇಇವಿ 95, ದಿನಾಂಕ: 22.03.95ರ ಮೂಲಕ ಬಿಟ್ಟುಬಿಡಲಾಗಿದೆ.

**[1][14ಎ. ಲೋಕಾಯುಕ್ತಕ್ಕೆ ವಹಿಸಿಕೊಡಲಾದ ಪ್ರಕರಣಗಳಲ್ಲಿ ಕಾರ್ಯವಿಧಾನ:-**

(1) 9 ರಿಂದ 11ಎ ವರೆಗಿನ ನಿಯಮಗಳಲ್ಲಿ ಮತ್ತು 13ನೇ ನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಸರ್ಕಾರಿ ನೌಕರರ ವಿರುದ್ಧ ಆಪಾದಿಸಲಾಗಿರುವ ದುರ್ನಡತೆಯನ್ನು ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರ ಉಪಬಂಧಗಳ ಮೇರೆಗೆ ಅಥವಾ ಸರ್ಕಾರವು ಉಲ್ಲೇಖಿಸಿದ್ದರ ಮೇರೆಗೆ ಲೋಕಾಯುಕ್ತರು ಅಥವಾ ಉಪ ಲೋಕಾಯುಕ್ತರು ತನಿಖೆ ಮಾಡಿರುವಲ್ಲಿ[2][ಅಥವಾ ಅವರ ಮೇಲೆ ಆರೋಪಿಸಿದ ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, 1947ರ ಅಥವಾ ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, 1988ರ ಮೇರೆಗೆ ದಂಡನೀಯವಾದ ಅಪರಾಧಗಳನ್ನು ಕರ್ನಾಟಕ ಲೋಕಾಯುಕ್ತ ಪೊಲೀಸರು 1992ರ ಡಿಸೆಂಬರ್ 21ನೇ ದಿನಕ್ಕೆ ಮುಂಚೆ ತನಿಖೆ ಮಾಡಿದ್ದರೆ,][2] ಅಂಥ ಸರ್ಕಾರಿ ನೌಕರರ ವಿರುದ್ಧದ ವ್ಯವಹರಣೆಗಳ ಉದ್ದೇಶಗಳಿಗಾಗಿ (2)ನೇ ಉಪನಿಯಮದ ಉಪಬಂಧಗಳು ಅನ್ವಯವಾಗತಕ್ಕದ್ದು][1]

[1][(2)(ಎ) ಯಾವುದೇ ಆರೋಪದ ಬಗ್ಗೆ,-

(i) ರಾಜ್ಯ ಸಿವಿಲ್ ಸೇವೆಗಳ ಸಮೂಹ 'ಎ' ಯ ಅಥವಾ ಸಮೂಹ 'ಬಿ' ಯ ಸದಸ್ಯನ; ಅಥವಾ

(ii) ರಾಜ್ಯ ಸಿವಿಲ್ ಸೇವೆಗಳ ಸಮೂಹ 'ಎ' ಯ ಅಥವಾ ಸಮೂಹ 'ಬಿ'ಯ ಸದಸ್ಯನ ಮತ್ತು ರಾಜ್ಯ ಸಿವಿಲ್ ಸೇವೆಗಳ ಸಮೂಹ 'ಸಿ' ಯ ಅಥವಾ ಸಮೂಹ 'ಡಿ'ಯ ಸದಸ್ಯನ: ಅಥವಾ

(iii) ರಾಜ್ಯ ಸಿವಿಲ್ ಸೇವೆಯ ಸಮೂಹ 'ಸಿ' ಯ ಅಥವಾ ಸಮೂಹ 'ಡಿ'ಯ ಸದಸ್ಯನ ಸಂಬಂಧದಲ್ಲಿ,-

ತನಿಖೆ ನಡೆಸಿದ ನಂತರ [3][ಲೋಕಾಯುಕ್ತರು ಅಥವಾ ಉಪಲೋಕಾಯುಕ್ತರು ಅಥವಾ (1992ರ ಡಿಸೆಂಬರ್ ಇಪ್ಪತ್ತೊಂದನೇ ದಿನಕ್ಕೆ ಮುಂಚೆ), ಕರ್ನಾಟಕ ಲೋಕಾಯುಕ್ತ ಪೊಲೀಸ್ ದಳದ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಇವರು ಶಿಸ್ತು ವ್ಯವಹರಣೆಗಳನ್ನು ತೆಗೆದುಕೊಳ್ಳತಕ್ಕದ್ದೆಂದು ಅಭಿಪ್ರಾಯಪಟ್ಟರೆ][3], ಅವರು ಸರ್ಕಾರಕ್ಕೆ ತಮ್ಮ ಶಿಫಾರಸ್ಸುಗಳ ಜೊತೆಗೆ ತನಿಖೆಯ ದಾಖಲೆಯನ್ನು ಕಳುಹಿಸತಕ್ಕದ್ದು ಮತ್ತು ಸರ್ಕಾರವು ಅಂತಹ ದಾಖಲೆಯನ್ನು ಪರಿಶೀಲಿಸಿದ ತರುವಾಯ, ಲೋಕಾಯುಕ್ತರು ಅಥವಾ ಉಪಲೋಕಾಯುಕ್ತರು ವಿಚಾರಣೆಯನ್ನು ಮಾಡಲು ನಿರ್ದೇಶಿಸಬಹುದು ಅಥವಾ 12ನೇ ನಿಯಮಕ್ಕೆ ಅನುಸಾರವಾಗಿ ಕ್ರಮಕೈಗೊಳ್ಳುವುದಕ್ಕೆ ಸಮುಚಿತ ಶಿಸ್ತು ಪ್ರಾಧಿಕಾರಿಗೆ ನಿರ್ದೇಶಿಸಬಹುದು.

(ಬಿ)(ಎ) ಖಂಡದ ಮೇರೆಗೆ ಪ್ರಕರಣದ ವಿಚಾರಣೆಯನ್ನು ನಡೆಸಲು ಪ್ರಸ್ತಾವಿಸಿದ್ದರೆ, ಆ ವಿಚಾರಣೆಯನ್ನು, ಸಂದರ್ಭಾನುಸಾರ ಲೋಕಾಯುಕ್ತರು ಅಥವಾ ಉಪಲೋಕಾಯುಕ್ತರು ವಿಚಾರಣೆಯನ್ನು ನಡೆಸಲು ಲೋಕಾಯುಕ್ತರು ಅಥವಾ ಉಪಲೋಕಾಯುಕ್ತರು ಅಧಿಕೃತಗೊಳಿಸಿದ ಲೋಕಾಯುಕ್ತ ಸಿಬ್ಬಂದಿ ವರ್ಗದ ಒಬ್ಬ ಅಧಿಕಾರಿಯು ನಡೆಸಬಹುದು;

ಪರಂತು, ಸರ್ಕಾರಿ ನೌಕರನಿಗೆ ಸಂಬಂಧಿಸಿದ ವಿಚಾರಣೆಯನ್ನು ಅಂಥ ಸರ್ಕಾರಿ ನೌಕರನ ದರ್ಜೆಗಿಂತ ಕೆಳಗಿನ ದರ್ಜೆಯ ಅಧಿಕಾರಿಯು ನಡೆಸತಕ್ಕದ್ದಲ್ಲ;

ಮತ್ತೂ ಪರಂತು, ಜಿಲ್ಲಾಧಿಕಾರಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಸರ್ಕಾರಿ ನೌಕರನಿಗೆ ಸಂಬಂಧಿಸಿದ ವಿಚಾರಣೆಯನ್ನು ಲೋಕಾಯುಕ್ತ ಅಥವಾ ಉಪಲೋಕಾಯುಕ್ತ ಅಥವಾ ಹೆಚ್ಚುವರಿ ರಿಜಿಸ್ಟ್ರಾರ್(ವಿಚಾರಣೆಗಳು) ಇವರ ಹೊರತು ಇತರ ಯಾರೇ ವ್ಯಕ್ತಿಯು ನಡೆಸತಕ್ಕದ್ದಲ್ಲ;

ಮತ್ತೂ ಪರಂತು, (ಬಿ) ಖಂಡದ ಮೇರೆಗೆ ವಿಚಾರಣೆಯನ್ನು ನಡೆಸುವುದಕ್ಕೆ ಅಧಿಕೃತನಾದ ಲೋಕಾಯುಕ್ತ ಸಿಬ್ಬಂಧಿ ವರ್ಗದ ಒಬ್ಬ ಅಧಿಕಾರಿಗೆ ಅದನ್ನು ಸಂಪೂರ್ಣವಾಗಿ ಅಥವಾ ಭಾಗಶಃ ನಡೆಸಲು ಇನ್ನೊಬ್ಬ ಅಧಿಕಾರಿಯನ್ನು ನೇಮಿಸಲು ಅಧಿಕಾರವಿರತಕ್ಕದ್ದಲ್ಲ.

(ಸಿ) ಲೋಕಾಯುಕ್ತರು ಅಥವಾ ಉಪಲೋಕಾಯುಕ್ತರು ಅಥವಾ ವಿಚಾರಣೆಯನ್ನು ನಡೆಸಲು (ಬಿ) ಖಂಡದ ಮೇರೆಗೆ ಅಧಿಕೃತನಾದ ಅಧಿಕಾರಿಯು, ಅದನ್ನು 11ನೇ ನಿಯಮದ ಉಪಬಂಧಗಳಿಗೆ ಅನುಸಾರವಾಗಿ ಈ ನಿಯಮದ ಉಪಬಂಧಗಳಿಗೆ ಅವು ಅಸಂಗತವಾಗದಿರುವಷ್ಟರ ಮಟ್ಟಿಗೆ ನಡೆಸತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ ಸದರಿ ನಿಯಮದಲ್ಲಿ ಉಲ್ಲೇಖಿಸಿದ ಶಿಸ್ತು ಪ್ರಾಧಿಕಾರಿಯ ಅಧಿಕಾರಿಗಳನ್ನು ಹೊಂದಿರತಕ್ಕದ್ದು.

(ಡಿ) ವಿಚಾರಣೆಯು ಮುಗಿದ ತರುವಾಯ, ವಿಚಾರಣಾ ಅಧಿಕಾರಿಯ ನಿರ್ಣಯಗಳ ಮತ್ತು ಸಂದರ್ಭಾನುಸಾರ ಲೋಕಾಯುಕ್ತರ ಅಥವಾ ಉಪಲೋಕಾಯುಕ್ತರ ಶಿಫಾರಸ್ಸುಗಳ ಜೊತೆಗೆ ಪ್ರಕರಣದ ದಾಖಲೆಯನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು.

(ಇ)(ಡಿ)ಖಂಡದ ಮೇರೆಗೆ ದಾಖಲೆಯನ್ನು ಸ್ವೀಕರಿಸಿದ ಮೇಲೆ ಸರ್ಕಾರವು [4][XXX][4] 11ಎ ನಿಯಮದ ಉಪಬಂಧಗಳ ಅನುಸಾರವಾಗಿ ಕ್ರಮ ಕೈಗೊಳ್ಳತಕ್ಕದ್ದು ಮತ್ತು ಅಂತಹ ಎಲ್ಲ ಪ್ರಕರಣಗಳಲ್ಲಿಯೂ 8ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸಲು ಸರ್ಕಾರವು ಸಕ್ಷಮ ಶಿಸ್ತು ಪ್ರಾಧಿಕಾರಿಯಾಗಿರತಕ್ಕದ್ದು.

(3)(1)ನೇ ಉಪನಿಯಮದಲ್ಲಿರುವುದು ಯಾವುದೂ, ಕರ್ನಾಟಕ ನ್ಯಾಯಾಂಗ ಸೇವೆಯ ಸದಸ್ಯರಿಗೆ ಅಥವಾ ಅಂಥ ಸದಸ್ಯರ ಅಥವಾ ಕರ್ನಾಟಕ ಉಚ್ಚ ನ್ಯಾಯಾಲಯದ ಆಡಳಿತ ನಿಯಂತ್ರಣದಲ್ಲಿರುವ ಸರ್ಕಾರಿ ನೌಕರನಿಗೆ ಅನ್ವಯವಾಗತಕ್ಕದ್ದಲ್ಲ.

**ವಿವರಣೆ:-** ಈ ನಿಯಮದಲ್ಲಿ 'ಲೋಕಾಯುಕ್ತ' ಮತ್ತು 'ಉಪಲೋಕಾಯುಕ್ತ' ಪದಾವಳಿಯು ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು][1] [2][ಮತ್ತು 'ಕರ್ನಾಟಕ ಲೋಕಾಯುಕ್ತ ಪೊಲೀಸ್' ಎಂದರೆ ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರ 15ನೇ ಪ್ರಕರಣದ ಮೇರೆಗೆ ಸ್ಥಾಪಿಸಿದ ಪೊಲೀಸ್ ವಿಭಾಗ ಎಂದು ಅರ್ಥ ಮತ್ತು ಅದು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ, ಕರ್ನಾಟಕ ರಾಜ್ಯ ಜಾಗೃತ ಆಯೋಗ ನಿಯಮಗಳು, 1980ರಲ್ಲಿ ಹೇಳಿರುವ ಸಂವಾದಿ ವಿಭಾಗವನ್ನೂ ಒಳಗೊಳ್ಳುತ್ತದೆ ಮತ್ತು "ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್" ಪದಾವಳಿಯನ್ನು ತದನುಸಾರವಾಗಿ ಅರ್ಥೈಸತಕ್ಕದ್ದು.][2]

.....................................................................................................................................

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 5 ಎಸ್‌ಡಿಇ 86, ದಿನಾಂಕ; 7.5.86ರ ಮೂಲಕ ಪ್ರತಿಯೋಜಿಸಲಾಗಿದೆ.
2. ಅಧಿಸೂಚನೆ ಸಂಖ್ಯೆ: ಡಿಪಿಎಆರ್ 9 ಎಸ್‌ಡಿಇ 92, ದಿನಾಂಕ: 21.01.97ರ ಮೂಲಕ (15.1.86 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
3. ಅಧಿಸೂಚನೆ ಸಂಖ್ಯೆ; ಡಿಪಿಎಆರ್ 9 ಎಸ್‌ಡಿಇ 92, ದಿನಾಂಕ; 15.1.86 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. ಅಧಿಸೂಚನೆ ಸಂಖ್ಯೆ:ಡಿಪಿಎಆರ್ 37 ಎಸ್‌ಡಿಇ 2001, ದಿನಾಂಕ: 26.12.2001ರ ಮೂಲಕ 31.12.2001 ರಿಂದ ಪರಿಣಾಮಕಾರಿಯಾಗುವಂತೆ ಬಿಟ್ಟುಬಿಡಲಾಗಿದೆ. (ಕೆಜಿಡಿ 31.12.2001).

**14ಬಿ. ಮಹಿಳೆಯರ ವಿರುದ್ಧ ಲೈಂಗಿಕ ಕಿರುಕುಳ ಎಸಗಿರುವ ಪ್ರಕರಣಗಳಲ್ಲಿ ಕಾರ್ಯವಿಧಾನ,-**

11 ರಿಂದ 13ರವರೆಗಿನ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರ ವಿರುದ್ಧ ಎಸಗುವ ಲೈಂಗಿಕ ಕಿರುಕುಳಗಳಿಗೆ ಸಂಬಂಧಿಸಿದಂತೆ ವಿಚಾರಣೆ ಮಾಡಲು ರಚಿಸಲಾಗಿರುವ ರಾಜ್ಯ ಮಟ್ಟದ ಸಮಿತಿ ಹಾಗೂ ಜಿಲ್ಲಾ ಮಟ್ಟದ ಸಮಿತಿಗಳು ಸರ್ಕಾರಿ ನೌಕರರ ಬಗ್ಗೆ ವಿಚಾರಣೆ ನಡೆಸಿ, ವಿವರಣೆ ಮತ್ತು ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದಲ್ಲಿ, ಸಕ್ಷಮ ಶಿಸ್ತು ಪ್ರಾಧಿಕಾರ ಅಂಥ ವರದಿಯನ್ನು ಪರಿಶೀಲಿಸಿ ರುಜುವಾತಾದ ದುರ್ನಡತೆಯ ಗಂಭೀರತೆ ಮತ್ತು ಸ್ವರೂಪವನ್ನು ದೃಷ್ಟಿಯಲ್ಲಿಟ್ಟುಕೊಂಡು ನಿಯಮ 8(i) ರಿಂದ (viii) ವರೆಗೆ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ದಂಡನೆಗಳನ್ನು ವಿಧಿಸಬಹುದಾಗಿದೆ. ಅಂಥ ದಂಡನೆಯನ್ನು ವಿಧಿಸುವ ಮೊದಲು ಆರೋಪಿತರಿಗೆ ಹೇಳಿಕೆ ನೀಡಲು ಅವಕಾಶ ನೀಡತಕ್ಕದ್ದು.

ಪರಂತು, ಯಾವ ಪ್ರಕರಣದಲ್ಲಿ ಆಯೋಗದೊಡನೆ ಸಮಾಲೋಚನೆಯು ಅವಶ್ಯವಾಗಿರುವುದೋ ಆ ಯಾವುದೇ ಪ್ರಕರಣದಲ್ಲಿ ಅಂಥ ಆದೇಶವನ್ನು ಹೊರಡಿಸುವುದಕ್ಕೆ ಮುಂಚೆ ಆಯೋಗದೊಡನೆ ಸಮಾಲೋಚಿಸತಕ್ಕದ್ದು.

..........................................................................................................................................

1. ಅಧಿಸೂಚನೆ ಸಂಖ್ಯೆ: ಡಿಪಿಎಆರ್ 20 ಎಸ್‌ಡಿಇ 2013, ದಿನಾಂಕ: 02.12.2013ರ ಮೂಲಕ ಸೇರಿಸಲಾಗಿದೆ.

15. **ಎರವಲು ಮೇಲೆ ಹೋಗಿರುವ ಅಧಿಕಾರಿಗಳಿಗೆ ಸಂಬಂಧಿಸಿದ ಉಪಬಂಧಗಳು:-**

(1) ಸರ್ಕಾರಿ ನೌಕರರ ಸೇವೆಗಳನ್ನು ಕೇಂದ್ರ ಸರ್ಕಾರಕ್ಕೆ ಯಾವುದೇ ರಾಜ್ಯ ಸರ್ಕಾರಕ್ಕೆ ಅಥವಾ ಸ್ಥಳೀಯ ಅಥವಾ ಇತರ ಪ್ರಾಧಿಕಾರಕ್ಕೆ (ಈ ನಿಯಮದಲ್ಲಿ ಇನ್ನು ಮುಂದೆ ಎರವಲು ಪಡೆಯುವ ಪ್ರಾಧಿಕಾರಿಯೆಂದು ಉಲ್ಲೇಖಿಸಲಾಗಿದೆ) ಎರವಲು ಕೊಟ್ಟಿರುವ ಸಂದರ್ಭದಲ್ಲಿ, ಎರವಲು ಪಡೆದ ಪ್ರಾಧಿಕಾರವು ಅವನನ್ನು ಅಮಾನತ್ತಿನಲ್ಲಿಡುವ ಉದ್ದೇಶಕ್ಕಾಗಿ ನೇಮಕ ಪ್ರಾಧಿಕಾರಿಯ ಅಧಿಕಾರಿಯ ಅಧಿಕಾರಗಳನ್ನು ಮತ್ತು ಅವನ ವಿರುದ್ಧ ಶಿಸ್ತು ಕ್ರಮವನ್ನು ತೆಗೆದುಕೊಳ್ಳುವ ಉದ್ದೇಶಕ್ಕಾಗಿ ಶಿಸ್ತು ಪ್ರಾಧಿಕಾರಿಯ ಅಧಿಕಾರವನ್ನು ಹೊಂದಿರತಕ್ಕದ್ದು;

ಪರಂತು, ಎರವಲು ಪಡೆದ ಪ್ರಾಧಿಕಾರವು ಎರವಲು ಕೊಟ್ಟ ಪ್ರಾಧಿಕಾರದ ಪೂರ್ವಾನುಮೋದನೆ ಪಡೆಯದೆ ಅಂಥ ಸರ್ಕಾರಿ ನೌಕರನ ವಿರುದ್ಧ ಶಿಸ್ತು ವ್ಯವಹರಣೆಗಳನ್ನು ಕೈಗೊಳ್ಳತಕ್ಕದ್ದಲ್ಲ ಅಥವಾ ಆತನನ್ನು ಅಮಾನತ್ತಿನಲ್ಲಿಡತಕ್ಕದ್ದಲ್ಲ.

(2) ಸರ್ಕಾರಿ ನೌಕರನ ವಿರುದ್ಧ ಶಿಸ್ತು ವ್ಯವಹರಣೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಗಮನದಲ್ಲಿಟ್ಟುಕೊಂಡು,-

(i) ಎರವಲು ಪಡೆದ ಪ್ರಾಧಿಕಾರವು, 8ನೇ ನಿಯಮದ [1][(i) ರಿಂದ (ivಎ)][1] ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ಅವನಿಗೆ ವಿಧಿಸಬೇಕೆಂದು ಅಭಿಪ್ರಾಯಪಟ್ಟರೆ, ಎರವಲು ಕೊಟ್ಟ ಪ್ರಾಧಿಕಾರದೊಡನೆ ಸಮಾಲೋಚಿಸಿ ಪ್ರಕರಣದ ಬಗ್ಗೆ ತಾನು ಅವಶ್ಯವೆಂದು ಭಾವಿಸಬಹುದಾದಂಥ ಆದೇಶಗಳನ್ನು ಅದು ಮಾಡಬಹುದು:

ಪರಂತು, ಎರವಲು ಪಡೆಯುವ ಪ್ರಾಧಿಕಾರಿ ಮತ್ತು ಎರವಲು ಕೊಟ್ಟ ಪ್ರಾಧಿಕಾರಿಯ ನಡುವೆ ಭಿನ್ನಾಭಿಪ್ರಾಯ ಬಂದ ಸಂದರ್ಭದಲ್ಲಿ ಸರ್ಕಾರಿ ನೌಕರನ ಸೇವೆಗಳನ್ನು ಎರವಲು ಕೊಡುವ ಪ್ರಾಧಿಕಾರಿಗೆ ಪುನಃ ಒಪ್ಪಿಸತಕ್ಕದ್ದು.

(ii) ಎರವಲು ಪಡೆದ ಪ್ರಾಧಿಕಾರವು, 8ನೇ ನಿಯಮದ (v) ರಿಂದ (viii)ರ ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ಅವನಿಗೆ ವಿಧಿಸಬೇಕೆಂದು ಅಭಿಪ್ರಾಯಪಟ್ಟರೆ, ಆ ಪ್ರಾಧಿಕಾರವು ಎರವಲು ಕೊಟ್ಟ ಪ್ರಾಧಿಕಾರಕ್ಕೆ ಅವನ ಸೇವೆಗಳನ್ನು ಪುನಃ ಒಪ್ಪಿಸತಕ್ಕದ್ದು ಮತ್ತು ವಿಚಾರಣೆಯ ವ್ಯವಹರಣೆಗಳಿಗಾಗಿ ಆ ಪ್ರಕರಣವನ್ನು ರವಾನಿಸತಕ್ಕದ್ದು ಮತ್ತು ಆ ತರುವಾಯ ಎರವಲು ಕೊಟ್ಟ ಪ್ರಾಧಿಕಾರವು ಅದೇ ಶಿಸ್ತು ಪ್ರಾಧಿಕಾರವಾಗಿದ್ದರೆ, ಶಿಸ್ತು ಪ್ರಾಧಿಕಾರಿಗೆ ಆ ಪ್ರಕರಣವನ್ನು ಒಪ್ಪಿಸತಕ್ಕದ್ದು, ಶಿಸ್ತು ಪ್ರಾಧಿಕಾರಿಯು ಆ ಪ್ರಕರಣದ ಬಗ್ಗೆ ತಾನು ಅವಶ್ಯವೆಂದು ಭಾವಿಸುವಂಥ ಆದೇಶಗಳನ್ನು ಮಾಡತಕ್ಕದ್ದು.

ಪರಂತು, ಯಾವುದೇ ಅಂಥ ಆದೇಶವನ್ನು ಮಾಡುವಾಗ ಶಿಸ್ತು ಪ್ರಾಧಿಕಾರಿಯು [1][11ಎ ನಿಯಮದ][1] ಉಪಬಂಧಗಳನ್ನು ಪಾಲಿಸತಕ್ಕದ್ದು.

**ವಿವರಣೆ:-** ಶಿಸ್ತು ಪ್ರಾಧಿಕಾರಿಯು ಎರವಲು ಪಡೆದ ಪ್ರಾಧಿಕಾರವು ಕಳಿಸಿಕೊಟ್ಟ ವಿಚಾರಣೆಯ ದಾಖಲೆಯ ಮೇಲೆ ಅಥವಾ [2][ಸಾಧ್ಯವಾದಷ್ಟು ಮಟ್ಟಿಗೆ 11ನೇ ನಿಯಮಕ್ಕೆ ಅನುಸಾರವಾಗಿ ತಾನು ಅವಶ್ಯವೆಂದು ಭಾವಿಸಬಹುದಾದಂಥ][2] ಇನ್ನೂ ಹೆಚ್ಚಿನ ವಿಚಾರಣೆಯನ್ನು ಮಾಡಿದ ತರುವಾಯ (2)ನೇ ಉಪನಿಯಮದ (ii)ನೇ ಖಂಡದ ಮೇರೆಗೆ ಆದೇಶವನ್ನು ಮಾಡಬಹುದು.

[3][(2ಎ) ಈ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ,-

(i) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ 155ನೇ ಅಥವಾ 196ನೇ ಪ್ರಕರಣದ ಮೇರೆಗೆ, ಸರ್ಕಾರದ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಹೊರಡಿಸಿದ ಆದೇಶದ ಮೂಲಕ, ಜಿಲ್ಲಾ ಪಂಚಾಯತಿಗೆ ಅಥವಾ ತಾಲ್ಲೂಕು ಪಂಚಾಯತಿಗೆ ಸಮೂಹ 'ಎ' ಅಥವಾ 'ಬಿ' ಹುದ್ದೆ ಹೊಂದಿರುವ ಯಾವ ಸರ್ಕಾರಿ ನೌಕರನ ಸೇವೆಯನ್ನು ಎರವಲು ಕೊಡಲಾಗಿದೆಯೋ ಆ ಸರ್ಕಾರಿ ನೌಕರನಿಗೆ ಸಂಬಂಧಪಟ್ಟಂತೆ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು;

(ii) ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು,-

(ಎ)(i) ನೇ ಖಂಡದಲ್ಲಿ ಉಲ್ಲೇಖಿಸಿದ ಸರ್ಕಾರಿ ನೌಕರನನ್ನು ಹೊರತುಪಡಿಸಿ ಜಿಲ್ಲಾ ಪಂಚಾಯತಿಗೆ, ತಾಲೂಕು ಪಂಚಾಯಿತಿಗೆ ಅಥವಾ ಗ್ರಾಮ ಪಂಚಾಯಿತಿಗೆ ಸಮೂಹ 'ಬಿ' ಹುದ್ದೆಯನ್ನು ಅಥವಾ ಸಮೂಹ 'ಸಿ' ಹುದ್ದೆಯನ್ನು ಅಥವಾ ಸಮೂಹ 'ಡಿ' ಹುದ್ದೆಯನ್ನು ಹೊಂದಿರುವ ಯಾವ ಸರ್ಕಾರಿ ನೌಕರನ ಸೇವೆಯನ್ನು ಎರವಲು ನೀಡಲಾಗಿದೆಯೋ ಆ ಸರ್ಕಾರಿ ನೌಕರನಿಗೆ ಸಂಬಂಧಪಟ್ಟಂತೆ;

(ಬಿ) ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯದ ಸದಸ್ಯನಾಗಿರುವ, ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕೆಲಸ ಮಾಡುತ್ತಿರುವ ಯಾರೇ ವೈದ್ಯನಿಗೆ ಸಂಬಂಧಪಟ್ಟಂತೆ

-ಅಂಥ ಸರ್ಕಾರಿ ನೌಕರನನ್ನು ಅಮಾನತ್ತಿನಲ್ಲಿಡಲು ನೇಮಕ ಪ್ರಾಧಿಕಾರಿಯ ಅಧಿಕಾರಗಳನ್ನು ಮತ್ತು ಅವನ ವಿರುದ್ಧ ಶಿಸ್ತು ವ್ಯವಹರಣೆಗಳನ್ನು ಕೈಗೊಳ್ಳುವ ಉದ್ದೇಶಕ್ಕಾಗಿ ಶಿಸ್ತು ಪ್ರಾಧಿಕಾರಿಯ ಅಧಿಕಾರಗಳನ್ನು ಮತ್ತು ಅಂಥ ಸರ್ಕಾರಿ ನೌಕರನ ಮೇಲೆ 8ನೇ ನಿಯಮದ (i) ರಿಂದ (ivಎ) ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸಲು ಶಿಸ್ತು ಪ್ರಾಧಿಕಾರಿಯ ಅಧಿಕಾರಗಳನ್ನು ಹೊಂದಿರತಕ್ಕದ್ದು. ಅಂಥ ಸರ್ಕಾರಿ ನೌಕರನನ್ನು ಅಮಾನತ್ತಿನಲ್ಲಿಡುವುದಕ್ಕೆ ಅಥವಾ ಸದರಿ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ಅವನಿಗೆ ವಿಧಿಸುವುದಕ್ಕೆ ಮುಂಚೆ, ಎರವಲು ಕೊಟ್ಟ ಪ್ರಾಧಿಕಾರಿಯ ಅಥವಾ ಸಂದರ್ಭಾನುಸಾರ, ನೇಮಕ ಪ್ರಾಧಿಕಾರಿಯ ಅನುಮೋದನೆ ಪಡೆಯುವುದು ಮತ್ತು ಅವರೊಡನೆ ಸಮಾಲೋಚಿಸುವುದು, ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಅಥವಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಅವಶ್ಯಕವಾಗಿರತಕ್ಕದ್ದಲ್ಲ.][3]

[4][(2ಬಿ) ಈ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ,-

(i) ಸಮೂಹ 'ಎ' ಅಥವಾ 'ಬಿ' ಹುದ್ದೆಯನ್ನು ಹೊಂದಿರುವ ಯಾವ ಸರ್ಕಾರಿ ನೌಕರನ ಸೇವೆಯನ್ನು ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976ರ ಅಡಿಯಲ್ಲಿ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯು ಹೊರಡಿಸಿದ ಆದೇಶದ ಮೂಲಕ ನಗರ ಪೌರ ನಿಗಮಕ್ಕೆ ಎರವಲು ನೀಡಲಾಗಿದೆಯೋ ಆ ಸರ್ಕಾರಿ ನೌಕರನ ಸಂಬಂಧದಲ್ಲಿ, ಸರ್ಕಾರವು;

[8][ ಪರಂತು, ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಿಯೋಜನೆಯ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಗುಂಪು 'ಬಿ' ಗುಂಪು 'ಸಿ' ಅಥವಾ ಗುಂಪು 'ಡಿ' ವೃಂದದ ನೌಕರರ ಪ್ರಕರಣಗಳಿಗೆ ಸಂಬಂಧಿಸಿದಂತೆ ಇನ್ನು ಮುಂದೆ ನೇಮಕಾತಿ ಪ್ರಾಧಿಕಾರಿದ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.][8]

(ii) ಸಮೂಹ 'ಸಿ' ಅಥವಾ 'ಡಿ' ಹುದ್ದೆಯನ್ನು ಹೊಂದಿರುವ ಯಾವ ಸರ್ಕಾರಿ ನೌಕರನ ಸೇವೆಯನ್ನು ನಗರ ಪೌರ ನಿಗಮಕ್ಕೆ ಎರವಲು ನೀಡಲಾಗಿದೆಯೋ ಆ ಸರ್ಕಾರಿ ನೌಕರನ ಸಂಬಂಧದಲ್ಲಿ, ನಗರ ಪೌರ ನಿಗಮದ ಆಯುಕ್ತರು.

-ಅಂಥ ಸರ್ಕಾರಿ ನೌಕರನನ್ನು ಅಮಾನತ್ತಿನಲ್ಲಿಡಲು ನೇಮಕ ಪ್ರಾಧಿಕಾರಿಯ ಅಧಿಕಾರಿಗಳನ್ನು ಮತ್ತು ಅವನ ವಿರುದ್ಧ ಶಿಸ್ತು ವ್ಯವಹರಣೆಗಳನ್ನು ಕೈಗೊಳ್ಳುವ ಉದ್ದೇಶಕ್ಕಾಗಿ ಶಿಸ್ತು ಪ್ರಾಧಿಕಾರಿಯ ಅಧಿಕಾರಗಳನ್ನು ಮತ್ತು ಅಂಥ ಸರ್ಕಾರಿ ನೌಕರನ ಮೇಲೆ 8ನೇ ನಿಯಮದ (i) ರಿಂದ (ivಎ) ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸಲು ಶಿಸ್ತು ಪ್ರಾಧಿಕಾರಿಯ ಅಧಿಕಾರಗಳನ್ನು ಹೊಂದಿರತಕ್ಕದ್ದು. ಅಂಥ ಸರ್ಕಾರಿ ನೌಕರನನ್ನು ಅಮಾನತ್ತಿನಲ್ಲಿಡುವುದಕ್ಕೆ ಅಥವಾ ಸದರಿ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ಅವನಿಗೆ ವಿಧಿಸುವುದಕ್ಕೆ ಮುಂಚೆ, ಎರವಲು ಕೊಟ್ಟ ಪ್ರಾಧಿಕಾರಿಯ ಅಥವಾ ಸಂದರ್ಭಾನುಸಾರ, ನೇಮಕ ಪ್ರಾಧಿಕಾರಿಯ ಅನುಮೋದನೆ ಪಡೆಯುವುದು ಅಥವಾ ಅವರೊಡನೆ ಸಮಾಲೋಚಿಸುವುದು ಸರ್ಕಾರದ ನಗರಾಭಿವೃದ್ಧಿ ಇಲಾಖೆಗೆ ಅಥವಾ ಆಯುಕ್ತರಿಗೆ ಅವಶ್ಯಕವಾಗಿರತಕ್ಕದ್ದಲ್ಲ.][4]

[6] [(2ಸಿ) ಈ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ,-

(i) ಸಮೂಹ 'ಎ' ಅಥವಾ 'ಬಿ' ಹುದ್ದೆಗಳನ್ನು ಹೊಂದಿರುವ ಯಾವ ಸರ್ಕಾರಿ ನೌಕರನ ಸೇವೆಯನ್ನು ಕಾವೇರಿ ನೀರಾವರಿ ನಿಗಮ ನಿಯಮಿತಕ್ಕೆ, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತಕ್ಕೆ, ಕರ್ನಾಟಕ ನೀರಾವರಿ ನಿಗಮ ನಿಯಮಿತಕ್ಕೆ ಎರವಲು ಕೊಡಲಾಗಿದೆಯೋ ಆ ಸರ್ಕಾರಿ ನೌಕರನ ಸಂಬಂಧದಲ್ಲಿ ಸರ್ಕಾರದ ಜಲಸಂಪನ್ಮೂಲ ಇಲಾಖೆಯ;
(ii) ಸಮೂಹ 'ಸಿ' ಅಥವಾ ಸಮೂಹ 'ಡಿ' ಹುದ್ದೆಯನ್ನು ಹೊಂದಿರುವ ಯಾವ ಸರ್ಕಾರಿ ನೌಕರನ ಸೇವೆಯನ್ನು ಸಂದರ್ಭಾನುಸಾರ, ಕಾವೇರಿ ನೀರಾವರಿ ನಿಗಮ ನಿಯಮಿತಕ್ಕೆ, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತಕ್ಕೆ, ಕರ್ನಾಟಕ ನೀರಾವರಿ ನಿಗಮ ನಿಯಮಿತಕ್ಕೆ ಎರವಲು ಕೊಡಲಾಗಿದೆಯೋ ಆ ಸರ್ಕಾರಿ ನೌಕರನ ಸಂಬಂಧದಲ್ಲಿ ಕಾವೇರಿ ನೀರಾವರಿ ನಿಗಮ ನಿಯಮಿತ, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಕರ್ನಾಟಕ ನೀರಾವರಿ ನಿಗಮ ನಿಯಮಿತ- ಇವುಗಳ ವ್ಯವಸ್ಥಾಪಕ ನಿರ್ದೇಶಕರು;

- ಅಂಥ ಸರ್ಕಾರಿ ನೌಕರನನ್ನು ಅಮಾನತ್ತಿನಲ್ಲಿಡಲು ನೇಮಕ ಪ್ರಾಧಿಕಾರಿಯ ಅಧಿಕಾರಿಗಳನ್ನು ಮತ್ತು ಅವನ ವಿರುದ್ಧ ಶಿಸ್ತು ವ್ಯವಹರಣೆಗಳನ್ನು ಕೈಗೊಳ್ಳುವ ಉದ್ದೇಶಕ್ಕಾಗಿ ಶಿಸ್ತು ಪ್ರಾಧಿಕಾರಿಯ ಅಧಿಕಾರಗಳನ್ನು ಮತ್ತು ಅಂಥ ಸರ್ಕಾರಿ ನೌಕರನ ಮೇಲೆ 8ನೇ ನಿಯಮದ (i)ರಿಂದ (ivಎ) ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸಲು ಶಿಸ್ತು ಪ್ರಾಧಿಕಾರಿಯು ಅಧಿಕಾರಿಗಳನ್ನು ಹೊಂದಿರತಕ್ಕದ್ದು. ಅಂಥ ಸರಕಾರಿ ನೌಕರನನ್ನು ಅಮಾನತ್ತಿನಲ್ಲಿಡುವುದಕ್ಕೆ ಅಥವಾ ಸದರಿ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ಅವನಿಗೆ ವಿಧಿಸುವುದಕ್ಕೆ ಮುಂಚೆ, ಎರವಲು ಕೊಟ್ಟ ಪ್ರಾಧಿಕಾರಿಯ ಅಥವಾ ಸಂದರ್ಭಾನುಸಾರ, ನೇಮಕ ಪ್ರಾಧಿಕಾರಿಯ ಅನುಮೋದನೆ ಪಡೆಯುವುದು ಅಥವಾ ಅವರೊಡನೆ ಸಮಾಲೋಚಿಸುವುದು, ಸರ್ಕಾರದ ಜಲ ಸಂಪನ್ಮೂಲ ಇಲಾಖೆಗೆ ಅಥವಾ ವ್ಯವಸ್ಥಾಪಕ ನಿರ್ದೇಶಕರಿಗೆ

ಅವಶ್ಯಕವಾಗಿರತಕ್ಕದ್ದಲ್ಲ. ಆದರೆ ಹಾಗೆ ದಂಡ ವಿಧಿಸಿರುವುದನ್ನು ಎರವಲು ಕೊಟ್ಟ ಪ್ರಾಧಿಕಾರಿಗೆ ಅಥವಾ ನೇಮಕ ಪ್ರಾಧಿಕಾರಿಗೆ ತಿಳಿಸಿವುದು ಅವಶ್ಯಕ.

[5&7][(3) ಈ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, (2ಎ), (2ಬಿ) ಅಥವಾ (2ಸಿ) ಉಪ ನಿಯಮಗಳಲ್ಲಿ ಉಲ್ಲೇಖಿಸಿದ ಸರ್ಕಾರಿ ನೌಕರನು:-

(i) ಎರವಲು ಪಡೆದ ಪ್ರಾಧಿಕಾರಿಗಳಲ್ಲಿ ಸೇವೆ ಸಲ್ಲಿಸುತ್ತಿರುವಾಗ, ಯಾವುದೇ ದುರ್ನಡತೆ ಅಥವಾ ದುರ್ವತನೆಯನ್ನು ಎಸಗಿದ್ದಾನೆಂದು ಆರೋಪಿಸಲಾಗಿರುವ, ಅಂಥ ಸರ್ಕಾರಿ ನೌಕರನ ವಿರುದ್ಧ ಶಿಸ್ತು ವ್ಯವಹರಣೆಯನ್ನು ಪ್ರಾರಂಭಿಸುವುದಕ್ಕೆ ಮುಂಚೆ (2ಎ), (2ಬಿ) ಅಥವಾ (2ಸಿ) ಉಪನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಶಿಸ್ತು ಪ್ರಾಧಿಕಾರಿಯ ಅಧಿಕಾರ ವ್ಯಾಪ್ತಿಯಿಂದ ಹೊರಗೆ ಅವನನ್ನು ವರ್ಗಾವಣೆ ಮಾಡಿದ್ದರೆ, ಪ್ರತಿನಿಯೋಜಿಸಿದ್ದರೆ ಅಥವಾ ಅನ್ಯಥಾ ಸ್ಥಳನಿಯುಕ್ತಿ ಮಾಡಿದ್ದರೆ, ಅದೇ ಶಿಸ್ತು ಪ್ರಾಧಿಕಾರಿಯು ಶಿಸ್ತು ವ್ಯವಹರಣೆಗಳನ್ನು ಪ್ರಾರಂಭಿಸಲು ಮತ್ತು ಅಂಥ ಸರ್ಕಾರಿ ನೌಕರನ ಮೇಲಣ ಆರೋಪ ವಿಷಯಗಳ ವಿಚಾರಣೆಯನ್ನು ಮುಕ್ತಾಯಗೊಳಿಸಲು ಅಥವಾ ಮುಕ್ತಾಯಗೊಳಿಸುವಂತೆ ಮಾಡಲು ಮತ್ತು ಅಂಥ ಸರ್ಕಾರಿ ನೌಕರನಿಗೆ 8ನೇ ನಿಯಮದ (i) ರಿಂದ (ivಎ)ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸಲು ಅಧಿಕಾರ ಹೊಂದಿರತಕ್ಕದ್ದು;

(ii) ಶಿಸ್ತು ವ್ಯವಹರಣೆಯು ಇತ್ಯರ್ಥದಲ್ಲಿರುವಾಗ, ಅಂಥ ಸರ್ಕಾರಿ ನೌಕರನ ಶಿಸ್ತು ವ್ಯವಹರಣೆಯನ್ನು ಪ್ರಾರಂಬಿಸಿದ (2ಎ), (2ಬಿ) ಅಥವಾ (2ಸಿ) ಉಪನಿಯಮದಲ್ಲಿ ಉಲ್ಲೇಖಿಸಿದ ಶಿಸ್ತು ಪ್ರಾಧಿಕಾರಿಯ ಅಧಿಕಾರ ವ್ಯಾಪ್ತಿಯಿಂದ ಹೊರಗೆ ಅಂಥ ಸರ್ಕಾರಿ ನೌಕರನನ್ನು ವರ್ಗಾವಣೆ ಮಾಡಿದ್ದರೆ, ಪ್ರತಿನಿಯೋಜಿಸಿದ್ದರೆ ಅಥವಾ ಅನ್ಯಥಾ ಸ್ಥಳನಿಯುಕ್ತಿ ಮಾಡಿದ್ದರೆ, ಅದೇ ಶಿಸ್ತು ಪ್ರಾಧಿಕಾರಿಯು ಈ ನಿಯಮಗಳಿಗೆ ಅನುಸಾರವಾಗಿ ಅಂಥ ಸರ್ಕಾರಿ ನೌಕರನ ಮೇಲಣ ಆರೋಪ ವಿಷಯಗಳ ವಿಚಾರಣೆಯನ್ನು ಮುಂದುವರೆಸತಕ್ಕದ್ದು ಮತ್ತು ಮುಕ್ತಾಯಗೊಳಿಸತಕ್ಕದ್ದು ಅಥವಾ ಮುಂದುವರೆಯುವಂತೆ ಅಥವಾ ಮುಕ್ತಾಯಗೊಳಿಸುವಂತೆ ಮಾಡತಕ್ಕದ್ದು ಮತ್ತು ಅಂಥ ಸರ್ಕಾರಿ ನೌಕರನಿಗೆ 8ನೇ ನಿಯಮದ (i) ರಿಂದ (ivಎ) ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸಲು ಅಧಿಕಾರ ಹೊಂದಿರತಕ್ಕದ್ದು;

ಪರಂತು, ಈ ಉಪನಿಯಮದ ಅಡಿಯಲ್ಲಿ, ಸಂದರ್ಭಾನುಸಾರ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು, ಕಮೀಷನರು ಅಥವಾ ವ್ಯವಸ್ಥಾಪಕ ನಿರ್ದೇಶಕರು ಹೊರಡಿಸಿದ ಆದೇಶದ ವಿರುದ್ಧ;-

(i) (2ಎ) ಉಪನಿಯಮದ (ii)ನೇ ಖಂಡದ (ಎ) ಉಪಖಂಡದಲ್ಲಿ [8][ಖಂಡ (i) ರಡಿ ಇರುವ ಪರಂತುಕ ಮತ್ತು][8] ಅಥವಾ (2ಬಿ) ಉಪ ನಿಯಮದ (ii)ನೇ ಖಂಡದಲ್ಲಿ ಅಥವಾ (2ಸಿ) ಉಪನಿಯಮದ (ii)ನೇ ಖಂಡದಲ್ಲಿ ಉಲ್ಲೇಖಿಸಿದ ಸರ್ಕಾರಿ ನೌಕರನು, ತಾನು ಯಾವ ಇಲಾಖೆಗೆ ಸೇರಿರುವವನೋ ಆ ಇಲಾಖಾ ಮುಖ್ಯಸ್ಥರಿಗೆ;

(ii) (2ಎ) ಉಪನಿಯಮದ (ii)ನೇ ಖಂಡದ (ಬಿ) ಉಪಖಂಡದಲ್ಲಿ ಉಲ್ಲೇಖಿಸಿದ ವೈದ್ಯನು ಸರ್ಕಾರಕ್ಕೆ

-ಅಪೀಲನ್ನು ಸಲ್ಲಿಸತಕ್ಕದ್ದು.][5&7]

---

1. ಅಧಿಸೂಚನೆ ಸಂಖ್ಯೆ: ಜಿಎಡಿ 28 ಎಸ್‌ಎಸ್‌ಆರ್ 69, ದಿನಾಂಕ: 12.12.73, ಕೆಜಿಡಿ 24.1.74 ರ ಮೂಲಕ ಪ್ರತಿಯೋಜಿಸಲಾಗಿದೆ.
2. ಅಧಿಸೂಚನೆ ಸಂಖ್ಯೆ ಜಿಎಡಿ 28 ಎಸ್‌ಎಸ್‌ಆರ್ 69, ದಿನಾಂಕ: 12.12.73; ಕೆಜಿಡಿ 24.1.74ರ ಮೂಲಕ ಸೇರಿಸಲಾಗಿದೆ.
3. ಅಧಿಸೂಚನೆ ಸಂಖ್ಯೆ ಡಿಪಿಎಆರ್ 19 ಎಸ್‌ಡಿಇ 95, ದಿನಾಂಕ: 07.03.2002ರ ಮೂಲಕ ಪ್ರತಿಯೋಜಿಸಲಾಗಿದೆ. (11.4.2002 ರಿಂದ ಜಾರಿಗೆ ಬಂದಿದೆ)
4. ಅಧಿಸೂಚನೆ ಸಂಖ್ಯೆ ಡಿಪಿಎಆರ್ 12 ಎಸ್‌ಡಿಇ 2005, ದಿನಾಂಕ: 24.4.2006ರ ಮೂಲಕ ಸೇರಿಸಲಾಗಿದೆ.
5. ಅಧಿಸೂಚನೆ ಸಂಖ್ಯೆ ಡಿಪಿಎಆರ್ 12 ಎಸ್‌ಡಿಇ 2005, ದಿನಾಂಕ: 24.4.2006ರ ಮೂಲಕ ಪ್ರತಿಯೋಜಿಸಲಾಗಿದೆ.
6. ಅಧಿಸೂಚನೆ ಸಂಖ್ಯೆ ಡಿಪಿಎಆರ್ 5 ಎಸ್‌ಡಿಎ 2006, ದಿನಾಂಕ: 16.11.2006ರ ಮೂಲಕ ಸೇರಿಸಲಾಗಿದೆ.

7. ಅಧಿಸೂಚನೆ ಸಂಖ್ಯೆ ಡಿಪಿಎಆರ್ 5 ಎಸ್‌ಡಿಎ 2006, ದಿನಾಂಕ: 16.11.2006ರ ಮೂಲಕ ಪ್ರತಿಯೋಜಿಸಲಾಗಿದೆ.
8. ಅಧಿಸೂಚನೆ ಸಂಖ್ಯೆ ಡಿಪಿಎಆರ್ 15 ಎಸ್‌ಡಿಇ 2011, ದಿನಾಂಕ: 03.09.2012ರ ಮೂಲಕ ಸೇರಿಸಲಾಗಿದೆ.

### 16. ಎರವಲು ಮೇಲೆ ಬಂದಿರುವ ಅಧಿಕಾರಿಗಳಿಗೆ ಸಂಬಂಧಿಸಿದ ಉಪಬಂಧಗಳು:-

(1) ಯಾವ ಸರ್ಕಾರಿ ನೌಕರನ ಸೇವೆಗಳನ್ನು ಕೇಂದ್ರ ಸರ್ಕಾರದಿಂದ, ಯಾವುದೇ ರಾಜ್ಯ ಸರ್ಕಾರದಿಂದ ಅಥವಾ ಸ್ಥಳೀಯ ಅಥವಾ ಇತರ ಪ್ರಾಧಿಕಾರದಿಂದ ಎರವಲು ಪಡೆಯಲಾಗಿದೆಯೋ ಆ ಸರ್ಕಾರಿ ನೌಕರನ ವಿರುದ್ಧ ಅಮಾನತ್ತು ಆದೇಶವನ್ನು ಮಾಡಿರುವಲ್ಲಿ ಅಥವಾ ಶಿಸ್ತು ವ್ಯವಹರಣೆಯನ್ನು ಕೈಗೊಂಡಿರುವಲ್ಲಿ, ಅವನ ಸೇವೆಗಳನ್ನು ಎರವಲು ಕೊಟ್ಟ ಪ್ರಾಧಿಕಾರಕ್ಕೆ (ಈ ನಿಯಮದಲ್ಲಿ ಇನ್ನು ಮುಂದೆ "ಎರವಲು ಕೊಟ್ಟ ಪ್ರಾಧಿಕಾರ" ಎಂದು ಉಲ್ಲೇಖಿಸಲಾಗಿದೆ) ಸಂದರ್ಭಾನುಸಾರ, ಆ ನೌಕರನ ಅಮಾನತ್ತಿನ ಆದೇಶಕ್ಕೆ ಅಥವಾ ಶಿಸ್ತು ವ್ಯವಹರಣೆಯ ಪ್ರಾರಂಭಕ್ಕೆ ಕಾರಣವಾದ ಸಂದರ್ಭಗಳನ್ನು ಕುರಿತು ಮಾಹಿತಿಯನ್ನು ಕೂಡಲೇ ತಿಳಿಸತಕ್ಕದ್ದು.

(2) ಸರ್ಕಾರಿ ನೌಕರನ ವಿರುದ್ಧ ಶಿಸ್ತು ವ್ಯವಹರಣೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಗಮನದಲ್ಲಿಟ್ಟುಕೊಂಡು;-

(i) 8ನೇ ನಿಯಮದ (i) ರಿಂದ (ivಎ)ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ಅವನಿಗೆ ವಿಧಿಸಬೇಕೆಂದು ಶಿಸ್ತು ಪ್ರಾಧಿಕಾರಿಯು ಅಭಿಪ್ರಾಯಪಟ್ಟರೆ, 11ಎ ನಿಯಮದ (3)ನೇ ಉಪನಿಯಮದ ಉಪಬಂಧಗಳಿಗೆ ಒಳಪಟ್ಟು, ಎರವಲು ಕೊಟ್ಟ ಪ್ರಾಧಿಕಾರದೊಡನೆ ಸಮಾಲೋಚನೆ ನಡೆಸಿದ ತರುವಾಯ ಪ್ರಕರಣದ ಬಗ್ಗೆ ತಾನು ಅವಶ್ಯವೆಂದು ಭಾವಿಸಬಹುದಾದಂಥ ಆದೇಶಗಳನ್ನು ನೀಡಬಹುದು.

ಪರಂತು, ಎರವಲು ಪಡೆದ ಪ್ರಾಧಿಕಾರದ ಮತ್ತು ಎರವಲು ಕೊಟ್ಟ ಪ್ರಾಧಿಕಾರದ ನಡುವೆ ಭಿನ್ನಾಭಿಪ್ರಾಯ ಬಂದ ಸಂದರ್ಭದಲ್ಲಿ, ಸರ್ಕಾರಿ ನೌಕರನ ಸೇವೆಗಳನ್ನು ಎರವಲು ಕೊಟ್ಟ ಪ್ರಾಧಿಕಾರದ ಸೇವೆಗೆ ಪುನಃ ಒಪ್ಪಿಸತಕ್ಕದ್ದು.

(ii) ಶಿಸ್ತು ಪ್ರಾಧಿಕಾರಿಯು 8ನೇ ನಿಯಮದ (v) ರಿಂದ (viii)ರ ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ಅವನಿಗೆ ವಿಧಿಸಬೇಕೆಂದು ಅಭಿಪ್ರಾಯಪಟ್ಟರೆ, ಎರವಲು ಕೊಟ್ಟ ಪ್ರಾಧಿಕಾರಕ್ಕೆ ಅವನ ಸೇವೆಗಳನ್ನು ಪುನಃ ಒಪ್ಪಿಸತಕ್ಕದ್ದು ಮತ್ತು ಆ ಪ್ರಾಧಿಕಾರವು ತಾನು ಅವಶ್ಯವೆಂದು ಭಾವಿಸಬಹುದಾದಂಥ ಕ್ರಮ ಕೈಗೊಳ್ಳುವುದಕ್ಕಾಗಿ ವಿಚಾರಣೆಯ ವ್ಯವಹರಣೆಗಳಿಗಾಗಿ ಅದನ್ನು ರವಾನಿಸತಕ್ಕದ್ದು.

### [1][16ಎ. ಮರು ನೇಮಕವಾದ ಅಧಿಕಾರಿಗಳಿಗೆ ಸಂಬಂಧಿಸಿದ ಉಪಬಂಧ:-

ಯಾರ ರಾಜೀನಾಮೆಯ, ಯಾರ ಹುದ್ದೆಯನ್ನು ರದ್ದುಗೊಳಿಸಿದ, ಯಾರ ನೇಮಕವನ್ನು ಕೊನೆಗೊಳಿಸಿದ ಅಥವಾ ಇತರ ಯಾವುದೇ ಕಾರಣದಿಂದಾಗಿ ಸರ್ಕಾರಿ ನೌಕರನಾಗಿರುವುದು ನಿಂತುಹೋಗಿರುವುದೋ ಆ ಯಾರೇ ವ್ಯಕ್ತಿಯನ್ನು ಸರ್ಕಾರಿ ನೌಕರನೆಂದು ಮರುನೇಮಕ ಮಾಡಿಕೊಂಡಿರುವಲ್ಲಿ, ಸರ್ಕಾರದ ಅಧೀನದಲ್ಲಿ ಅವನ ಸೇವೆಯ ಯಾವುದೇ ಕಾಲಾವಧಿಯಲ್ಲಿ ಅವನ ಯಾವುದೇ ಕೃತ್ಯಕ್ಕೆ ಅಥವಾ ನಡತೆಗೆ ಸಂಬಂಧಿಸಿದಂತೆ ಅವನ ಹೊಸ ಹುದ್ದೆಯಲ್ಲಿ ಅವನ ವಿರುದ್ಧ ಶಿಸ್ತು ವ್ಯವಹರಣೆಗಳನ್ನು ಕೊಳ್ಳಬಹುದು.][1]

---

1. ಅಧಿಸೂಚನೆ ಸಂಖ್ಯೆ ಜಿಎಡಿ 6 ಸಿಎಆರ್ 58, ದಿನಾಂಕ:1.7.1959ರ ಮೂಲಕ ಸೇರಿಸಲಾಗಿದೆ.

## ಭಾಗ-V
## ಅಪೀಲುಗಳು

### [1][17.ಯಾವ ಆದೇಶಗಳ ವಿರುದ್ಧ ಅಪೀಲಿಗೆ ಅವಕಾಶವಿಲ್ಲವೋ ಆ ಆದೇಶಗಳು:-

ಈ ಭಾಗದಲ್ಲಿ ಏನೇ ಒಳಗೊಂಡಿದ್ದರೂ;-

(i) ರಾಜ್ಯಪಾಲರು ಮಾಡಿದ ಯಾವುದೇ ಆದೇಶದ:

(ii) ಅಮಾನತ್ತಿನ ಆದೇಶವನ್ನು ಹೊರತುಪಡಿಸಿ, ಶಿಸ್ತು ವ್ಯವಹರಣೆಯ ಅಂತಿಮ ವಿಲೆಗಾಗಿ ಇರುವ ವಾದಕಾಲೀನ ಸ್ವರೂಪದ ಅಥವಾ ಸಹಾಯಕ ಕ್ರಮದ ಸ್ವರೂಪದ ಯಾವುದೇ ಆದೇಶದ:

(iii) 11ನೇ ನಿಯಮದ ಮೇರೆಗೆ ವಿಚಾರಣೆ ನಡೆಯುತ್ತಿರುವಾಗ ವಿಚಾರಣಾ ಪ್ರಾಧಿಕಾರಿಯು ಹೊರಡಿಸಿದ ಯಾವುದೇ ಆದೇಶದ

-ವಿರುದ್ಧ ಅಪೀಲು ಮಾಡಿಕೊಳ್ಳಲು ಅವಕಾಶವಿರತಕ್ಕದ್ದಲ್ಲ.][1]

........................................................................................................................................

1. ಅಧಿಸೂಚನೆ ಸಂಖ್ಯೆ ಜಿಎಡಿ 28 ಎಸ್‌ಎಸ್‌ಆರ್ 69, ದಿನಾಂಕ: 12.12.73 ಕೆಜಿಡಿ 24.1.74ರ ಮೂಲಕ ಪ್ರತಿಯೋಜಿಸಲಾಗಿದೆ.

**18. ದಂಡನೆಗಳನ್ನು ವಿಧಿಸುವ ಆದೇಶಗಳ ವಿರುದ್ಧ ಅಪೀಲುಗಳು:-**

(1) 5ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ಸೇವೆಗಳಲ್ಲಿ ಯಾವುದೇ ಸೇವೆಯ ಸದಸ್ಯನಾಗಿರುವ ಪ್ರತಿಯೊಬ್ಬ ವ್ಯಕ್ತಿಯು;-

(ಎ) [2][ಶಿಸ್ತು ಪ್ರಾಧಿಕಾರಿಯಾಗಲಿ ಅಥವಾ ಅಪೀಲು ಅಥವಾ ಪುನರಾವಲೋಕನ ಪ್ರಾಧಿಕಾರಿಯಾಗಲಿ][2] 8ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸಿ:

(ಬಿ) ನಿಗದಿತ ಅಥವಾ ಅನಿರ್ದಿಷ್ಟ ಅವಧಿಗಾಗಿ ಅವನ ಕರಾರಿನ ನಿಬಂಧನೆಗಳಿಗನುಸಾರವಾಗಿ ಹುದ್ದೆಯನ್ನು ರದ್ದುಗೊಳಿಸಿದ್ದ ಹೊರತು, ಅವನನ್ನು ಸೇವೆಯಿಂದ ಬಿಡುಗಡೆ ಮಾಡಿ;

ಪರಂತು, ಅವನ ಸೇವೆಯನ್ನು ಕೊನೆಗೊಳಿಸಿದ ಕಾಲದಲ್ಲಿ ಎರಡು ಬಗೆಯ ಕರಾರುಗಳ ಪೈಕಿ ಯಾವುದೊಂದರ ಮೇರೆಗೆ ಅವನು ಐದು ವರ್ಷಗಳಿಗೆ ಮೀರಿದ ನಿರಂತರ ಸೇವೆ ಸಲ್ಲಿಸಿರಬೇಕು;

(ಸಿ) ನಿವೃತ್ತಿ ವೇತನಗಳಿಗೆ ಸಂಬಂಧಿಸಿದ ನಿಯಮಗಳ ಮೇರೆಗೆ ಅವನಿಗೆ ಅನ್ವಯಿಸುವ ನಿವೃತ್ತಿ ವೇತನವನ್ನು ಕಡಿಮೆ ಮಾಡಿ ಅಥವಾ ತಡೆಹಿಡಿದು; ಅಥವಾ

(ಡಿ) 10ನೇ ನಿಯಮದ ಮೇರೆಗೆ ಅವನನ್ನು ಅಮಾನತ್ತಿನಲ್ಲಿರಿಸಿ

- ಪ್ರಾಧಿಕಾರಿಯು ಹೊರಡಿಸಿದ ಆದೇಶದ ವಿರುದ್ಧ, ಇಲ್ಲಿ ಇನ್ನು ಮುಂದೆ ಉಪಬಂಧಿಸಿರುವಷ್ಟರ ಮಟ್ಟಿಗೆ ಆ ಪ್ರಾಧಿಕಾರಿಗಳಿಗೆ ಅಪೀಲು ಮಾಡಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದೇ ಹೊರತು ಅನ್ಯಥಾ ಅಲ್ಲ.

(2) ರಾಜ್ಯ ಸಿವಿಲ್ ಸೇವೆಯ ಎ ಮತ್ತು ಬಿ ಸಮೂಹದ ಸದಸ್ಯನು;-

(ಎ) ನೇಮಕ ಪ್ರಾಧಿಕಾರಿಗೆ ಅಧೀನನಾದ ಪ್ರಾಧಿಕಾರಿಯು ಮಾಡಿದ ಆದೇಶದ ವಿರುದ್ಧ ನೇಮಕ ಪ್ರಾಧಿಕಾರಿಗೆ;

[7][XXX][7]

(3) II ಮತು IIIನೇ ಅನುಸೂಚಿಗಳಲ್ಲಿನ 1ನೇ ಅಂಕಣದಲ್ಲಿ ಸೇರಿಸಲಾದ ಸೇವೆಯ ಸದಸ್ಯನು ಅಥವಾ ಹುದ್ದೆಯ ಧಾರಕನು 9ನೇ ನಿಯಮದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮಾಡಿದ ಆದೇಶದ ವಿರುದ್ಧ ಸದರಿ ಅನುಸೂಚಿಗಳ ಅಂಕಣ 5ರಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರಿಗಳಿಗೆ [4][ಮತ್ತು ಅಪೀಲು ಪ್ರಾಧಿಕಾರಿಯು ಮಾಡಿದ ಆದೇಶಗಳ ವಿರುದ್ಧ, ಅಪೀಲು ಪ್ರಾಧಿಕಾರಿಯು ಯಾರಿಗೆ ನಿಕಟ ಅಧೀನ ಅಧಿಕಾರಿಯಾಗಿರುವನೋ ಆ ಪ್ರಾಧಿಕಾರಿಗೆ ಅಪೀಲು ಸಲ್ಲಿಸಬಹುದು:][4]

ಪರಂತು, II ಮತ್ತು IIIನೇ ಅನುಸೂಚಿಗಳ ಅಂಕಣ 1ರಲ್ಲಿ ಒಳಗೊಳ್ಳದಿರುವ ಹುದ್ದೆಗಳ ಸಂದರ್ಭದಲ್ಲಿ, ಅಂಥ ಹುದ್ದೆಗಳ ಧಾರಕನು ಅಥವಾ ಧಾರಕರು 9ನೇ ನಿಯಮದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮಾಡಿದ ಆದೇಶಗಳ ವಿರುದ್ಧ, ದಂಡನೆಯನ್ನು ವಿಧಿಸುವ ಪ್ರಾಧಿಕಾರಿಯ ನಿಕಟ ವರಿಷ್ಟ ಪ್ರಾಧಿಕಾರಿಗೆ ಅಪೀಲು ಸಲ್ಲಿಸಬಹುದು.

[5][ಮತ್ತೂ ಪರಂತು, ಯಾವ ಸರ್ಕಾರಿ ನೌಕರನಿಗೆ 8ನೇ ನಿಯಮದ (i) ರಿಂದ (ivಎ) ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸಿರುವ

ಆದೇಶವನ್ನು (v) ರಿಂದ (viii)ರ ವರೆಗಿನ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸುವುದಕ್ಕೆ ಅಧಿಕಾರ ಹೊಂದಿದ ನೇಮಕ ಪ್ರಾಧಿಕಾರಿಯು ಅಥವಾ ಇತರ ಯಾರೇ ಶಿಸ್ತು ಪ್ರಾಧಿಕಾರಿಯು ಮಾಡಿರುವರೋ ಆ ಸರ್ಕಾರಿ ನೌಕರನು (v) ರಿಂದ (viii)ರ ವರೆಗಿನ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ಅವನಿಗೆ ವಿಧಿಸಿರುವ ಆದೇಶದ ವಿರುದ್ಧ ಯಾವ ಪ್ರಾಧಿಕಾರಿಗೆ ಅಪೀಲು ಸಲ್ಲಿಸಲು ಆತನು ಹಕ್ಕುಳ್ಳವನಾಗಿರುವನೋ ಅದೇ ಪ್ರಾಧಿಕಾರಿಗೆ ಅಪೀಲು ಸಲ್ಲಿಸಬಹುದು.][5]

[1][ಮತ್ತೂ ಪರಂತು, 9ನೇ ನಿಯಮದ (2)ನೇ ಉಪನಿಯಮದ (ಡಿ) ಖಂಡದ ಪರಂತುಕದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಹೊರಡಿಸಿದ ಆದೇಶದ ವಿರುದ್ಧ, ರಾಜ್ಯ ಸಿವಿಲ್ ಸೇವೆಯ ಸಮೂಹ 'ಡಿ'ಗೆ ಸೇರಿದ ಸರ್ಕಾರಿ ನೌಕರನು, ದಂಡನೆಯನ್ನು ವಿಧಿಸಿದ ಪ್ರಾಧಿಕಾರಿಯ ನಿಕಟ ವರಿಷ್ಠ ಪ್ರಾಧಿಕಾರಿಗೆ ಅಪೀಲು ಸಲ್ಲಿಸಬಹುದು][1]

[6&7][xxx][6&7]

**ಸೂಚನೆ:** ಈ ನಿಯಮದ ಉದ್ದೇಶಗಳಿಗಾಗಿ ಸೂಕ್ತ ಪ್ರಾಧಿಕಾರಿ ಯಾರು ಎಂಬ ಬಗ್ಗೆ ಸಂಶಯ ಬಂದರೆ, ಆ ವಿಷಯವನ್ನು ಸರ್ಕಾರಕ್ಕೆ ಉಲ್ಲೇಖಿಸತಕ್ಕದ್ದು ಮತ್ತು ಆ ಬಗ್ಗೆ ಸರ್ಕಾರದ ನಿರ್ಣಯವೇ ಅಂತಿಮವಾಗಿರತಕ್ಕದ್ದು.

(4) ರಾಜ್ಯ ಸಿವಿಲ್ ಸೇವೆಯ ಸಿ ಸಮೂಹದ ಅಥವಾ ರಾಜ್ಯ ಸಿವಿಲ್ ಸೇವೆಯ ಡಿ ಸಮೂಹದ ಸದಸ್ಯನು (1)ನೇ ಉಪನಿಯಮದ (ಬಿ), (ಸಿ) ಮತ್ತು (ಡಿ) ಖಂಡಗಳಲ್ಲಿ ಉಲ್ಲೇಖಿಸಿರುವ ಆದೇಶದ ವಿರುದ್ಧ ಆ ಆದೇಶವು ವಜಾ ಆದೇಶವಾಗಿದ್ದಿದ್ದರೆ ಯಾವ ಪ್ರಾಧಿಕಾರಿಗೆ ಈ ನಿಯಮಗಳ ಮೇರೆಗೆ ಅಪೀಲು ಮಾಡಲು ಹಕ್ಕುಳ್ಳವನಾಗಿರುತ್ತಿದ್ದನೋ ಆ ಪ್ರಾಧಿಕಾರಿಗೆ ಅಪೀಲು ಸಲ್ಲಿಸಬಹುದು.

[3][(5)(1)ರಿಂದ (4)ರ ವರೆಗಿನ ಉಪನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ;-

(ಎ) ಯಾವ ಆದೇಶದ ವಿರುದ್ಧ ಅಪೀಲು ಸಲ್ಲಿಸಲಾಗಿದೆಯೋ ಆ ಆದೇಶವನ್ನು ಮಾಡಿದ ವ್ಯಕ್ತಿಯು ಆ ತರುವಾಯ, ಅವನ ನೇಮಕದ ಕಾರಣದಿಂದ ಅಥವಾ ಅನ್ಯಥಾ, ಅಂಥ ಆದೇಶಕ್ಕೆ ಸಂಬಂಧಿಸಿದಂತೆ ಅಪೀಲು ಪ್ರಾಧಿಕಾರಿಯಾದರೆ, ಅಂಥ ಆದೇಶದ ವಿರುದ್ಧ ಅಪೀಲನ್ನು ಅಂಥ ವ್ಯಕ್ತಿಯು ಯಾವ ಪ್ರಾಧಿಕಾರಿಗೆ ನಿಕಟ ಅಧೀನನಾಗಿರುವನೋ ಆ ಪ್ರಾಧಿಕಾರಿಗೆ ಸಲ್ಲಿಸತಕ್ಕದ್ದು.

(ಬಿ) 13ನೇ ನಿಯಮದ ಮೇರೆಗೆ ನಡೆಸಿದ ಒಂದೇ ವ್ಯವಹರಣೆಯಲ್ಲಿನ ಆದೇಶ ವಿರುದ್ಧ ಅಪೀಲನ್ನು ಆ ವ್ಯವಹರಣೆಯ ಉದ್ದೇಶಕ್ಕಾಗಿ ಶಿಸ್ತು ಪ್ರಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಪ್ರಾಧಿಕಾರಿಯು ಯಾವ ಪ್ರಾಧಿಕಾರಿಗೆ ನಿಕಟ ಅಧೀನನಾಗಿರುವನೋ ಆ ಪ್ರಾಧಿಕಾರಿಗೆ ಸಲ್ಲಿಸತಕ್ಕದ್ದು.][3]

**ವಿವರಣೆ:** "ರಾಜ್ಯ ಸಿವಿಲ್ ಸೇವೆಯ ಸದಸ್ಯ" ಎಂಬ ಪದಾವಳಿಯು ಆ ಸೇವೆಯ ಸದಸ್ಯನಾಗಿರುವುದು ನಿಂತು ಹೋದ ವ್ಯಕ್ತಿಯನ್ನು ಒಳಗೊಳ್ಳುತ್ತದೆ.

..........................................................................................................................

1. ಅಧಿಸೂಚನೆ ಸಂಖ್ಯೆ: ಜಿಎಡಿ 28 ಓಎಸ್ಆರ್ 59, ದಿನಾಂಕ; 07.02.1962ರ ಸೇರಿಸಲಾಗಿದೆ.
2. ಅಧಿಸೂಚನೆ ಸಂಖ್ಯೆ ಜಿಎಡಿ 28 ಎಸ್ಎಸ್ಆರ್ 69, ದಿನಾಂಕ: 12.12.73ರ ಮೂಲಕ ಸೇರಿಸಲಾಗಿದೆ.(ಕೆಜಿಡಿ 24.1.74)
3. ಅಧಿಸೂಚನೆ ಸಂಖ್ಯೆ ಜಿಎಡಿ 28 ಎಸ್ಎಸ್ಆರ್ 69, ದಿನಾಂಕ: 12.12.73ರ ಮೂಲಕ ಪ್ರತಿಯೋಜಿಸಲಾಗಿದೆ.
4. ಅಧಿಸೂಚನೆ ಸಂಖ್ಯೆ ಡಿಪಿಎಆರ್ 11 ಎಸ್‌ಡಿಇ 83, ದಿನಾಂಕ; 23.2.84ರ ಮೂಲಕ ಸೇರಿಸಲಾಗಿದೆ( ಕೆಜಿಡಿ 15.03.84)
5. ಅಧಿಸೂಚನೆ ಸಂಖ್ಯೆ ಡಿಪಿಎಆರ್ 2 ಎಸ್‌ಡಿಇ 85, ದಿನಾಂಕ: 30.8.85ರ ಮೂಲಕ ಸೇರಿಸಲಾಗಿದೆ
6. ಅಧಿಸೂಚನೆ ಸಂಖ್ಯೆ: ಡಿಪಿಎಆರ್ 33 ಎಸ್‌ಡಿಇ 88, ದಿನಾಂಕ; 10.02.89ರ ಮೂಲಕ ಸೇರಿಸಲಾಗಿದೆ.
7. ಅಧಿಸೂಚನೆ ಸಂಖ್ಯೆ ಜಿಎಡಿ 22 ಎಸ್‌ಡಿಇ 2010, ದಿನಾಂಕ: 31.01.2011ರ ಮೂಲಕ ಬಿಟ್ಟುಬಿಡಲಾಗಿದೆ.

**19. ಇತರೆ ಆದೇಶದ ವಿರುದ್ಧ ಅಪೀಲು:-**

(1) 5ನೇ ನಿಯಮದಲ್ಲಿ ನಮೂದಿಸಿರುವ ಯಾವುವೇ ಸೇವೆಗಳ ಪ್ರತಿಯೊಬ್ಬ ಸದಸ್ಯನು, ಅಧೀನ ಪ್ರಾಧಿಕಾರಿಯು ಹೊರಡಿಸಿದ ಯಾವ ಆದೇಶವು;-

(ಎ) ಯಾವುದೇ ಆದೇಶದಿಂದ, ನಿಯಮಗಳಿಂದ ಅಥವಾ ಯಾವುದೇ ಕರಾರಿನಿಂದ ವಿನಿಯಮಿಸಿದ ಅವನ ವೇತನವನ್ನು, ಭತ್ಯೆಗಳನ್ನು, ನಿವೃತ್ತಿ ವೇತನವನ್ನು ಅಥವಾ ಇತರ ಸೇವಾ ಷರತ್ತುಗಳನ್ನು ಅವನಿಗೆ ಅನಾನುಕೂಲವಾಗುವಂತೆ ನಿರಾಕರಿಸಿರುವುದೋ ಅಥವಾ ಬದಲಾಯಿಸಿರುವುದೋ;
ಆ ಯಾವುದೇ ಆದೇಶದ ವಿರುದ್ಧ ಸರ್ಕಾರಕ್ಕೆ ಅಪೀಲನ್ನು ಸಲ್ಲಿಸಲು ಹಕ್ಕುಳ್ಳವನಾಗಿರತಕ್ಕದ್ದು; ಅಥವಾ
(2) ಯಾವ ಆದೇಶವು:-
(ಎ) ಸರ್ಕಾರಿ ನೌಕರನು ದಕ್ಷತಾ ರೇಖೆಯನ್ನು ದಾಟಲು ಸಮರ್ಥನಲ್ಲವೆಂಬ ಕಾರಣಕ್ಕಾಗಿ, ಅವನನ್ನು ಕಾಲಿಕ ವೇತನ ಶ್ರೇಣಿಯಲ್ಲಿ ದಕ್ಷತಾ ರೇಖೆಯಲ್ಲಿ ತಡೆದಿರುವ;

(ಬಿ) ಮೇಲಿನ ಸೇವೆಯಲ್ಲಿ, ಹುದ್ದೆಯ ಶ್ರೇಣಿಯಲ್ಲಿ ಅಥವಾ ಹುದ್ದೆಯಲ್ಲಿ ಸ್ಥಾನಪನ್ನನಾಗಿರುವ ಸರ್ಕಾರಿ ನೌಕರನನ್ನು ದಂಡನೆಯಂತೆ ಅಲ್ಲದೆ ಅನ್ಯಥಾ ಕೆಳಗಿನ ಸೇವೆಗೆ, ಹುದ್ದೆಯ ಶ್ರೇಣಿಗೆ ಅಥವಾ ಹುದ್ದೆಗೆ ಹಿಂದಿರುಗಿಸಿರುವ; ಮತ್ತು
[1][(ಸಿ) ನಿಯಮಗಳ ಮೇರೆಗೆ ಅವನಿಗೆ ಅನುಮತಿಸಲಾಗುವ ನಿವೃತ್ತಿ ವೇತನವನ್ನು ಕಡಿಮೆ ಮಾಡಿರುವ ಅಥವಾ ತಡೆಹಿಡಿದಿರುವ ಅಥವಾ ಗರಿಷ್ಠ ನಿವೃತ್ತಿ ವೇತನವನ್ನು ನಿರಾಕರಿಸಿರುವ;

(ಸಿಎ) ಅವನ ಅಮಾನತ್ತಿನ ಅವಧಿಗೆ ಅಥವಾ ಯಾವ ಅವಧಿಯಲ್ಲಿ ಅವನು ಅಮಾನತ್ತಿನಲ್ಲಿ ಇರುವುದಾಗಿ ಭಾವಿಸಲಾಗಿದೆಯೋ ಆ ಅವಧಿಗೆ ಅಥವಾ ಅದರ ಯಾವುದೇ ಭಾಗಕ್ಕೆ ಅವನಿಗೆ ಸಂದಾಯ ಮಾಡಬೇಕಾದ ಜೀವನಾಧಾರ ಮತ್ತು ಇತರ ಭತ್ಯೆಗಳನ್ನು ನಿರ್ಧರಿಸಿರುವ;

(ಸಿಬಿ) ಅವನ ವೇತನ ಮತ್ತು ಭತ್ಯೆಗಳನ್ನು:-

(i) ಅಮಾನತ್ತಿನ ಅವಧಿಗೆ ಸಂಬಂಧಿಸಿದಂತೆ; ಅಥವಾ
(ii) ಅವನನ್ನು ಸೇವೆಯಿಂದ ವಜಾ ಮಾಡಿದ, ತೆಗೆದು ಹಾಕಿದ ಅಥವಾ ಕಡ್ಡಾಯವಾಗಿ ನಿವೃತ್ತಿಗೊಳಿಸಿದ ದಿನಾಂಕದಿಂದ ಅಥವಾ ಅವನ್ನು ಕೆಳಗಿನ ಸೇವೆಗೆ, ಕೆಳಗಿನ ಹುದ್ದೆಯ ಶ್ರೇಣಿಗೆ, ಕೆಳಗಿನ ಹುದ್ದೆಗೆ, ಕೆಳಗಿನ ಕಾಲಿಕ ವೇತನ ಶ್ರೇಣಿಗೆ ಅಥವಾ ಕಾಲಿಕವೇತನ ಶ್ರೇಣಿಯಲ್ಲಿ ಕೆಳಗಿನ ಹಂತಕ್ಕೆ ಇಳಿಸಿದ ದಿನಾಂಕದಿಂದ ಅವನ ಸೇವೆಗೆ, ಹುದ್ದೆಯ ಶ್ರೇಣಿಗೆ ಅಥವಾ ಹುದ್ದೆಗೆ ಅವರನ್ನು ಪುನಃ ನೇಮಕ ಮಾಡಿದ ಅಥವಾ ಪೂರ್ವಸ್ಥಿತಿಗೆ ತಂದ ದಿನಾಂಕಕ್ಕೆ ಸಂಬಂಧಿಸಿದಂತೆ

-ನಿರ್ಧರಿಸಿರುವ; ಅಥವಾ

(ಸಿಸಿ) ಅವನ ಅಮಾನತ್ತಿನ ದಿನಾಂಕದಿಂದ ಅಥವಾ ಅವನನ್ನು ಸೇವೆಯಿಂದ ವಜಾ ಮಾಡಿದ, ತೆಗೆದುಹಾಕಿದ, ಕಡ್ಡಾಯವಾಗಿ ನಿವೃತ್ತಿಗೊಳಿಸಿದ ಅಥವಾ ಕೆಳಗಿನ ಸೇವೆಗೆ, ಕೆಳಗಿನ ಹುದ್ದೆಯ ಶ್ರೇಣಿಗೆ, ಕೆಳಗಿನ ಹುದ್ದೆಗೆ, ಕೆಳಗಿನ ಕಾಲಿಕ ವೇತನ ಶ್ರೇಣಿಗೆ ಅಥವಾ ಕೆಳಗಿನ ವೇತನಕ್ಕೆ ಅಥವಾ ಕಾಲಿಕ ವೇತನ ಶ್ರೇಣಿಯಲ್ಲಿ ಕೆಳಗಿನ ಹಂತಕ್ಕೆ ಇಳಿಸಿದ ದಿನಾಂಕದಿಂದ ಅವನನ್ನು ಅವನ ಸೇವೆಗೆ, ಹುದ್ದೆಯ ಶ್ರೇಣಿಗೆ ಅಥವಾ ಹುದ್ದೆಗೆ ಪುನಃ ನೇಮಿಸಿದ ಅಥವಾ ಪೂರ್ವಸ್ಥಿತಿಗೆ ತಂದ ದಿನಾಂಕದವರೆಗೆ ಅವಧಿಯನ್ನು ಯಾವುದೇ ಉದ್ದೇಶಕ್ಕಾಗಿ ಕರ್ತವ್ಯದ ಮೇಲಿದ್ದ ಅವಧಿಯೆಂದು ಭಾವಿಸಬೇಕೇ ಅಥವಾ ಬೇಡವೇ ಎಂಬುದನ್ನು ನಿರ್ಧರಿಸಿರುವ

-ಆ ಯಾವುದೇ ಆದೇಶದ ವಿರುದ್ಧ;-

(i) ಯಾವ ಸರ್ಕಾರಿ ನೌಕರನಿಗೆ ಸಂಬಂಧಿಸಿದಂತೆ ರಾಜ್ಯಪಾಲರು ಮಾತ್ರವೇ ಸೇವೆಯಿಂದ ವಜಾ ಮಾಡುವ ದಂಡನೆಯನ್ನು ವಿಧಿಸಬಹುದೋ, ಆ ಸರ್ಕಾರಿ ನೌಕರನಿಗೆ ಸಂಬಂಧಿಸಿದಂತೆ ಮಾಡಿದ ಆದೇಶದ ಸಂದರ್ಭದಲ್ಲಿ, ರಾಜ್ಯಪಾಲರಿಗೆ, ಮತ್ತು
(ii) ಯಾರೇ ಇತರ ಸರ್ಕಾರಿ ನೌಕರನಿಗೆ ಸಂಬಂಧಿಸಿದಂತೆ ಸೇವೆಯಿಂದ ವಜಾ ಮಾಡಿದ ಆದೇಶದ ಸಂದರ್ಭದಲ್ಲಿ, ಆ ನೌಕರನನ್ನು ಸೇವೆಯಿಂದ ವಜಾ ಮಾಡಿದ

ದಂಡನೆಯನ್ನು ವಿಧಿಸಿರುವ ಆದೇಶದ ವಿರುದ್ಧ ಯಾವ ಪ್ರಾಧಿಕಾರಿಗೆ ಅಪೀಲು ಮಾಡಿಕೊಳ್ಳಲು ಅವಕಾಶವಿರುವುದೋ ಆ ಪ್ರಾಧಿಕಾರಿಗೆ
-ಅಪೀಲು ಮಾಡಿಕೊಳ್ಳಲು ಅವಕಾಶವಿರತಕ್ಕದ್ದು.][1]

ವಿವರಣೆ;- ಈ ನಿಯಮದಲ್ಲಿ

(i) 'ಸರ್ಕಾರಿ ನೌಕರ" ಪದಾವಳಿಯು ಸರ್ಕಾರಿ ಸೇವೆಯಲ್ಲಿ ಇರುವುದು ನಿಂತುಹೋದ ವ್ಯಕ್ತಿಯನ್ನು ಒಳಗೊಳ್ಳುತ್ತದೆ.

(ii) 'ನಿವೃತ್ತಿ ವೇತನ' ಪದಾವಳಿಯು ಹೆಚ್ಚುವರಿ ನಿವೃತ್ತಿ ವೇತನ, ಉಪದಾನ ಮತ್ತು ಯಾವುದೇ ಇತರ ನಿವೃತ್ತಿ ಪ್ರಯೋಜನವನ್ನು ಒಳಗೊಳ್ಳುತ್ತದೆ.

(3) ಈ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಆಯ್ಕೆ ಹುದ್ದೆಗೆ ಆಯ್ಕೆ ಮಾಡದಿರುವುದಕ್ಕಾಗಿ ಯಾವುದೇ ಅಪೀಲಿಗೆ ಅವಕಾಶವಿರತಕ್ಕದ್ದಲ್ಲ.

............................................................................................................................................

1. ಅಧಿಸೂಚನೆ ಸಂಖ್ಯೆ: ಜಿಎಡಿ 28 ಎಸ್‌ಎಸ್‌ಆರ್ 69, ದಿನಾಂಕ: 12.12.73ರ ಮೂಲಕ ಪ್ರತಿಯೋಜಿಸಲಾಗಿದೆ. (ಕೆಜಿಡಿ 24.1.74)

**20. ಅಪೀಲುಗಳಿಗೆ ಕಾಲ ಪರಿಮಿತಿ:-**

ಈ ಭಾಗದ ಮೇರೆಗೆ ಯಾವುದೇ ಅಪೀಲನ್ನು, ಯಾವ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗುತ್ತಿದೆಯೋ ಆ ಆದೇಶದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಆ ಅಪೀಲನ್ನು ಸಲ್ಲಿಸಿದ್ದ ಹೊರತು, ಪುರಸ್ಕರಿಸತಕ್ಕದ್ದಲ್ಲ;

ಪರಂತು, ಅಪೀಲನ್ನು ಸಕಾಲದಲ್ಲಿ ಸಲ್ಲಿಸದಿರುವುದಕ್ಕೆ ಅಪೀಲುದಾರನಿಗೆ ಸಾಕಷ್ಟು ಕಾರಣಗಳಿದ್ದುವೆಂದು ಅಪೀಲು ಪ್ರಾಧಿಕಾರಿಗೆ ಮನದಟ್ಟಾದರೆ, ಸದರಿ ಅವಧಿಯು ಮುಗಿದ ಮೇಲೂ ಅವರು ಅಪೀಲನ್ನು ಪುರಸ್ಕರಿಸಬಹುದು.

**21. ಅಪೀಲಿನ ನಮೂನೆ ಮತ್ತು ಒಳಾಂಶಗಳು:-**

(1) ಅಪೀಲನ್ನು ಸಲ್ಲಿಸುವ ಪ್ರತಿಯೊಬ್ಬ ವ್ಯಕ್ತಿಯು ಅದನ್ನು ಪ್ರತ್ಯೇಕವಾಗಿ ಹಾಗೂ ತನ್ನ ಹೆಸರಿನಲ್ಲೇ ಸಲ್ಲಿಸತಕ್ಕದ್ದು.

(2) ಈ ನಿಯಮಗಳ ಮೇರೆಗೆ ಸಲ್ಲಿಸಿದ ಪ್ರತಿಯೊಂದು ಅಪೀಲಿಗೆ, ಯಾವ ಆದೇಶದ ವಿರುದ್ಧ ಅಪೀಲು ಮಾಡಲಾಗಿದೆಯೋ ಆ ಆದೇಶದ ಪ್ರತಿಯನ್ನು ಲಗತ್ತಿಸತಕ್ಕದ್ದು ಮತ್ತು ಅದು ಅಪೀಲುದಾರನು ಆಧರಿಸಿರುವ ಎಲ್ಲ ಮುಖ್ಯ ವಿವರಣೆಗಳನ್ನು ಮತ್ತು ವಾದಗಳನ್ನು ಒಳಗೊಂಡಿರತಕ್ಕದ್ದು ಮತ್ತು ಅದು ಯಾವುದೇ ರೀತಿಯ ಅಗೌರವದ ಅಥವಾ ಅನುಚಿತ ಭಾಷೆಯಿಂದ ಕೂಡಿರತಕ್ಕದ್ದಲ್ಲ, ಮತ್ತು ಅದು ಸ್ವಯಂ ಪರಿಪೂರ್ಣವಾಗಿರತಕ್ಕದ್ದು.

**22. ಅಪೀಲುಗಳನ್ನು ಸಲ್ಲಿಸುವುದು:-**

ಪ್ರತಿಯೊಂದು ಅಪೀಲನ್ನು, ಯಾವ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗುತ್ತಿದೆಯೋ ಆ ಆದೇಶವನ್ನು ಮಾಡಿದ ಪ್ರಾಧಿಕಾರಿಗೆ ಸಲ್ಲಿಸತಕ್ಕದ್ದು;

ಪರಂತು, ಅಂಥ ಪ್ರಾಧಿಕಾರಿಯು ಅಪೀಲುದಾರನು ಯಾವ ಕಛೇರಿಯಲ್ಲಿ ಸೇವೆ ಸಲ್ಲಿಸುತ್ತಿರುವನೋ ಆ ಕಛೇರಿಯ ಮುಖ್ಯಸ್ಥನಾಗಿರದಿದ್ದರೆ ಅಥವಾ, ಅಪೀಲುದಾರನು ಸೇವೆಯಲ್ಲಿ ಇಲ್ಲದಿದ್ದರೆ, ಕೊನೆಯಲ್ಲಿ ಅವನು ಯಾವ ಕಛೇರಿಯಲ್ಲಿ ಸೇವೆ ಸಲ್ಲಿಸುತ್ತಿದ್ದನೋ ಆ ಕಛೇರಿಯ ಮುಖ್ಯಸ್ಥನಿಗೆ ಅಥವಾ ಆ ಕಛೇರಿಯ ಮುಖ್ಯಸ್ಥನಿಗೆ ಅವನು ಅಧೀನನಾಗಿರದಿದ್ದರೆ, ಅಪೀಲನ್ನು ಆ ಕಛೇರಿಯ ಮುಖ್ಯಸ್ಥರಿಗೆ ಸಲ್ಲಿಸತಕ್ಕದ್ದು ಮತ್ತು ಅವರು ಅದನ್ನು ಆ ಕೂಡಲೇ ಸದರಿ ಪ್ರಾಧಿಕಾರಿಗೆ ಕಳುಹಿಸತಕ್ಕದ್ದು.

ಮತ್ತೂ ಪರಂತು, ಅಪೀಲಿನ ಒಂದು ಪ್ರತಿಯನ್ನು ನೇರವಾಗಿ ಅಪೀಲು ಪ್ರಾಧಿಕಾರಿಗೆ ಸಲ್ಲಿಸಬಹುದು.

23. **ಅಪೀಲುಗಳನ್ನು ತಡೆಹಿಡಿಯುವುದು:-**

(1) ಯಾವ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ಆದೇಶವನ್ನು ಮಾಡಿದ ಪ್ರಾಧಿಕಾರಿಯು, ಆ ಅಪೀಲನ್ನು;-

(i) ಅದು, ಯಾವ ಆದೇಶದ ವಿರುದ್ಧ ಅಪೀಲು ಸಲ್ಲಿಸಲು ಅವಕಾಶವಿಲ್ಲವೋ ಆ ಆದೇಶದ ವಿರುದ್ಧ ಸಲ್ಲಿಸಿದ ಅಪೀಲಾಗಿದ್ದರೆ, ಅಥವಾ

(ii) ಅದು 21ನೇ ನಿಯಮದ ಉಪಬಂಧಗಳಲ್ಲಿ ಯಾವುದೇ ಉಪಬಂಧವನ್ನು ಪಾಲಿಸದಿದ್ದರೆ ಅಥವಾ

(iii) ಅದು 20ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅದನ್ನು ಸಲ್ಲಿಸಿರದಿದ್ದರೆ ಮತ್ತು ವಿಳಂಬಕ್ಕಾಗಿ ಸಮಂಜಸ ಕಾರಣವನ್ನು ತೋರಿಸದಿದ್ದರೆ; ಅಥವಾ

(iv) ಅದು ಈಗಾಗಲೇ ತೀರ್ಮಾನಗೊಂಡಿರುವ ಅಪೀಲಿನ ಪುನರಾರ್ವತನೆಯಾಗಿದ್ದರೆ ಮತ್ತು ಯಾವ ಪ್ರಾಧಿಕಾರಿಯಿಂದ ಅಂಥ ಅಪೀಲು ತೀರ್ಮಾನವಾಗಿತ್ತೋ ಅದೇ ಅಪೀಲು ಪ್ರಾಧಿಕಾರಿಗೆ ಸಲ್ಲಿಸಿದ್ದರೆ ಮತ್ತು ಪ್ರಕರಣವನ್ನು ಪುನಃ ಪರಿಶೀಲಿಸುವುದಕ್ಕಾಗಿ ಆಧಾರಗಳನ್ನು ನೀಡುವಂಥ ಹೊಸ ಸಂಗತಿಗಳನ್ನು ಅಥವಾ ಸಂದರ್ಭಗಳನ್ನು ಒದಗಿಸಿಲ್ಲದಿದ್ದರೆ; ಅಥವಾ

(v) ಅದು ಯಾವ ಪ್ರಾಧಿಕಾರಿಗೆ ಈ ನಿಯಮಗಳ ಮೇರೆಗೆ ಅಪೀಲುಗಳನ್ನು ಸಲ್ಲಿಸಲು ಅವಕಾಶವಿಲ್ಲವೋ ಆ ಪ್ರಾಧಿಕಾರಿ ಹೆಸರಿಗೆ ಕಳುಹಿಸಿದ್ದರೆ; ಅಥವಾ

(vi) ಅದು ರಹಸ್ಯವೆಂದು ಪರಿಗಣಿಸುವ ಮತ್ತು [1][ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ 12ನೇ ನಿಯಮವನ್ನು][1] ಉಲ್ಲಂಘಿಸಿದ ಪರಿಣಾಮವಾಗಿ ಮಾತ್ರವೇ ಅಪೀಲುದಾರನ ತಿಳಿವಳಿಕೆಗೆ ಬರುವುದು ಸಾಧ್ಯವಿರುವಂಥ ವಿಷಯವನ್ನು ಅಥವಾ ದಸ್ತಾವೇಜುಗಳನ್ನು ಒಳಗೊಂಡಿದ್ದರೆ

-ಅಂಥ ಅಪೀಲನ್ನು ತಡೆಹಿಡಿಯಬಹುದು;

ಪರಂತು, ಯಾವ ಪ್ರಕರಣದಲ್ಲಿ ಅಪೀಲನ್ನು ತಡೆಹಿಡಿಯಲಾಗಿದೆಯೋ ಆ ಪ್ರತಿಯೊಂದು ಪ್ರಕರಣದಲ್ಲಿ ಅಪೀಲುದಾರನಿಗೆ ಆ ಸಂಗತಿಯನ್ನು ಮತ್ತು ಅದಕ್ಕೆ ಕಾರಣಗಳನ್ನು ತಿಳಿಸತಕ್ಕದ್ದು:

ಮತ್ತೂ ಪರಂತು (ii)ನೇ, (v)ನೇ ಮತ್ತು (vi) ನೇ ಖಂಡದ ಮೇರೆಗೆ ತಡೆಹಿಡಿದಿದ್ದ ಅಪೀಲನ್ನು, ಅಪೀಲುದಾರನಿಗೆ ಅಪೀಲನ್ನು ತಡೆಹಿಡಿದ ಸಂಗತಿಯನ್ನು ತಿಳಿಸಿದ ದಿನಾಂಕದಿಂದ ಒಂದು ತಿಂಗಳ ಒಳಗಾಗಿ ಯಾವುದೇ ಕಾಲದಲ್ಲಿ ಪುನಃ ಸಲ್ಲಿಸಬಹುದು, ಮತ್ತು ಅದನ್ನು ಸದರಿ ಉಪಬಂಧಗಳಿಗನುಸಾರವಾದಂಥ ನಮೂನೆಯಲ್ಲಿ ಪುನಃ ಸಲ್ಲಿಸಿದ್ದರೆ, ಅದನ್ನು ತಡೆಹಿಡಿಯತಕ್ಕದ್ದಲ್ಲ.

(2) ಅಪೀಲನ್ನು ಈ ನಿಯಮದ ಮೇರೆಗೆ ತಡೆಹಿಡಿದಾಗ, ಅಪೀಲನ್ನು ತಡೆಹಿಡಿದ ಆದೇಶದ ಪ್ರತಿಯನ್ನು, ಅಪೀಲನ್ನು ಯಾರ ಹೆಸರಿಗೆ ಕಳುಹಿಸಲಾಗಿದೆಯೋ ಆ ಪ್ರಾಧಿಕಾರಿಗೆ ಒಪ್ಪಿಸತಕ್ಕದ್ದು.

(3)ಸಕ್ಷಮ ಪ್ರಾಧಿಕಾರಿಯು ಅಪೀಲನ್ನು ತಡೆಹಿಡಿಯುವುದರ ವಿರುದ್ಧ ಯಾವುದೇ ಅಪೀಲನ್ನು ಸಲ್ಲಿಸಲು ಅವಕಾಶ ಇರತಕ್ಕದ್ದಲ್ಲ.

..............................................................................................................................................

1. ಅಧಿಸೂಚನೆ ಸಂಖ್ಯೆ: ಜಿಎಡಿ 29 ಎಸ್‌ಎಸ್‌ಆರ್ 76, ದಿನಾಂಕ: 17.7.76ರ ಮೂಲಕ 29.7.76 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ, ಜಿಎಸ್‌ಆರ್211.

**24. ಅಪೀಲುಗಳ ರವಾನೆ:-**

(1) ಯಾವ ಆದೇಶದ ವಿರುದ್ಧ ಅಪೀಲು ಸಲ್ಲಿಸಲಾಗುತ್ತಿದೆಯೋ ಆ ಆದೇಶವನ್ನು ಮಾಡಿದ ಪ್ರಾಧಿಕಾರಿಯು, ಯಾವುದೇ ರೀತಿಯ ಅನಗತ್ಯ ವಿಳಂಬ ಮಾಡದೆ 23ನೇ ನಿಯಮದ ಮೇರೆಗೆ ತಡೆಹಿಡಿದಿಲ್ಲದಿರುವಂಥ ಪ್ರತಿಯೊಂದು ಅಪೀಲನ್ನು, ಅವನ ಟಿಪ್ಪಣಿಗಳ ಮತ್ತು ಸಂಬಂಧಪಟ್ಟ ದಾಖಲೆಗಳ ಸಹಿತ ಅಪೀಲು ಪ್ರಾಧಿಕಾರಿಗೆ ರವಾನಿಸತಕ್ಕದ್ದು.

(2) ಯಾವ ಪ್ರಾಧಿಕಾರಿಗೆ ಅಪೀಲು ಸಲ್ಲಿಸಲು ಅವಕಾಶ ಇರುವುದೋ ಆ ಪ್ರಾಧಿಕಾರಿಯು 23ನೇ ನಿಯಮದ ಮೇರೆಗೆ ತಡೆ ಹಿಡಿದಿರುವ ಯಾವುದೇ ಅಪೀಲನ್ನು ತನಗೆ ರವಾನಿಸುವಂತೆ ನಿರ್ದೇಶಿಸಬಹುದು ಮತ್ತು ಆ ತರುವಾಯ ಅಂಥ ಅಪೀಲನ್ನು, ಅಪೀಲನ್ನು ತಡೆ ಹಿಡಿದಿದ್ದ ಪ್ರಾಧಿಕಾರಿಯ ಟಿಪ್ಪಣಿ ಮತ್ತು ಸಂಬಂಧಪಟ್ಟ ದಾಖಲೆಗಳ ಸಹಿತ ಆ ಪ್ರಾಧಿಕಾರಿಗೆ ರವಾನಿಸತಕ್ಕದ್ದು.

**25. ಅಪೀಲುಗಳ ಪರಿಶೀಲನೆ:-**

(1) ಅಮಾನತ್ತು ಆದೇಶದ ವಿರುದ್ಧ ಸಲ್ಲಿಸಿದ ಅಪೀಲಿನ ಸಂದರ್ಭದಲ್ಲಿ, ಅಪೀಲು ಪ್ರಾಧಿಕಾರಿಯು, 10ನೇ ನಿಯಮದ ಉಪಬಂಧಗಳನ್ನು ಮತ್ತು ಪ್ರಕರಣದ ಸಂದರ್ಭ-ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು ಅಮಾನತ್ತಿನ ಆದೇಶವು ಸಮರ್ಥನೀಯವೇ ಅಥವಾ ಅಲ್ಲವೇ ಎಂದು ಪರಿಶೀಲಿಸತಕ್ಕದ್ದು ಮತ್ತು ಆ ಆದೇಶವನ್ನು ತದನುಸಾರವಾಗಿ ಸ್ಥಿರೀಕರಿಸತಕ್ಕದ್ದು ಅಥವಾ ರದ್ದುಗೊಳಿಸತಕ್ಕದ್ದು.

(2) 8ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸಿರುವ ಆದೇಶದ ವಿರುದ್ಧ ಸಲ್ಲಿಸಿದ ಅಪೀಲಿನ ಸಂದರ್ಭದಲ್ಲಿ, ಅಪೀಲು ಪ್ರಾಧಿಕಾರಿಯು:-

(ಎ) ಈ ನಿಯಮಗಳಲ್ಲಿ ಗೊತ್ತುಪಡಿಸಿದ ಕಾರ್ಯವಿಧಾನವನ್ನು ಪಾಲಿಸಲಾಗಿದೆಯೇ, ಇಲ್ಲವೇ ಎಂಬುದನ್ನು ಮತ್ತು ಪಾಲಿಸಿರದಿದ್ದರೆ, ಹಾಗೆ ಪಾಲಿಸಿರದಿರುವುದರ ಪರಿಣಾಮವಾಗಿ ಸಂವಿಧಾನದ ಯಾವುದೇ ಉಪಬಂಧದ ಉಲ್ಲಂಘನೆಯಾಗಿದೆಯೇ ಅಥವಾ ನ್ಯಾಯ ವಿಫಲತೆಯಾಗಿದೆಯೇ ಎಂಬುದನ್ನು;

(ಬಿ) ನಿರ್ಣಯಗಳು ಸಮರ್ಥನೀಯವಾಗಿವೆಯೇ ಎಂಬುದನ್ನು; ಮತ್ತು

(ಸಿ) ವಿಧಿಸಿದ ದಂಡನೆಯು ಅತಿಯಾದುದಾಗಿದೆಯೇ, ಸಾಕಷ್ಟಾಗಿದೆಯೇ ಅಥವಾ ಸಾಕಷ್ಟಿಲ್ಲವೇ ಎಂಬುದನ್ನು

-ಪರಿಶೀಲಿಸತಕ್ಕದ್ದು ಮತ್ತು ಆ ಪ್ರಕರಣದಲ್ಲಿ ಆಯೋಗದ ಜೊತೆಗೆ ಸಮಾಲೋಚನೆ ಅವಶ್ಯವಿದ್ದರೆ, ಅಂಥ ಸಮಾಲೋಚನೆ ನಡೆಸಿದ ತರುವಾಯ;-

(i) ದಂಡನೆಯನ್ನು ತಳ್ಳಿಹಾಕಿರುವ, ಕಡಿಮೆ ಮಾಡಿರುವ, ಸ್ಥಿರೀಕರಿಸಿರುವ ಅಥವಾ ಹೆಚ್ಚಿಸಿರುವ; ಅಥವಾ

(ii) ದಂಡನೆಯನ್ನು ವಿಧಿಸಿದಂಥ ಪ್ರಾಧಿಕಾರಿಗೆ ಅಥವಾ ಆ ಪ್ರಕರಣದ ಸಂಧರ್ಭ ಸನ್ನಿವೇಶಗಳಲ್ಲಿ ತಾನು ಸೂಕ್ತವೆಂದು ಭಾವಿಸುವಂಥ ನಿರ್ದೇಶನದ ಸಹಿತ ಇತರ ಯಾರೇ ಪ್ರಾಧಿಕಾರಿಗೆ ಪ್ರಕರಣವನ್ನು ಹಿಂದಕ್ಕೆ ಕಳುಹಿಸುವ

-ಆದೇಶಗಳನ್ನು ಹೊರಡಿಸಬಹುದು.

ಪರಂತು:-

(i) ಅಪೀಲು ಪ್ರಾಧಿಕಾರಿಯು, ಅಂಥ ಪ್ರಾಧಿಕಾರಿಯು ಅಥವಾ ಯಾವ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ಆದೇಶವನ್ನು ಮಾಡಿದ ಪ್ರಾಧಿಕಾರಿಯು ಅಂಥ ದಂಡನೆಯನ್ನು ವಿಧಿಸಲು ಸಕ್ಷಮನಾಗಿದ್ದ ಹೊರತು, ಯಾವುದೇ ಹೆಚ್ಚಿಸಿದ ದಂಡನೆಯನ್ನು ವಿಧಿಸತಕ್ಕದ್ದಲ್ಲ;

(ii) ಹೆಚ್ಚಿಸಿದ ದಂಡನೆಯನ್ನು ವಿಧಿಸಿರುವುದರ ವಿರುದ್ಧ ಅಪೀಲುದಾರನು ಮನವಿಯನ್ನು ಸಲ್ಲಿಸಲು ಇಚ್ಛಿಸಿದರೆ, ಅಂಥ ಯಾವುದೇ ಮನವಿಯನ್ನು ಸಲ್ಲಿಸಲು ಅವನಿಗೆ ಅವಕಾಶವನ್ನು ಕೊಟ್ಟ ಹೊರತು, ಹೆಚ್ಚಿಸಿದ ದಂಡನೆಯನ್ನು ವಿಧಿಸುವ ಆದೇಶವನ್ನು ಹೊರಡಿಸತಕ್ಕದ್ದಲ್ಲ; ಮತ್ತು

(iii) ಅಪೀಲು ಪ್ರಾಧಿಕಾರಿಯು ವಿಧಿಸಲು ಪ್ರಸ್ತಾವಿಸಿರುವ ಹೆಚ್ಚಿಸಿದ ದಂಡನೆಯು 8ನೇ ನಿಯಮದ (v) ರಿಂದ (viii) ರವರಿಗೆ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಒಂದು ದಂಡನೆಯಾಗಿದ್ದರೆ ಮತ್ತು 11ನೇ ನಿಯಮದ ಮೇರೆಗೆ ವಿಚಾರಣೆಯನ್ನು ಈಗಾಗಲೇ ಆ ಪ್ರಕರಣದಲ್ಲಿ ನಡೆಸಿರದಿದ್ದರೆ, ಅಪೀಲು ಪ್ರಾಧಿಕಾರಿಯು, 14ನೇ ನಿಯಮದ ಉಪಬಂಧಗಳಿಗೊಳಪಟ್ಟು, ಅಂಥ ವಿಚಾರಣೆಯನ್ನು ತಾನೇ ಸ್ವತಃ ಮಾಡಬಹುದು ಅಥವಾ ಅಂಥ ವಿಚಾರಣೆಯನ್ನು ಮಾಡಲು ನಿರ್ದೇಶಿಸಬಹುದು ಮತ್ತು ಆ ತರುವಾಯ ಅಂಥ ವಿಚಾರಣೆಯ ವ್ಯವಹರಣೆಗಳನ್ನು ಪರಿಶೀಲಿಸಿದ ಮೇಲೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶಗಳನ್ನು ಹೊರಡಿಸಬಹುದು.

(3) 18ನೇ ನಿಯಮ (ಬಿ) ಮತ್ತು (ಸಿ) ಖಂಡಗಳಲ್ಲಿ ಅಥವಾ 19ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಆದೇಶದ ವಿರುದ್ಧ ಸಲ್ಲಿಸಿದ ಅಪೀಲಿನ ಸಂದರ್ಭದಲ್ಲಿ, ಅಪೀಲು ಪ್ರಾಧಿಕಾರಿಯು ಪ್ರಕರಣದ ಎಲ್ಲ ಸನ್ನಿವೇಶ ಸಂದರ್ಭಗಳನ್ನು ಪರಿಶೀಲಿಸತಕ್ಕದ್ದು ಮತ್ತು ನ್ಯಾಯಸಮ್ಮತ ಹಾಗೂ ನಿಷ್ಪಕ್ಷಪಾತವಾದುದೆಂದು ಅವನು ಭಾವಿಸಬಹುದಾದಂಥ ಆದೇಶಗಳನ್ನು ಹೊರಡಿಸತಕ್ಕದ್ದು.

## ಭಾಗ-VI
## ಪುನರವಲೋಕನ

**[1][26. ಪುನರವಲೋಕನ:-**

ರಾಜ್ಯ ಸರ್ಕಾರವು, ಪ್ರಕರಣದ ದಾಖಲೆಗಳನ್ನು ತರಿಸಿಕೊಂಡು ತರುವಾಯ, ಯಾವ ಆದೇಶವನ್ನು ಪುನರವಲೋಕನ ಮಾಡಲಾಗುತ್ತಿದೆಯೋ ಆ ಆದೇಶವನ್ನು ಹೊರಡಿಸಿದ ಕಾಲದಲ್ಲಿ ಹಾಜರುಪಡಿಸಲಾಗದಿದ್ದ ಅಥವಾ ಲಭ್ಯವಿರದಿದ್ದ ಮತ್ತು ಪ್ರಕರಣದ ಸ್ವರೂಪವನ್ನು ಬದಲಾವಣೆ

ಮಾಡುವ ಪರಿಣಾಮವುಳ್ಳ ಯಾವುದೇ ಹೊಸ ವಿಷಯ ಸಾಮಗ್ರಿಯು ಅಥವಾ ಸಾಕ್ಷ್ಯವು ತನ್ನ ಗಮನಕ್ಕೆ ಬಂದಾಗ ಅಥವಾ ಅದನ್ನು ತನ್ನ ಗಮನಕ್ಕೆ ತಂದಾಗ, ಈ ನಿಯಮಗಳ ಮೇರೆಗೆ ಹೊರಿಡಿಸಿದ ಯಾವುದೇ ಆದೇಶವನ್ನು ಯಾವುದೇ ಕಾಲದಲ್ಲಿ ತಾನಾಗಿಯೇ ಅಥವಾ ಅನ್ಯಥಾ, ಪುನರವಲೋಕನ ಮಾಡಬಹುದು [2][ಅಥವಾ ಯಾವುದೇ ದಂಡನೆಯನ್ನು ವಿಧಿಸಿರುವ ಆದೇಶವನ್ನು ಜಾರಿಗೊಳಿಸಲಾಗದ್ದೆಂದು ಅಥವಾ ದಂಡನೆಯನ್ನು ವಿಧಿಸಿರುವ ಆದೇಶವು ಕಾನೂನುಬದ್ಧವಾಗಿ ಸಿಂಧುವಾಗಿಲ್ಲವೆಂದು ತಾನು ಅಭಿಪ್ರಾಯಪಟ್ಟರೆ][2];-

(ಎ) ಆ ಆದೇಶವನ್ನು ಸ್ಥಿರೀಕರಿಸಬಹುದು, ಮಾರ್ಪಾಡುಗೊಳಿಸಬಹುದು ಅಥವಾ ತಳ್ಳಿಹಾಕಬಹುದು;

(ಬಿ) ಯಾವುದೇ ದಂಡನೆಯನ್ನು ವಿಧಿಸಬಹುದು ಅಥವಾ ಆ ಆದೇಶ ಮೂಲಕ ವಿಧಿಸಿದ ದಂಡನೆಯನ್ನು ತಳ್ಳಿಹಾಕಬಹುದು. ಕಡಿಮೆ ಮಾಡಬಹುದು, ಸ್ಥಿರೀಕರಿಸಬಹುದು ಅಥವಾ ಹೆಚ್ಚಿಸಬಹುದು;

(ಸಿ) ಯಾವ ಪ್ರಾಧಿಕಾರಿಯು ಆದೇಶವನ್ನು ಮಾಡಿರುವನೋ ಆ ಪ್ರಾಧಿಕಾರಿಗೆ ಅಥವಾ ಪ್ರಕರಣದ ಸಂದರ್ಭ ಸನ್ನಿವೇಶಗಳಲ್ಲಿ, ತಾನು ಯುಕ್ತವೆಂದು ಭಾವಿಸುವಂಥ ಮುಂದಿನ ಕ್ರಮ ಕೈಗೊಳ್ಳುವಂತೆ ಅಥವಾ ವಿಚಾರಣೆ ನಡೆಸುವಂತೆ ನಿರ್ದೇಶಿಸಿ ಆ ಪ್ರಕರಣವನ್ನು ಇತರ ಯಾರೇ ಪ್ರಾಧಿಕಾರಿಗೆ ವಾಪಸ್ಸು ಕಳಿಸಿಕೊಡಬಹುದು; ಅಥವಾ

(ಡಿ) ತಾನು ಸೂಕ್ತವೆಂದು ಭಾವಿಸುವಂಥ ಇತರೆ ಆದೇಶಗಳನ್ನು ಹೊರಡಿಸಬಹುದು;

ಪರಂತು, ಸಂಬಂಧಪಟ್ಟ ಸೇವೆಯ ಸದಸ್ಯನಿಗೆ ಉದ್ದೇಶಿತ ದಂಡನೆಯ ವಿರುದ್ಧ ಮನವಿಯನ್ನು ಸಲ್ಲಿಸಲು ಯುಕ್ತ ಅವಕಾಶವನ್ನು ನೀಡಿದ್ದ ಹೊರತು, ರಾಜ್ಯ ಸರ್ಕಾರವು ಯಾವುದೇ ದಂಡನೆಯನ್ನು ವಿಧಿಸುವ ಅಥವಾ ಹೆಚ್ಚಿಸುವ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ ಅಥವಾ 8ನೇ ನಿಯಮದ (v) ರಿಂದ (viii)ರ ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ಕಠಿಣ ದಂಡನೆಯನ್ನು ವಿಧಿಸಲು ಅಥವಾ ಯಾವ ಆದೇಶವನ್ನು ಪುನರವಲೋಕನ ಮಾಡಬೇಕೆಂದು ಕೋರಲಾಗಿದೆಯೋ ಆ ಆದೇಶದಲ್ಲಿ ವಿಧಿಸಿರುವ ಲಘು ದಂಡನೆಯನ್ನು ಯಾವುದೇ ಕಠಿಣ ದಂಡನೆಗೆ ಹೆಚ್ಚಿಸಲು ಉದ್ದೇಶಿಸಿದ್ದರೆ ಮತ್ತು 11ನೇ ನಿಯಮದ ಮೇರೆಗೆ ಈ ಪ್ರಕರಣದ ವಿಚಾರಣೆಯನ್ನು ಈಗಾಗಲೇ ನಡೆಸಿರದಿದ್ದರೆ, 14ನೇ ನಿಯಮದ ಉಪಬಂಧಗಳಿಗೊಳಪಟ್ಟು 11ನೇ ನಿಯಮದಲ್ಲಿ ಹೇಳಲಾದ ರೀತಿಯಲ್ಲಿ ವಿಚಾರಣೆಯನ್ನು ಮಾಡಿದ ತರುವಾಯ ಹೊರತು, ಮತ್ತು ಆಯೋಗದೊಂದಿಗೆ ಸಮಾಲೋಚನೆ ನಡೆಸಿದ ತರುವಾಯ ಹೊರತು, ಅಂಥ ದಂಡನೆಯನ್ನು ವಿಧಿಸತಕ್ಕದ್ದಲ್ಲ;

ಮತ್ತೂ ಪರಂತು, ಶಿಸ್ತು ವ್ಯವಹರಣೆಯಲ್ಲಿ, 8ನೇ ನಿಯಮದ (v) ರಿಂದ (viii) ವರಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿ ಯಾವುದೇ ದಂಡನೆಯನ್ನು ವಿಧಿಸಿರುವ ಮತ್ತು ಯಾವ ಆದೇಶಕ್ಕೆ ಸಂಬಂಧಿಸಿದಂತೆ ಅಪೀಲನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆಯೋ ಆ ಆದೇಶವನ್ನು ಪುನರವಲೋಕನ ಮಾಡುವಂತೆ ಕೋರಿ ಸರ್ಕಾರಿ ನೌಕರನು ಯಾವುದೇ ಅರ್ಜಿ ಸಲ್ಲಿಸಲು ಅವಕಾಶವಿರತಕ್ಕದ್ದಲ್ಲ.][1]

..........................................................................................................................................

1. ಅಧಿಸೂಚನೆ ಸಂಖ್ಯೆ: ಡಿಪಿಎಆರ್ 8 ಎಸ್‌ಡಿಇ 93, ದಿನಾಂಕ: 22.12.95ರ ಮೂಲಕ (26.12.1995 ರಿಂದ ಜಾರಿಗೆ ಬರುವಂತೆ) ಪ್ರತಿಯೋಜಿಸಲಾಗಿದೆ.
2. ಅಧಿಸೂಚನೆ ಸಂಖ್ಯೆ ಡಿಪಿಎಆರ್ 13 ಎಸ್‌ಡಿಇ 97, ದಿನಾಂಕ: 01.09.98ರ ಮೂಲಕ 26.12.95 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ (ಕೆಜಿಡಿ 07.09.98).

**27. ಶಿಸ್ತು ಪ್ರಕರಣಗಳಲ್ಲಿ ಆದೇಶಗಳ ಪುನರಲೋಕನ:-**

8ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸಿರುವ ಆದೇಶದ ವಿರುದ್ಧದ ಅಪೀಲನ್ನು ಯಾವ ಪ್ರಾಧಿಕಾರಿಗೆ ಸಲ್ಲಿಸಬಹುದೋ ಆ ಪ್ರಾಧಿಕಾರಿಯು, ತಾನಾಗಿಯೇ ಅಥವಾ ಅನ್ಯಥಾ, ಯಾವ ಪ್ರಕರಣದಲ್ಲಿ ಶಿಸ್ತು ವ್ಯವಹರಣೆಯನ್ನು ನಡೆಸಲಾಯಿತೋ ಆ ಪ್ರಕರಣದ ದಾಖಲೆಗಳನ್ನು ತರಿಸಿಕೊಳ್ಳಬಹುದು ಮತ್ತು ಅಂಥ ಪ್ರಕರಣದಲ್ಲಿ ಹೊರಡಿಸಿದ ಯಾವುದೇ ಆದೇಶವನ್ನು ಪುನರವಲೋಕಿಸಬಹುದು ಮತ್ತು ಆಯೋಗದೊಡನೆ ಸಮಾಲೋಚನೆಯು ಅವಶ್ಯಕವಿರುವಲ್ಲಿ, ಅಂಥ ಸಮಾಲೋಚನೆಯನ್ನು ನಡೆಸಿದ ತರುವಾಯ, ಸರ್ಕಾರಿ ನೌಕರನು ಅಂಥ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಿದ್ದರೆ ಹೇಗೋ ಹಾಗೆ, ತಾನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶಗಳನ್ನು ಹೊರಡಿಸಬಹುದು.

ಪರಂತು, ಪುನರವಲೋಕನ ಮಾಡಬೇಕಾದ ಆದೇಶದ ದಿನಾಂಕದಿಂದ ಆರು ತಿಂಗಳಿಗಿಂತ ಹೆಚ್ಚಿನ ಅವಧಿಯ ತರುವಾಯ ಈ ನಿಯಮದ ಮೇರೆಗೆ ಯಾವುದೇ ಕ್ರಮವನ್ನು ಪ್ರಾರಂಭಿಸತಕ್ಕದ್ದಲ್ಲ.

## ಭಾಗ-VII
## ಸಂಕೀರ್ಣ

**28. ನ್ಯಾಯವಾದಿ ಹಾಜರಾತಿ:-**

ಈ ನಿಯಮಗಳಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಉಳಿದು, ಯಾರೇ ನ್ಯಾಯವಾದಿಗೆ ಅಥವಾ ಏಜೆಂಟನಿಗೆ ಈ ನಿಯಮಗಳ ಮೇರೆಗಿನ ಯಾವುದೇ ವ್ಯವಹರಣೆಗಳಲ್ಲಿ ಹಾಜರಾಗಲು ಅನುಮತಿಸತಕ್ಕದ್ದಲ್ಲ.

[1][**28ಎ. ಆದೇಶ, ನೋಟೀಸುಗಳು, ಮುಂತಾದವುಗಳ ಜಾರಿ:-**

(1) ಈ ನಿಯಮಗಳ ಮೇರೆಗೆ ಮಾಡಿದ ಅಥವಾ ಹೊರಡಿಸಿದ ಪ್ರತಿಯೊಂದು ಆದೇಶವನ್ನು, ನೋಟೀಸನ್ನು ಮತ್ತು ಇತರ ಪ್ರೋಸೆಸನ್ನು ಸಂಬಂಧಪಟ್ಟ ಸರ್ಕಾರಿ ನೌಕರನಿಗೆ ಖುದ್ದಾಗಿ ಜಾರಿ ಮಾಡತಕ್ಕದ್ದು ಅಥವಾ ಅವನಿಗೆ ನೋಂದಾಯಿತ ಅಂಚೆ ಮೂಲಕ ಕಳಿಸಿಕೊಡತಕ್ಕದ್ದು.

(2) ಸರ್ಕಾರಿ ನೌಕರನು ಅಂಥ ಆದೇಶವನ್ನು, ನೋಟೀಸನ್ನು ಅಥವಾ ಇತರ ಪ್ರೋಸೆಸನ್ನು ಸ್ವೀಕರಿಸಲು ನಿರಾಕರಿಸಿದಲ್ಲಿ ಅಥವಾ ಅವುಗಳ ಜಾರಿಯನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಕಾಣಿಸಿಕೊಳ್ಳದಿರುವ ಸಂದರ್ಭದಲ್ಲಿ, ಅದರ ಪ್ರತಿಯನ್ನು ಶಿಸ್ತು ಪ್ರಾಧಿಕಾರಿಯ ಅಥವಾ ವಿಚಾರಣಾ ಪ್ರಾಧಿಕಾರಿಯ ಕಛೇರಿಯ ಸೂಚನಾ ಫಲಕದ ಮೇಲೆ ಮತ್ತು ಅವನು ಈ ಹಿಂದೆ ವಾಸವಾಗಿದ್ದನೆಂದು ತಿಳಿದುಬಂದ ಮನೆ ಯಾವುದಾದರೂ ಇದ್ದರೆ, ಅದರ ಯಾವುದೇ ಎದ್ದುಕಾಣುವ ಸ್ಥಳದಲ್ಲಿ ಅಂಟಿಸುವ ಮೂಲಕ, ಅಥವಾ ರಾಜ್ಯದಲ್ಲಿ ಅಧಿಕ ಪ್ರಸಾರವುಳ್ಳ ಎರಡು ದೈನದಿಂದ ವೃತ್ತಪತ್ರಿಕೆಗಳಲ್ಲಿ ಪ್ರಕಟಿಸುವ ಮೂಲಕ ಜಾರಿ ಮಾಡಬಹುದು.

**28ಬಿ. ಕಾಲಮಿತಿಯನ್ನು ಸಡಿಲಿಸಲು ಮತ್ತು ವಿಳಂಬವನ್ನು ಮನ್ನಾ ಮಾಡಲು ಅಧಿಕಾರ:-**

ಈ ನಿಯಮಗಳಲ್ಲಿ ಅನ್ಯಥಾ ವ್ಯಕ್ತವಾಗಿ ಉಪಬಂಧಿಸಿರುವುದನ್ನುಳಿದು, ಈ ನಿಯಮಗಳ ಮೇರೆಗೆ ಯಾವುದೇ ಆದೇಶವನ್ನು ಮಾಡಲು ಸಕ್ಷಮನಾಗಿರುವ ಪ್ರಾಧಿಕಾರಿಯು, ಯುಕ್ತ ಮತ್ತು ಸಾಕಷ್ಟು ಕಾರಣಗಳಿಗಾಗಿ ಅಥವಾ ಸಾಕಷ್ಟು ಕಾರಣವನ್ನು ತೋರಿಸಿದರೆ, ಈ ನಿಯಮಗಳ ಮೇರೆಗೆ ಮಾಡುವಂತೆ ಅಗತ್ಯಪಡಿಸಿದ ಯಾವುದೇ ಕಾರ್ಯದ ಬಗ್ಗೆ ನಿರ್ದಿಷ್ಟಪಡಿಸಲಾದ ಅವಧಿಯನ್ನು ವಿಸ್ತರಿಸಬಹುದು ಅಥವಾ ಯಾವುದೇ ವಿಳಂಬವನ್ನು ಮನ್ನಾ ಮಾಡಬಹುದು.

**28ಸಿ. ಆಯೋಗದ ಸಲಹೆಯ ಪ್ರತಿಯನ್ನು ಒದಗಿಸುವುದು:-**

ಈ ನಿಯಮಗಳಲ್ಲಿ ಉಪಬಂಧಿಸಲಾದಂತೆ ಆಯೋಗದೊಡನೆ ಸಮಾಲೋಚನೆ ಮಾಡಿದಾಗಲೆಲ್ಲ, ಆಯೋಗದ ಸಲಹೆಯ ಪ್ರತಿಯನ್ನು ಮತ್ತು ಅಂಥ ಸಲಹೆಯನ್ನು ಒಪ್ಪದಿರುವ ಸಂದರ್ಭದಲ್ಲಿ, ಹಾಗೆ ಒಪ್ಪದಿರುವುದಕ್ಕೆ ಕಾರಣಗಳು ಸಂಕ್ಷಿಪ್ತ ವಿವರಣೆಯನ್ನು, ಆ ಪ್ರಕರಣದಲ್ಲಿ ಹೊರಡಿಸಿದ ಆದೇಶದ ಪ್ರತಿಯ ಸಹಿತ ಆ ಆದೇಶವನ್ನು ಮಾಡಿದ ಪ್ರಾಧಿಕಾರಿಯು ಸಂಬಂಧಪಟ್ಟ ಸರ್ಕಾರಿ ನೌಕರನಿಗೆ ಒದಗಿಸತಕ್ಕದ್ದು.

[2][ಪರಂತು, ಶಿಸ್ತು ಪ್ರಾಧಿಕಾರಿಯು ಸರ್ಕಾರಿ ನೌಕರನನ್ನು ದೋಷಮುಕ್ತನನ್ನಾಗಿ ಮಾಡಿದ್ದರೆ ಅಥವಾ ಅಂತಹ ದಸ್ತಾವೇಜುಗಳನ್ನು ಸರ್ಕಾರಿ ನೌಕರನಿಗೆ ಈಗಾಗಲೇ ಒದಗಿಸಿದ್ದರೆ, ಸದರಿ ದಸ್ತಾವೇಜುಗಳ ಪ್ರತಿಗಳನ್ನು ಒದಗಿಸುವುದು ಅವಶ್ಯಕವಾಗಿರತಕ್ಕದ್ದಲ್ಲ.][2]

**28ಡಿ. ಕರ್ನಾಟಕ ನ್ಯಾಯಾಂಗ ಸೇವೆ, ಮುಂತಾದವುಗಳ ಸದಸ್ಯರಿಗೆ ಸಂಬಂಧಿಸಿದ ಉಪಬಂಧ:-**

ಈ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಈ ನಿಯಮಗಳಲ್ಲಿ ರಾಜ್ಯಪಾಲರಿಗೆ ಅಥವಾ ಸರ್ಕಾರಕ್ಕೆ ಮಾಡಿದ ಉಲ್ಲೇಖಗಳನ್ನು, ಭಾರತ ಸಂವಿಧಾನದ 235ನೇ ಅನುಚ್ಛೇದದ ಮೇರೆಗೆ ಕರ್ನಾಟಕ ಉಚ್ಚ ನ್ಯಾಯಾಲಯವು ಜಿಲ್ಲಾ ನ್ಯಾಯಾಲಯಗಳ ಮತ್ತು ಅವುಗಳಿಗೆ ಅಧೀನವಾಗಿರುವ ನ್ಯಾಯಾಲಯಗಳ ಮೇಲೆ ಹೊಂದಿರುವ ನಿಯಂತ್ರಣಕ್ಕೆ ಅವು ಸಂಬಂಧಪಡುವಷ್ಟರ ಮಟ್ಟಿಗೆ, ಕರ್ನಾಟಕ ಉಚ್ಚ ನ್ಯಾಯಲಯಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು;

ಪರಂತು, ಈ ನಿಯಮದಲ್ಲಿರುವುದು ಯಾವುದೂ, ನ್ಯಾಯಾಂಗ ಸೇವೆಯ ಸದಸ್ಯರಿಗೆ ಸಂಬಂಧಿಸಿದಂತೆ ರಾಜ್ಯಪಾಲರು ಭಾರತ ಸಂವಿಧಾನದ ಮೇರೆಗೆ ಹೊಂದಿರುವ ಅಧಿಕಾರಗಳಿಗೆ

ಅಥವಾ ಒಬ್ಬ ವ್ಯಕ್ತಿಯು ತನ್ನ ಸೇವೆ ಷರತ್ತುಗಳ ವಿನಿಯಮನಕ್ಕೆ ಸಂಬಂಧಿಸಿದ ಕಾನೂನಿನ ಮೇರೆಗೆ ಹೊಂದಿರಬಹುದಾದಂಥ ಅಪೀಲಿನ ಹಕ್ಕಿಗೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.]

.................................................................................................................................................

1. ಅಧಿಸೂಚನೆ ಸಂಖ್ಯೆ ಜಿಎಡಿ 28 ಎಸ್‌ಎಸ್‌ಆರ್ 69, ದಿನಾಂಕ; 12.12.73 ಕೆಜಿಡಿ 24.1.74 ರ ಮೂಲಕ ಸೇರಿಸಲಾಗಿದೆ.
2. ಅಧಿಸೂಚನೆ ಸಂಖ್ಯೆ: ಡಿಪಿಎಆರ್ 34 ಎಸ್‌ಎಸ್‌ಆರ್ 76, ದಿನಾಂಕ: 07.07.76ರ ಮೂಲಕ ಸೇರಿಸಲಾಗಿದೆ. (ಕೆಜಿಡಿ 22.7.76)

**29. ನಿರಸನ ಮತ್ತು ಉಳಿಸುವಿಕೆ:-**

ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲುಗಳು) ನಿಯಮಗಳನ್ನು ಮತ್ತು ಗೃಹ ಇಲಾಖೆ ಸಂಖ್ಯೆ: ಎಫ್ 9-19-90 ಇಎಸ್‌ಟಿಎಸ್, ದಿನಾಂಕ ಫೆಬ್ರುವರಿ 27, 1932ರಲ್ಲಿನ ಭಾರತ ಸರ್ಕಾರದ ಅಧಿಸೂಚನೆಯಲ್ಲಿ ಒಳಗೊಂಡಿರುವ ನಿಯಮಗಳನ್ನು, ಹೈದರಾಬಾದು ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳನ್ನು, ಮುಂಬಯಿ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳನ್ನು, ಮದ್ರಾಸು ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳನ್ನು ಮತ್ತು ಸಾಮಾನ್ಯ ಸುತ್ತೋಲೆಗಳು ಮತ್ತು ಸ್ಥಾಯೀ ಆದೇಶಗಳ ಮೈಸೂರು ಕೈಪಿಡಿಯ X ನೇ ಅಧ್ಯಾಯದ ಭಾಗ-I ರಲ್ಲಿ ಒಳಗೊಂಡಿರುವ ನಿಯಮಗಳನ್ನು,1955ರ ಮೈಸೂರು ಸಿವಿಲ್ ಸೇವಾ (ವರ್ಗೀಕರಣ) ನಿಯಮಗಳನ್ನು, ಮತ್ತು ಅಂಥ ಯಾವುವೇ ನಿಯಮಗಳ ಅಡಿಯಲ್ಲಿ ಅಥವಾ ಸಂವಿಧಾನದ 309ನೇ ಅನುಚ್ಛೇದದ ಪರಂತುಕದ ಮೇರೆಗೆ ಹೊರಡಿಸಲಾದ ಯಾವುವೇ ಅಧಿಸೂಚನೆಗಳನ್ನು ಮತ್ತು ನಿಯಮಗಳನ್ನು ಮತ್ತು ಮಾಡಲಾದ ಆದೇಶಗಳನ್ನು ಮತ್ತು ಯಾರೇ ಸಕ್ಷಮ ಪ್ರಾಧಿಕಾರಿಯು ಮಾಡಿದ ಇತರ ಎಲ್ಲ ನಿಯಮಗಳನ್ನು ಮತ್ತು ಆದೇಶಗಳನ್ನು, ಯಾರಿಗೆ ಈ ನಿಯಮಗಳು ಅನ್ವಯವಾಗುವುವೋ ಆ ವ್ಯಕ್ತಿಗಳಿಗೆ ಅವು ಅನ್ವಯವಾಗುವಷ್ಟರ ಮಟ್ಟಿಗೆ ಮತ್ತು ಅನುಸೂಚಿಗಳಲ್ಲಿ ನಿರ್ದಿಷ್ಟಪಡಿಸಿದ ರಾಜ್ಯ ಸಿವಿಲ್ ಸೇವೆಯ ವರ್ಗೀಕರಣಕ್ಕೆ ಅವು ಸಂಬಂಧಪಡುವಷ್ಟರ ಮಟ್ಟಿಗೆ ಅಥವಾ ನೇಮಕಗಳನ್ನು ಮಾಡಲು, ದಂಡನೆಗಳನ್ನು ವಿಧಿಸಲು ಅಥವಾ ಅಪೀಲುಗಳನ್ನು ಅಂಗೀಕರಿಸಲು ಅಧಿಕಾರಗಳನ್ನು ಪ್ರಧಾನ ಮಾಡುವಷ್ಟರ ಮಟ್ಟಿಗೆ, ಈ ಮೂಲಕ ನಿರಸನಗೊಳಿಸಲಾಗಿದೆ;

ಪರಂತು:-

(ಎ) ಅಂಥ ನಿರಸನಗಳು ಸದರಿ ನಿಯಮಗಳನ್ನು, ಅಧಿಸೂಚನೆಗಳನ್ನು ಮತ್ತು ಆದೇಶಗಳನ್ನು ಈ ಹಿಂದೆ ಜಾರಿಗೊಳಿಸಿರುವುದನ್ನು ಅಥವಾ ಆ ಮೇರೆಗೆ ಕೈಗೊಂಡ ಯಾವುದೇ ಕಾರ್ಯಕ್ಕೆ ಅಥವಾ ಕೈಗೊಂಡ ಯಾವುದೇ ಕ್ರಮಕ್ಕೆ ಬಾಧಕ ಉಂಟುಮಾಡತಕ್ಕದ್ದಲ್ಲ;

(ಬಿ) ಈ ನಿಯಮಗಳ ಪ್ರಾರಂಭದಲ್ಲಿ ಇತ್ಯರ್ಥದಲ್ಲಿದ್ದ ಸದರಿ ನಿಯಮಗಳ, ಅಧಿಸೂಚನೆಗಳ ಅಥವಾ ಆದೇಶಗಳ ಮೇರೆಗಿನ ಯಾವುವೇ ವ್ಯವಹರಣೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಈ ನಿಯಮಗಳ ಉಪಬಂಧಗಳಿಗನುಸಾರವಾಗಿ ಮುಂದುವರಿಸತಕ್ಕದ್ದು ಮತ್ತು ವಿಲೆ ಮಾಡತಕ್ಕದ್ದು;

(2) ಈ ನಿಯಮಗಳು ಯಾವ ವ್ಯಕ್ತಿಗೆ ಅನ್ವಯವಾಗುತ್ತವೆಯೋ ಆ ಯಾರೇ ವ್ಯಕ್ತಿಯು, ಈ ನಿಯಮಗಳ ಪ್ರಾರಂಭಕ್ಕೆ ಮುಂಚೆ ಹೊರಡಿಸಿದ ಯಾವುದೇ ಆದೇಶಕ್ಕೆ ಸಂಬಂಧಪಟ್ಟಂತೆ (1)ನೇ ಉಪನಿಯಮದ ಮೂಲಕ ನಿರಸಿತಗೊಂಡ ನಿಯಮಗಳ, ಅಧಿಸೂಚನೆಗಳ ಅಥವಾ ಆದೇಶಗಳ ಮೇರೆಗೆ ಅವನಿಗೆ ಪ್ರಾಪ್ತವಾಗಿದ್ದ ಅಪೀಲು ಮಾಡಿಕೊಳ್ಳುವ ಯಾವುದೇ ಹಕ್ಕಿನಿಂದ ವಂಚಿತನಾಗುವಂತೆ ಈ ನಿಯಮದಲ್ಲಿರುವುದಾವುದೂ ಜಾರಿಯಾಗತಕ್ಕದ್ದಲ್ಲ.

(3) ಈ ನಿಯಮಗಳ ಪ್ರಾರಂಭಕ್ಕೆ ಮುಂಚೆ ಮಾಡಿದ ಆದೇಶದ ವಿರುದ್ಧ ಅಂಥ ಪ್ರಾರಂಭದಲ್ಲಿ ಇತ್ಯರ್ಥದಲ್ಲಿರುವ ಅಥವಾ ಅ ತರುವಾಯ ಸಲ್ಲಿಸಿದ ಅಪೀಲನ್ನು ಪರಿಶಿಲಿಸತಕ್ಕದ್ದು ಮತ್ತು ಅದರ ಮೇಲೆ ಆದೇಶಗಳನ್ನು ಈ ನಿಯಮಗಳಿಗನುಸಾರವಾಗಿ ಹೊರಡಿಸತಕ್ಕದ್ದು.